ಕೋಳಿ ಸಾಕಣೆ ಕೈಪಿಡಿ

ಡಾ॥ ಜಿ ದೇವೇಗೌಡ
ಡಾ॥ ಬಿ ಎಸ್ ರಾಮಪ್ಪ
ಡಾ॥ ಎಂ ಸತ್ಯನಾರಾಯಣರಾವ್



1981

ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಪ್ರಕಟಣೆ–111

ಕೋಳಿ ಸಾಕಣೆ ಕೈಪಿಡಿ

ಡಾ| ಜಿ. ದೇವೇಗೌಡ
ಡಾ| ಬಿ. ಎಸ್. ರಾಮಪ್ಪ
ಡಾ| ಎಂ. ಸತ್ಯನಾರಾಯಣರಾವ್

1981

ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು–560 065

ಕೋಳಿ ಸಾಕಣೆ ಕೈಪಿಡಿ—(ಕೃಷಿ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ವಿಭಾಗ ದಿಂದ ಸಿದ್ಧಗೊಂಡು ಸಂವಹನ ಸಮಿತಿ ಪ್ರಕಾಶಿತ), ಪ್ರಥಮ ಮುದ್ರಣ 1981 ಪ್ರತಿಗಳು 1000, ಪುಟಗಳು viii+4+102, ಬೆಲೆ : ಸಾದಾ ಪ್ರತಿ ರೂ.10-00, ಕ್ಯಾಲಿಕೊ ಪ್ರತಿ ರೂ.20-00.

ಪ್ರಧಾನ ಸಂಪಾದನೆ

ಪ್ರಾ| ವೀ. ಚ. ಹಿತ್ತಲಮನಿ
ಕನ್ನಡ ಪ್ರಾಧ್ಯಾಪಕರು

ಸಹ ಸಂಪಾದನೆ

ಶ್ರೀಮತಿ ಸಿ. ಕೆ. ಕುಮುದಿನಿ
ಸಂಶೋಧನ ಸಹಾಯಕರು

ತಾಂತ್ರಿಕ ಪರಿಶೀಲನೆ

ಡಾ. ಎಂ. ಮಾದಯ್ಯ
ಸಹ ನಿರ್ದೇಶಕರು
ಕುಕ್ಕುಟ ವಿಭಾಗ
ಪಶುಸಂಗೋಪನ ಹಾಗೂ
ಪಶುವೈದ್ಯಕೀಯ ಇಲಾಖೆ
ಕರ್ನಾಟಕ ಸರ್ಕಾರ

ಕಲೆ

ಶ್ರೀ ವಿದ್ಯಾಧರಯ್ಯ
ಕಲಾವಿದರು

ಮುದ್ರಕರು

ಗ್ರಾಫಿಕ್ ಎಂಟರ್‌ಪ್ರೈಸಸ್
ಬೆಂಗಳೂರು-560 070

ಕುಲಪತಿಗಳ ಹಾರೈಕೆ

ಕನ್ನಡದಲ್ಲಿ ಕೃಷಿ ವಿಜ್ಞಾನ ಸಾಹಿತ್ಯದ ಎರಡನೆಯ ಘಟ್ಟದಲ್ಲಿ ನಾವಿಂದು ಇದ್ದೇವೆ. ಈಗಾಗಲೇ ನೂರಕ್ಕೆ ಮಿಕ್ಕಿ ಹೊತ್ತಗೆಗಳು ಪ್ರಕಟಗೊಂಡಿವೆ. ಪತ್ತಾರು ಎರಡನೆಯ ಮುದ್ರಣಗೊಳ್ಳುತ್ತಿವೆ. ಇದು ಈ ಗ್ರಂಥಗಳ ಉಪಯುಕ್ತತೆ ಹಾಗೂ ಜನಮೆಚ್ಚುಗೆಯ ದ್ಯೋತಕ.

ಕೃಷಿ ವಿಜ್ಞಾನಗಳು ಹಲವಾರು. ಅವುಗಳ ವ್ಯಾಪ್ತಿ ಅಪಾರ. ಅವುಗಳ ಮಾಹಿತಿ ಹೆಚ್ಚಿನದು. ಅವುಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ ಪಡೆದ ಜ್ಞಾನಸಂಪತ್ತು ಒಂದು ಮೇರು ಪರ್ವತ. ಅದರ ಪ್ರಯೋಜನ ನಾಡಿಗರಿಗೆ ಹಾಗೂ ನಾಡಿಗೆ ಸಂಪೂರ್ಣವಾಗಿ ಆದಾಗ, ದೇಶದಲ್ಲಿ ಪುಷ್ಟಿ-ತುಷ್ಟಿ, ಭದ್ರತೆ-ಭವ್ಯತೆ, ಸುಖ-ಶಾಂತಿಗಳು ನೆಲೆಗೊಳ್ಳುತ್ತವೆ. ಈ ದೆಸೆಯಲ್ಲಿ ಪ್ರಾದೇಶಿಕ ಭಾಷೆಗಳಲ್ಲಿ ಕೃಷಿಯ ಸಂದೇಶ ಹರಡಲನುವಾಗುವ ಪ್ರಯತ್ನಗಳು ದೇಶಸೇವೆಯ ಮಹತ್ ಕಾರ್ಯಗಳು.

ಒಂದು ದಶಕದ ಹಿಂದೆ ಮೊಳೆತ ಪೈರು, ಇಂದು ಹುಲುಸಾಗಿ ಬೆಳೆದಿದೆ. ಈ ಕಾರ್ಯದ ಮುಖ್ಯ ಹೇತುವಾದ ಕನ್ನಡ ಮಾಧ್ಯಮ ನನಸಾಗಲು ಈ ಬೆಳೆ ಏತಕ್ಕೂ ಸಾಲದು. ವಿಜ್ಞಾನದ ಒಂದೊಂದು ಪ್ರಕಾರಗಳಲ್ಲಿ ನೂರು ನೂರು ಪುಸ್ತಕಗಳು ಪ್ರಕಟವಾಗಬೇಕು. ಆ ದಿನದ ಮೇಲೆ ಕಣ್ಣಿಟ್ಟು ಸಂಬಂಧಿಸಿದವರೆಲ್ಲರೂ ಉತ್ಸಾಹದಿಂದ ಕಾರ್ಯ ಮುಂದುವರಿಸಬೇಕೆಂದು ನನ್ನ ಕಳಕಳಿಯ ಹಾರೈಕೆ.

ಈಗ ಪ್ರಕಟವಾಗುತ್ತಿರುವ **ಕೋಳಿ ಸಾಕಣೆ ಕೈಪಿಡಿ** ಈ ದಿಶೆಯಲ್ಲಿಯ ಮತ್ತೊಂದು ಹೆಜ್ಜೆ. ಇದರ ಉಪಯೋಗವನ್ನು ಸಂಬಂಧಪಟ್ಟವರೆಲ್ಲ ಮಾಡಿಕೊಳ್ಳಬೇಕು.

ನಾ. ಗು. ಹೇರೂರ
ಉಪಕುಲಪತಿಗಳು

ಗಾಂಧಿ ಕೃಷಿ ವಿಜ್ಞಾನ ಕೇಂದ್ರ
ಕೃಷಿ ವಿಶ್ವವಿದ್ಯಾನಿಲಯ
ಬೆಂಗಳೂರು-560065

ಸಂಪಾದಕರ ಮಾತು

ಕೃಷಿ ವಿಶ್ವವಿದ್ಯಾನಿಲಯವು 'ಭಾರತದಲ್ಲಿ ಕೋಳಿ ಸಾಕಣೆ' ಎಂಬ ಗ್ರಂಥವನ್ನು ಪ್ರಕಟಿಸಿದೆ. ಅದು ಡಾ| ಪಿ. ಎಂ. ಎನ್. ನಾಯ್ಡು ಅವರು ಬರೆದ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆ ಪ್ರಕಟಿಸಿದ ಇಂಗ್ಲಿಷ್ ಪುಸ್ತಕದ ಭಾಷಾಂತರ. ಅದು ಅಖಿಲ ಭಾರತ ದೃಷ್ಟಿಯನ್ನು ಇಟ್ಟುಕೊಂಡು ಬರೆದ ಗ್ರಂಥ.

ಈ 'ಕೋಳಿ ಸಾಕಣೆ ಕೈಪಿಡಿ' ಗಾತ್ರದಲ್ಲಿ ಅದಕ್ಕಿಂತ ಚಿಕ್ಕದು. ಮೂಲಗ್ರಂಥ ಕರ್ನಾಟಕ ರಾಜ್ಯವನ್ನು ಗಮನದಲ್ಲಿರಿಸಿ ಕೃಷಿ ವಿಶ್ವವಿದ್ಯಾನಿಲಯದಲ್ಲಿಯ ತಜ್ಞರು ಈ ಗ್ರಂಥ ಬರೆದಿದ್ದಾರೆ. ಹನ್ನೊಂದು ಅಧ್ಯಾಯ ಹಾಗೂ ನಾಲ್ಕು ಅನುಬಂಧಗಳನ್ನೊಳಗೊಂಡ ಈ ಹೊತ್ತಗೆಯಲ್ಲಿ ಕೋಳಿ ತಳಿಗಳು, ಸಾಕಣೆ ಪದ್ಧತಿ, ವಸತಿ, ಆಹಾರ(ಮೇವು), ಕಾವು ಕೊಡುವಿಕೆ ಮತ್ತು ಮರಿಮಾಡಿಸುವಿಕೆ, ಮರಿಗಳ ಕಾವು ಕಾಪುಗೆ ಹಾಗೂ ಆಧುನಿಕ ರೀತಿಯಲ್ಲಿ ಮರಿ ಸಾಕಣೆ, ಗರಿಕಳಚಿಕೆ ಮತ್ತು ಗರಿಬೆಳವಣಿಗೆ, ಮನುಷ್ಯರ ಆಹಾರದಲ್ಲಿ ಮೊಟ್ಟೆಗಳ ಮಹತ್ವ, ರೋಗಗಳು ಹಾಗೂ ಅವುಗಳ ನಿಯಂತ್ರಣ, ಉತ್ಪನ್ನಗಳ ಶೇಖರಣೆ ಮತ್ತು ಮಾರಾಟ, ಸಾಮಾನ್ಯ ಔಷಧಗಳು, ಆಹಾರ ತಯಾರಕರು, ಉಪಕರಣ ತಯಾರಕರು ಮತ್ತು ತಳಿಗಳು ದೊರೆಯುವ ಸ್ಥಳಗಳ ಪಟ್ಟಿ ಈ ವಿಷಯಗಳ ವಿವರಣೆಗಳಿವೆ.

ಅಚ್ಚಿಗೆ ಪ್ರತಿಯನ್ನು ಸಿದ್ಧಪಡಿಸುವುದರಲ್ಲಿ ಕನ್ನಡ ಬೆರಳಚ್ಚುಗಾರರಾದ ಶ್ರೀ ಟಿ. ಎಸ್. ಚಂಪಕ್‌ರವರು, ಕರಡೋದುವ ಕಾರ್ಯದಲ್ಲಿ ಕರಡೋದುಗಾರರಾದ ಶ್ರೀ ಎಂ. ರಮೇಶ್‌ರವರು ಸಹಕರಿಸಿದ್ದಾರೆ.

ಕೋಳಿಸಾಕಣೆಗಾರರಿಗೆ ಇದೊಂದು ಅತ್ಯಂತ ಉಪಯುಕ್ತವಾದ ಕೈಪಿಡಿ. ವಿದ್ಯಾರ್ಥಿಗಳು, ತರಬೇತಿ ಸಂಸ್ಥೆಗಳು, ಬೋಧಕರು, ಕೋಳಿಸಾಕಣೆದಾರರು ಈ ಹೊತ್ತಗೆಯ ಪ್ರಯೋಜನ ಪಡೆಯುವರೆಂದು ಆಶಿಸಲಾಗಿದೆ.

ವೀ. ಚ. ಹಿತ್ತಲಮನಿ
ಕನ್ನಡ ಪ್ರಾಧ್ಯಾಪಕರು
ಹಾಗೂ
ಕ. ಅ. ಸ. ಕಾರ್ಯದರ್ಶಿಗಳು

ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ
ಬೆಂಗಳೂರು–560 065

ಪರಿವಿಡಿ

ಕೋಳಿ ಸಾಕಣೆ ಕೈಪಿಡಿ

ಒಪ್ಪೋಲೆ

ಪುಟ ಸಂಖ್ಯೆ	ಸಾಲು	ತಪ್ಪು	ಒಪ್ಪು
6	2	ಪ್ರಸಿಧ್ಧ	ಪ್ರಸಿದ್ಧ
8	6	ವಾತಾರಣ	ವಾತಾವರಣ
10	5	ಗೂಢಿ	ಗೋಢಿ
12	7	4,5	4.5
	11	ಹೊಲಕೆ	ಹೊಲಕ್ಕೆ
15	9	ಚಳಿಗಾಳ	ಚಳಿಗಾಲ
22	3	ಆಳೆಯಬಹುದು	ಅಳೆಯಬಹುದು
44	9	ಕಾವುಕಾಪುಗೆಗಿಂಲೂ	ಕಾವುಕಾಪುಗಗಿಂತಲೂ
51	21	ಕೆಳವು	ಕೆಲವು
53	4	ಮಾಡ್ವು	ಮಾಡು
	9	ತಡೆಗಟ	ತಡೆಗಟ್ಟು
57	3	ಒಬ್ಬ	ಒಬ್ಬ
63	1	ಆಧ್ಯಾಯ	ಅಧ್ಯಾಯ
69	3	ಸಾವನ್ಯವಾಗಿ	ಸಾಮಾನ್ಯವಾಗಿ
76	11	ಅವು	ಆವು
77	21	ಪಾರದರ್ಶಕವಾದ	ಪಾರದರ್ಶಕವಾದ
80	5	ಕಾಯಿಲಯ	ಕಾಯಿಲೆಯ
	5	ಅಂಪ್ರಾಲ್ ಸಾಲ್	ಅಂಪ್ರಾಲ್ ಸಾಲ್
	10	ಅರೋಪ್ಯಾಕ್	ಆರೋಫ್ಯಾಕ್
88	4	ಹಾಷರ್‌ಗಳು	ಹಾಪರ್‌ಗಳು
	9	ಮಿಕ್ಸ್ಚರ್ಸ್	ಮಿಕ್ಸರ್
	17	ಕಾವುಕಾಪುಗಳು	ಕಾವುಕಾಪುಗೆಗಳು
ಅಲ್ಲಲ್ಲಿ		ಅಮ್ಲ	ಆಮ್ಲ
,,		ಅವರೆ	ಆದರೆ
,,		ಅರೋಗ್ಯ	ಆರೋಗ್ಯ
,,		ಮೆವುಣಕ	ಮೇವುಣಕ

ಅಧ್ಯಾಯ 1

ಪರಿಚಯ

ಕೋಳಿ ಸಾಕಣೆ ನಮ್ಮಲ್ಲಿ ಒಂದು ಪುರಾತನ ಉದ್ಯೋಗ. ಇದು ಸಾಂಪ್ರದಾಯಿಕವಾಗಿ ನಮ್ಮಲ್ಲಿ ನಡೆದುಬಂದಿದೆ. ಹಿಂದೆ ಇದ್ದಂತೆ, ಇಂದೂ ಕೋಳಿ ಸಾಕಣೆ ನಮ್ಮಲ್ಲಿ ಒಂದು ಹವ್ಯಾಸ. ನಮ್ಮ ಪೂರ್ವಿಕರು ಕೋಳಿ ಸಾಕಣೆ ಆರಂಭಿಸಿದ್ದು ಮೋಜಿಗೆ, ಜೂಜಿಗೆ, ಮೊಟ್ಟೆ ಮತ್ತು ಮಾಂಸಗಳಿಗೆ. ಕಾಡುಕೋಳಿಯನ್ನು ಹಿಡಿದು ತಂದು, ಸಾಕಿ ಅದನ್ನು ತಮ್ಮ ಉಪಯೋಗಕ್ಕೆ ಬಳಸಿಕೊಳ್ಳಲಾಗಿದ್ದು, ಇಂದು ಕಾಣುವ ಎಲ್ಲಾ ಕೋಳಿಗಳಿಗೂ ಮೂಲ ಕಾಡುಕೋಳಿಯಾಯಿತು. ನಮ್ಮ ದೇಶದ ಎಲ್ಲ ಕೋಳಿಗಳು ಕೆಂಪು ಕಾಡುಕೋಳಿಯಿಂದ ಬಂದವು.

ಹುಂಜಗಳ ಕಾಳಗ ಅಥವಾ ಕೋಳಿ ಪಂದ್ಯ ನಮ್ಮ ದೇಶದಲ್ಲಿ ಅತಿ ಪ್ರಸಿದ್ಧವಾದ ಜೂಜಾಟ. ಕೋಳಿ ಪಂದ್ಯಗಳಿಂದ ಜಗಳಗಳು, ರಕ್ತಪಾತಗಳೇ ನಡೆದುಹೋಗುತ್ತಿದ್ದವು. ನಮ್ಮ ದೇಶದ ಪಂದ್ಯದ ಕೋಳಿಗಳು ವಿಶ್ವಕ್ಕೇ ಹೆಸರುವಾಸಿ.

ಕಾಲ ಬದಲಾದಂತೆ ಕಾಳಗದ ಕೋಳಿ ಸಾಕಣೆಗೆ ಪ್ರೋತ್ಸಾಹ ಕಡಮೆಯಾಯಿತು. ಮೊಟ್ಟೆ ಮತ್ತು ಮಾಂಸದ ಕೋಳಿಗಳ ಸಾಕಣೆಗೆ ಹೆಚ್ಚು ಪ್ರಾಧಾನ್ಯತೆ ದೊರೆಯಿತು. ಹವ್ಯಾಸಕ್ಕೆ ಮತ್ತು ಮೋಜಿಗೆ ಇದ್ದ ಕೋಳಿ ಸಾಕಣೆ ಇಂದು ಒಂದು ಲಾಭದಾಯಕ ಉದ್ಯೋಗವಾಗಿದೆ. ಸಾಂಪ್ರದಾಯಿಕ ಕೋಳಿ ಸಾಕಣೆ ಇಂದು ವೈಜ್ಞಾನಿಕ ಕೋಳಿ ಸಾಕಣೆಯಾಗಿದೆ.

ಈಗ ಕೋಳಿ ಸಾಕಣೆಗೆ ಹೆಚ್ಚು ಪ್ರಾಧಾನ್ಯತೆ. ಕೋಳಿ ಸಾಕಣೆ ಒಂದು ಲಾಭದಾಯಕ ಉದ್ಯಮವೆಂದು ಕಂಡುಕೊಂಡಿದ್ದೇವೆ. ಕೋಳಿಗಳು ಕಡಮೆ ಆಹಾರ ಹಾಗೂ ವರ್ಜಿತ ಪದಾರ್ಥಗಳನ್ನು ತಿಂದು ನಮಗೆ ಪ್ರಾಣಿಜನ್ಯ ಪ್ರೋಟೀನುಗಳನ್ನು ಒದಗಿಸುತ್ತವೆ. ಕೋಳಿ ಗಾತ್ರದಲ್ಲಿ ಸಣ್ಣದು. ತಿನ್ನುವ ಆಹಾರ ಕಡಮೆ. ಅದಕ್ಕೆ ಬೇಕಾಗುವ ಸ್ಥಳಾವಕಾಶ ಸ್ವಲ್ಪ. ಕೋಳಿ ಸಾಕಣೆ ಸುಲಭ. ಶ್ರಮ ಕಡಮೆ. ಲಾಭ ಹೆಚ್ಚು. ಇವೆಲ್ಲವನ್ನು ಪರಿಗಣಿಸಿದಾಗ ಕೋಳಿಸಾಕಣೆ ಬಡವನಿಗೂ ಎಟುಕುವ ಉದ್ಯೋಗ. ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕಲ್ಪಿಸುವ ಕಸಬು; ಬಹುಮಂದಿಗೆ ದಿನನಿತ್ಯ ಹಣಗಳಿಸುವ, ಅವರ ಆರ್ಥಿಕಮಟ್ಟವನ್ನು ಹೆಚ್ಚಿಸುವ ಒಂದು ಉದ್ಯಮ. ಕೋಳಿ ಸಾಕಣೆಗೆ ಸರ್ಕಾರ, ಬ್ಯಾಂಕುಗಳು ಮತ್ತು ಸಹಕಾರ ಸಂಘಗಳು ಹಣ ಮತ್ತು ಇತರ ನೆರವುಗಳನ್ನು ಒದಗಿಸುತ್ತವೆ.

ಅಧ್ಯಾಯ 2

ಕೋಳಿ ತಳಿಗಳು

ಕೋಳಿಗಳಲ್ಲಿ ಅನೇಕ ಬಗೆಯ ತಳಿಗಳಿವೆ. ನಮ್ಮ ದೇಶದಲ್ಲಿ ಕಂಡುಬರುವ ಕೋಳಿ ತಳಿಗಳನ್ನು ಮುಖ್ಯವಾಗಿ 1) ದೇಶೀ ತಳಿಗಳು 2) ವಿದೇಶೀ ತಳಿಗಳು 3) ಮಿಶ್ರ ತಳಿಗಳು ಎಂದು ಮೂರು ಗುಂಪುಗಳಾಗಿ ವಿಂಗಡಿಸಬಹುದು.

1 ದೇಶೀ ತಳಿಗಳು

ದೇಶೀ ತಳಿಗಳು ನಮ್ಮ ದೇಶದ ನಾಟೀ ಕೋಳಿಗಳು. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಇವುಗಳನ್ನು ಕಾಣಬಹುದು. ಇವುಗಳಲ್ಲಿ ಎಷ್ಟೋ ವಿಧಗಳಿವೆ. ಆಕಾರ, ಗಾತ್ರ ಮುಂತಾದುವುಗಳ ವಿಷಯದಲ್ಲಿ ಒಂದು ಕೋಳಿಯಿಂದ ಮತ್ತೊಂದು ಕೋಳಿಗೆ ವ್ಯತ್ಯಾಸ ಕಂಡುಬರಬಹುದು. ಈ ಕೋಳಿಗಳು ಎಂತಹ ವಾತಾವರಣದಲ್ಲೂ ಯಶಸ್ವಿಯಾಗಿ ಜೀವಿಸಿರಬಲ್ಲ ಸಮರ್ಥಶಾಲಿಗಳು. ಇವು ವಿದೇಶೀ ತಳಿ ಕೋಳಿಗಳಂತೆ ಸಾಮಾನ್ಯವಾಗಿ ರೋಗರುಜಿನಗಳಿಗೆ ಅಷ್ಟು ಸುಲಭವಾಗಿ ಬಲಿಯಾಗುವುದಿಲ್ಲ. ಇವು ಮಾಂಸಕ್ಕೆ ಮತ್ತು ಪಂದ್ಯಗಳಿಗೆ ಪ್ರಖ್ಯಾತವಾದವು. ಇವುಗಳ ಮಾಂಸ ತಿನ್ನಲು ಬಲು ರುಚಿ. ಆದರೆ ಇವುಗಳ ಮೊಟ್ಟೆ ಉತ್ಪಾದನಾ ಸಾಮರ್ಥ್ಯ ಕಡಮೆ. ಹೆಚ್ಚೆಂದರೆ ವರ್ಷಕ್ಕೆ ಸುಮಾರು 50-80 ಮೊಟ್ಟೆಗಳನ್ನು ಇಡಬಹುದಷ್ಟೆ. ಮೊಟ್ಟೆಗಳಿಗೆ ಕಾವು ಕೊಟ್ಟು ಮರಿಮಾಡುವ ತಾಯ್ತನದ ಗುಣ ಇವುಗಳಲ್ಲಿ ಕಾಣಬಹುದು. ದೇಶೀ ಕೋಳಿ ತಳಿಗಳ ಗುಣಲಕ್ಷಣಗಳು ಹಾಗೂ ಅವು ಹುಟ್ಟಿಬಂದ ಪ್ರದೇಶಗಳ ಆಧಾರದ ಮೇಲೆ ಅವುಗಳಿಗೆ ಬೇರೆ ಬೇರೆ ಹೆಸರುಗಳಿವೆ. ಉದಾಹರಣೆಗೆ, **ಅಸೀಲ್, ಕಾಶ್ಮೀರಿ, ತಿತ್ರಿ, ಬಸರಾ, ಡೊಂಕಿ, .ಚಿಟಗಾಂಗ್, ಕಾಳಹಸ್ತಿ,** ಇವೇ ಮುಂತಾದುವು. ಇವುಗಳಲ್ಲೆಲ್ಲಾ ಅಸೀಲ್ ತಳಿಕೋಳಿಗಳು ಉತ್ತಮ ಮಟ್ಟದವು. ಇವು ಉತ್ತಮ ಪಂದ್ಯದ ಕೋಳಿಗಳೆಂದು ವಿಶ್ವದಲ್ಲೇ ಹೆಸರು ಪಡೆದಿವೆ.

2 ವಿದೇಶೀ ತಳಿಗಳು

ವಿದೇಶೀ ತಳಿಗಳು ಹೊರ ದೇಶಗಳಿಂದ ನಮ್ಮ ದೇಶಕ್ಕೆ ತಂದವುಗಳು. ಆದುದರಿಂದ ಇವುಗಳಿಗೆ ವಿದೇಶೀ ಕೋಳಿಗಳೆಂದು ಹೆಸರು. ಇವುಗಳನ್ನು ಜನ ಸಾಮಾನ್ಯವಾಗಿ 'ಫಾರ್ಮ್ ಕೋಳಿಗಳು' ಎಂದು ಕರೆಯುವುದೂ ಉಂಟು. ಹಿಂದೆ ಯುರೋಪಿನವರು ನಮ್ಮ ದೇಶಕ್ಕೆ ಬಂದಾಗ ತಮ್ಮ ಜೊತೆಯಲ್ಲಿ ತಮ್ಮ ತಾಯ್ನಾಡಿನಿಂದ ಕೆಲವು ಕೋಳಿಗಳನ್ನು ತಂದಿದ್ದರು.

ಹಾಗೆ ನಮ್ಮ ದೇಶಕ್ಕೆ ಬಂದ ಇವು ನಮ್ಮ ದೇಶದ ವಾತವರಣಕ್ಕೆ ಹೊಂದಿಕೊಂಡು ಕೊನೆಗೆ ನಮ್ಮ ದೇಶದ ಕೋಳಿಗಳೋ ಎನ್ನುವಷ್ಟರಮಟ್ಟಿಗೆ ಆಗಿಬಿಟ್ಟಿವೆ. ಇವು ಉತ್ತಮಮಟ್ಟದ ಕೋಳಿಗಳು. ನಮ್ಮ ದೇಶೀಯ ಕೋಳಿಗಳಿಗಿಂತಲೂ ಹೆಚ್ಚು ಉತ್ಪಾದನಾ ಸಾಮರ್ಥ್ಯವನ್ನು ಪಡೆದಿರುತ್ತವೆ. ಹೆಚ್ಚು ಮೊಟ್ಟೆ ಇಡುತ್ತವೆ; ಹೆಚ್ಚು ಮಾಂಸ ನೀಡುತ್ತವೆ. ಉದಾಹರಣೆಗೆ **ವೈಟ್‌ಲೆಗ್ ಹಾರ್ನ್, ರೋಡ್ ಐಲೆಂಡ್ ರೆಡ್, ವೈಟ್ ರಾಕ್, ಆಸ್ಟ್ರಾಪಾರ್ಲ್** ಮುಂತಾದ ತಳಿಗಳನ್ನು ಹೆಸರಿಸಬಹುದು.

3 ಮಿಶ್ರ ತಳಿಗಳು

ಮಿಶ್ರ ತಳಿಗಳು ಎರಡು ತಳಿಗಳನ್ನು ಸಂಕರಣಗೊಳಿಸಿ ಎಬ್ಬಿಸಿದ ಕೋಳಿಗಳು. ಎರಡು ತಳಿಗಳ ಉತ್ತಮ ಗುಣಗಳನ್ನು ಮುಂದಿನ ಸಂತತಿಯಲ್ಲಿ ಸೃಷ್ಟಿಸುವುದೇ ಇದರ ವಿಶೇಷತೆ. ಇವು ಶೀಘ್ರವಾಗಿ ಬೆಳೆದು ದೊಡ್ಡವಾಗುತ್ತವೆ. ಹೆಚ್ಚು ಮೊಟ್ಟೆ ಇಡುತ್ತವೆ. ಹೆಚ್ಚು ರೋಗ ನಿರೋಧಕ ಶಕ್ತಿಯನ್ನು ಪಡೆದಿರುತ್ತವೆ. ಉದಾಹರಣೆಗೆ **ವೈಟ್‌ರಾಕ್** ತಳಿಯ ಹೇಂಟೆಯನ್ನು **ವೈಟ್‌ಕಾರ್ನಿಶ್** ತಳಿಯ ಹುಂಜವನ್ನು ಕೂಡಿಸಿ ಎಬ್ಬಿಸಿದ ಕೋಳಿಗಳು.

ಕೋಳಿಗಳನ್ನು ಅವುಗಳ ಉತ್ಪಾದನಾ ಸಾಮರ್ಥ್ಯದ ಮೇಲೆ ಈ ಕೆಳಗಿನ ರೀತಿಯಲ್ಲಿ ಮೂರು ಗುಂಪುಗಳಾಗಿ ವಿಂಗಡಿಸಬಹುದು :

1) ಮೊಟ್ಟೆ ತಳಿ
2) ಮಾಂಸದ ತಳಿ
3) ವಿವಿಧೋದ್ದೇಶ ತಳಿ

1 ಮೊಟ್ಟೆ ತಳಿ

ಮೊಟ್ಟೆ ತಳಿಗಳು ಅಧಿಕ ಮೊಟ್ಟೆ ಉತ್ಪಾದನಾ ಸಾಮರ್ಥ್ಯವನ್ನು ಪಡೆದಿರುತ್ತವೆ. ಈ ತಳಿಯ ಕೋಳಿಗಳು ಗಾತ್ರದಲ್ಲಿ ಸಣ್ಣವು. ಇವು ತಿನ್ನುವ ಆಹಾರ ಕಡಮೆ. ಇವು ಇಡುವ ಮೊಟ್ಟೆಗಳು ದೊಡ್ಡ ಗಾತ್ರದವು. ಸ್ವಲ್ಪ ಶ್ರದ್ಧೆವಹಿಸಿ ಸಾಕಿದರೆ ಇವು ಇಡುವ ಮೊಟ್ಟೆಗಳಿಂದ ಹೆಚ್ಚು ಲಾಭಗಳಿಸಬಹುದು. ಮೊಟ್ಟೆಗಳಿಗಾಗಿ ಕೋಳಿಗಳನ್ನು ಸಾಕುವವರು ಈ ತಳಿಗಳನ್ನೇ ಆರಿಸಿಕೊಳ್ಳಬೇಕು.

ವೈಟ್‌ಲೆಗ್‌ಹಾರ್ನ್, ಮೈನಾರ್ಕ್, ಅಂಕೊನಾಸ್, ಕಾಂಟೈನ್ಸ್, ಇವೇ ಮುಂತಾದುವು ಮೊಟ್ಟೆ ತಳಿಗಳು. ಇವುಗಳಲ್ಲಿ ವೈಟ್‌ಲೆಗ್ ಹಾರ್ನ್ ಹೆಚ್ಚು ಪ್ರಸಿದ್ಧವಾದುವು.

2 ಮಾಂಸದ ತಳಿ

ಮಾಂಸದ ತಳಿಗಳು ಮಾಂಸ ಉತ್ಪಾದನೆಗೆ ತಕ್ಕವಾಗಿವೆ. ಗಾತ್ರ ದೊಡ್ಡದು. ತೂಕ ಹೆಚ್ಚು. ಮೈಯಲ್ಲಿ ಹೆಚ್ಚು ಮಾಂಸ ಕೂಡಿಕೊಳ್ಳಲು ಸಾಧ್ಯವಾಗುವಂತೆ ಮೈಕಟ್ಟು ರಚನೆಯಾಗಿರುತ್ತದೆ. ಮಾಂಸವು ವಿಶೇಷವಾಗಿ ಎದೆ ಮತ್ತು ತೊಡೆ ಭಾಗಗಳಲ್ಲಿ ಕೂಡಿಕೊಂಡಿರುತ್ತದೆ. ಮಾಂಸ ಹೆಚ್ಚು ಮೃದು. ಮಾಂಸಕ್ಕಾಗಿ ಕೋಳಿಗಳನ್ನು ಸಾಕುವವರು ಈ ತಳಿಗಳನ್ನೇ ಸಾಕುವುದು ಲಾಭಕರ.

ವೈಟ್‌ಕಾರ್ನಿಶ್, ವೈಟ್‌ಪ್ಲೈಮೂತ್‌ರಾಕ್, ನ್ಯೂ ಹ್ಯಾಂಪ್‌ಶೈರ್, ಮತ್ತು **ಮಿಶ್ರತಳಿಗಳು** ಮಾಂಸದ ತಳಿ ಕೋಳಿಗಳಾಗಿವೆ.

3 ವಿವಿಧೋದ್ದೇಶ ತಳಿ

ವಿವಿಧೋದ್ದೇಶ ತಳಿಗಳು ಮಾಂಸದ ಉತ್ಪಾದನೆಗೂ ಮೊಟ್ಟೆ ಉತ್ಪಾದನೆಗೂ ಅನುಕೂಲವಾದ ಕೋಳಿಗಳು. ಇವು ಶ್ರೇಷ್ಠಮಟ್ಟದ ಮಾಂಸವನ್ನು ಕೊಡುತ್ತವೆ. ಹೆಚ್ಚಿಗೆ ಮೊಟ್ಟೆಗಳನ್ನು ಇಡುತ್ತವೆ. ಚೆನ್ನಾಗಿ ಸಾಕಿದರೆ ಮಳೆಗಾಲ, ಚಳಿಗಾಲಗಳೆರಡನ್ನೂ ಒಳಗೊಂಡಂತೆ ವರ್ಷದ ಎಲ್ಲಾ ಋತುಗಳಲ್ಲೂ ಮೊಟ್ಟೆಗಳನ್ನು ಇಡಬಲ್ಲವು. ಇವುಗಳ ಮೊಟ್ಟೆಗಳು ಸಾಕಷ್ಟು ದೊಡ್ಡವು. ಇವು ಮೊದಲ ಗರಿ ಉದುರುವವರೆಗೆ ಮೊಟ್ಟೆ ಇಡುತ್ತವೆ. ಅನಂತರ ಮೊಟ್ಟೆ ಉತ್ಪಾದನೆ ಕಡಮೆಯಾಗಿ ಮೈಯಲ್ಲಿ ಮಾಂಸ-ಕೊಬ್ಬು ಕೂಡಿಕೊಂಡು ಮಾಂಸದ ಕೋಳಿಗಳಾಗಿ ಪರಿವರ್ತನೆಯಾಗುತ್ತವೆ.

ರೋಡ್ ಐಲೆಂಡ್ ರೆಡ್, ಪ್ಲೈಮೂತ್ ರಾಕ್, ನ್ಯೂ ಹ್ಯಾಂಪ್‌ಶೈರ್, ಆಸ್ಟ್ರಾಲಾರ್ಪ್ ಮುಂತಾದುವು ವಿವಿಧೋದ್ದೇಶ ತಳಿ ಕೋಳಿಗಳಿಗೆ ಉದಾಹರಣೆಗಳಾಗಿವೆ.

ಪ್ರಪಂಚದಲ್ಲಿರುವ ಕೋಳಿಗಳನ್ನು ಒಟ್ಟು ಹನ್ನೆರಡು ವರ್ಗಗಳಾಗಿ ವಿಂಗಡಿಸಲಾಗಿದೆ. ಇವುಗಳಲ್ಲಿ ಸುಮಾರು 50 ತಳಿಗಳಿವೆ. ಈ ಪ್ರತಿಯೊಂದು ತಳಿಯಲ್ಲೂ ಇಂದು ಅನೇಕ ಬಗೆಗಳಿವೆ. ಹನ್ನೆರಡು ವರ್ಗಗಳಲ್ಲಿ ಪ್ರಮುಖವೆಂದರೆ **ಅಮೇರಿಕಾ, ಏಷ್ಯಾ, ಇಂಗ್ಲಿಷ್** ಮತ್ತು **ಮೆಡಿಟರೇನಿಯನ್ (ಒಳನಾಡಿನ)** ವರ್ಗಗಳು.

ಪ್ಲೈಮೂತ್ ರಾಕ್, ವ್ಯಾಂಡಟ್ಟೆ, ರೋಡ್ ಐಲೆಂಡ್ ರೆಡ್, ನ್ಯೂ ಹ್ಯಾಂಪ್‌ಶೈರ್, ಈ ತಳಿಗಳು ಅಮೆರಿಕಾ ಕೋಳಿ ವರ್ಗದಲ್ಲಿ ಬರುತ್ತವೆ. **ಬ್ರಹ್ಮ, ಕೊಚಿನ್, ಲ್ಯಾಂಗಶಾನ್,** ಈ ತಳಿಗಳು ಏಷ್ಯಾ ಕೋಳಿವರ್ಗದಲ್ಲಿ ಬರುತ್ತವೆ. **ಸಸೆಕ್ಸ್, ಆರ್‌ಪಿಂಗ್‌ಟನ್, ಆಸ್ಟ್ರಾಲಾರ್ಪ್, ಕಾರ್ನಿಶ್,** ಇವು ಇಂಗ್ಲಿಷ್ ಕೋಳಿ

ವರ್ಗದಲ್ಲಿ ಬರುತ್ತವೆ. **ಲ್ಯಾಂಗ್‌ಷಾರ್ನ್, ಮೈನಾರ್ಕ್, ಅಂಕೋನ,** ಇವು ಮೆಡಿಟರೇನಿಯನ್ ಕೋಳಿವರ್ಗದಲ್ಲಿ ಬರುತ್ತವೆ.

ಕೆಲವು ತಳಿಗಳ ಪರಿಚಯ

ಮೇಲೆ ವಿವಿಧ ಕೋಳಿತಳಿಗಳ ವರ್ಗಗಳನ್ನು ತಿಳಿಸಲಾಯಿತು. ಅವುಗಳಲ್ಲಿ ಮುಖ್ಯವಾದ ಕೆಲವು ತಳಿಗಳು, ಅವುಗಳ ವಿಶಿಷ್ಟ ಗುಣಲಕ್ಷಣಗಳೂ ಈ ಕೆಳಕಂಡಂತಿವೆ:

1 ವೈಟ್ ಲೆಗ್‌ಹಾರ್ನ್

ಕೇವಲ 50 ವರ್ಷಗಳ ಹಿಂದೆ ಪಾದ್ರಿಗಳು ಹಾಗೂ ಯೂರೋಪಿನ ಕೆಲವು ಮಂದಿ ಈ ತಳಿಯನ್ನು ನಮ್ಮ ದೇಶಕ್ಕೆ ತಂದರು. ಇಂದು ನಮ್ಮ ದೇಶದಲ್ಲಿ ಎಲ್ಲೆಲ್ಲೂ ಇವು ಹೆಚ್ಚಾಗಿ ಹಬ್ಬಿ ಹೋಗಿವೆ. ಈ ತಳಿಯ ಹೆಸರು ಕೇಳದ ಕೋಳಿ ಸಾಕಣೆಗಾರರಿಲ್ಲ. ಈ ಕೋಳಿಗಳು ಗಾತ್ರದಲ್ಲಿ ಸಣ್ಣವು, ಬಲು ಚುರುಕು, ಕಡಮೆ ಆಹಾರವನ್ನು ತಿನ್ನುತ್ತವೆ. ಹೆಚ್ಚಿಗೆ ಮೊಟ್ಟೆಗಳನ್ನು ಕೊಡುತ್ತವೆ. ಇವು ಬೇಗ ಬೆಳೆದು ದೊಡ್ಡವಾಗಿ 5-6 ತಿಂಗಳಿಗೆಲ್ಲಾ ಮೊಟ್ಟೆ ಇಡಲು ಪ್ರಾರಂಭಿಸುತ್ತವೆ. ಎರಡು ಕಿಲೊಗ್ರಾಮ್ ಆಹಾರವನ್ನು ತಿಂದು ಹನ್ನೆರಡು ಮೊಟ್ಟೆಗಳನ್ನು ಇಡಬಲ್ಲವು. ಇವು ವರ್ಷಕ್ಕೆ ಸುಮಾರು 200-220 ಮೊಟ್ಟೆಗಳನ್ನು ನೀಡುತ್ತವೆ. ಅಲ್ಲದೆ ಕಾವಿಗೆ ಕೂಡುವುದಿಲ್ಲ. ಈ ತಳಿಯ ಕೋಳಿಗಳ ಮೈಬಣ್ಣ ಬಿಳಿ, ಮುಖ ಕೆಂಪು, ಕಿವಿಗಳು ಅಗಲ ಹಾಗೂ ಅಂಡಾಕಾರ. ಕೊಕ್ಕು ಕೊಕ್ಕೆಯಾಕಾರ ಹಾಗೂ ಗಟ್ಟಿ. ಕಣ್ಣುಗಳು ಪ್ರಕಾಶಮಾನವಾಗಿದ್ದು ದೊಡ್ಡದಾಗಿರುತ್ತವೆ. ಕಣ್ಣಿನ ಸುತ್ತಲೂ ಬಣ್ಣ ಕೆಂಪಗಿರುತ್ತದೆ. ಶರೀರ ಉದ್ದ, ಎದೆ ಅಗಲ, ಚರ್ಮ ಮತ್ತು ಕಾಲುಗಳು ಹಳದಿ ಬಣ್ಣ. ತಲೆಯ ಜುಟ್ಟು ಹಾಗೂ ಐದು ಗರಗಸದ ಮುಳ್ಳುಗಳಂತೆ ಸೀಳಿದ್ದು ಒಂದು ಪಕ್ಕಕ್ಕೆ ಬಾಗಿರುತ್ತದೆ.

ಈ ತಳಿಗಳು ಮೊಟ್ಟೆ ಉತ್ಪಾದನೆಗೆ ಶ್ರೇಷ್ಠ.

2 ವೈಟ್ ಪ್ಲೈಮೂತ್ ರಾಕ್

ವೈಟ್ ಪ್ಲೈಮೂತ್ ರಾಕ್‌ಗಳು ವಿವಿಧೋದ್ದೇಶದ ತಳಿಗಳು. ಮಾಂಸವನ್ನು ಕೊಡುತ್ತವೆ; ಅಲ್ಲದೆ ಮೊಟ್ಟೆಗಳನ್ನು ಇಡುತ್ತವೆ. ಇವುಗಳ ಮೈ ಸ್ವಲ್ಪಮಟ್ಟಿಗೆ ಉದ್ದವಾಗಿಯೂ ಅಗಲವಾಗಿಯೂ ಇರುತ್ತದೆ. ಎದೆ ಅಗಲ; ಎದೆ ಮತ್ತು ತೊಡೆ ಭಾಗಗಳಲ್ಲಿ ಮಾಂಸ ತುಂಬಿಕೊಂಡಿರುತ್ತದೆ. ಕಾಲುಗಳ ಬಣ್ಣ ಹಳದಿ. ಪುಕ್ಕಗಳ ಬಣ್ಣ ಬಿಳಿ. ಇವುಗಳ ತಲೆಯಲ್ಲಿ ಒಂದೇ ಒಂದು ಜುಟ್ಟಿರುತ್ತದೆ ಮತ್ತು ಅದು ಗರಗಸದ ಹಲ್ಲುಗಳಂತೆ ಐದು ಭಾಗಗಳಾಗಿ ಸೀಳಿದ್ದು, ಕೆಂಪಾಗಿರುತ್ತದೆ.

3 ವೈಟ್ ಕಾರ್ನಿಶ್

ವೈಟ್ ಕಾರ್ನಿಶ್ ಇಂಗ್ಲಿಷ್ ವರ್ಗಕ್ಕೆ ಸೇರಿದ ಕೋಳಿಗಳು. ಮಾಂಸಕ್ಕೆ

ಪ್ರಸಿದ್ಧ. ಶ್ರೇಷ್ಠಮಟ್ಟದ, ಹೆಚ್ಚು ಮಾಂಸವನ್ನು ಕೊಡುತ್ತವೆ. ಆದರೆ ಹೆಚ್ಚು ಮೊಟ್ಟೆ ಇಡುವುದಿಲ್ಲ. ಇವು ನಮ್ಮ ದೇಶದ ಅಸೀಲ್ ಜಾತಿಯ ಕೋಳಿಗಳನ್ನೇ ಹೋಲುತ್ತವೆ. ಚಿಕ್ಕದಾದ, ಉಂಡೆಯಾಕಾರದ ಜುಟ್ಟು, ದೊಡ್ಡದಾದ ಕಣ್ಣುಗಳು, ಕಣ್ಣಿನ ಸುತ್ತ ಹವಳದ ಬಣ್ಣದ ಉಂಗುರ, ಹಳದಿ ಬಣ್ಣದ ಕೊಕ್ಕು. ದೊಡ್ಡ ಗಾತ್ರದ ಮೈ, ಅಗಲವಾದ ಮತ್ತು ಮಾಂಸ ತುಂಬಿದ ಎದೆ, ಇವು ಈ ತಳಿಯ ಕೆಲವು ಲಕ್ಷಣಗಳು.

4 ನ್ಯೂ ಹ್ಯಾಂಪ್‌ಶೈರ್

ನ್ಯೂ ಹ್ಯಾಂಪ್‌ಶೈರ್ ಅಮೆರಿಕ ವರ್ಗಕ್ಕೆ ಸೇರಿದ ತಳಿ. ಮಾಂಸ ಮತ್ತು ಮೊಟ್ಟೆ ಉತ್ಪಾದನೆಗೆ ಶ್ರೇಷ್ಠ. ಇವು ದೊಡ್ಡ ಗಾತ್ರದ ಹಳದಿ ಬಣ್ಣದ ಮೊಟ್ಟೆಗಳನ್ನಿಡುತ್ತವೆ. ಈ ಕೋಳಿಗಳು ಬಲು ಗಟ್ಟಿಮುಟ್ಟಾಗಿರುತ್ತವೆ ; ಹೊಸ ವಾತಾವರಣಕ್ಕೆ ಹೊಂದಿಕೊಳ್ಳುತ್ತವೆ. ಆದ್ದರಿಂದ ಕೆಲವೇ ವರ್ಷಗಳಲ್ಲಿ ಪ್ರಖ್ಯಾತಿ ಗಳಿಸಿವೆ. ಈ ತಳಿಯನ್ನು ರೋಡ್ ಐಲೆಂಡ್ ರೆಡ್ ತಳಿಗಳಿಂದ ಎಬ್ಬಿಸಲಾಗಿದೆ. ಇವುಗಳ ಮೈಬಣ್ಣ ಕೆಂಪುಮಿಶ್ರಿತ ಕಂದು ; ಮೈ ಗುಂಡಾಗಿರುತ್ತದೆ ; ಎದೆ ಅಗಲ. ಕೊಕ್ಕು ಕೆಂಪು ಮಿಶ್ರಿತ ಹಳದಿ, ತಲೆ ಮತ್ತು ಕತ್ತಿನಲ್ಲಿ ಬಂಗಾರ ಅಥವಾ ಹಳದಿ ಬಣ್ಣದ ಪುಕ್ಕಗಳಿರುತ್ತವೆ. ಬಾಲದ ಪುಕ್ಕಗಳು ಕಪ್ಪಾಗಿರುತ್ತವೆ.

ಕೋಳಿ ಸಾಕಣೆಗೆ ತಳಿಗಳ ಆಯ್ಕೆ

ಕೋಳಿಗಳನ್ನು ಸಾಕುವುದು ಮಾಂಸಕ್ಕಾಗಿ, ಮೊಟ್ಟೆಗಾಗಿ ಇಲ್ಲವೇ ಇವೆರಡನ್ನೂ ಪಡೆಯಲು. ಇದು ಕೋಳಿ ಸಾಕಣೆಗಾರನ ಇಚ್ಛೆಗೆ ಬಿಟ್ಟದ್ದು. ಆದ್ದರಿಂದ ಕೋಳಿ ಸಾಕಣೆಗಾರನು ಕೋಳಿ ಫಾರಂ ಇಡುವಾಗ ತನ್ನ ಉದ್ದೇಶವನ್ನು ಗಮನದಲ್ಲಿಟ್ಟುಕೊಂಡು ಅದಕ್ಕೆ ತಕ್ಕಂತೆ ಕೋಳಿ ತಳಿಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಮಾಂಸದ ಕೋಳಿ ತಳಿಗಳನ್ನು ತಂದು ಮೊಟ್ಟೆ ಉತ್ಪಾದನೆಗಾಗಿ ಸಾಕಿದರೆ ಲಾಭವಿಲ್ಲ. ಹಾಗೆಯೇ ಮೊಟ್ಟೆ ಕೋಳಿ ತಳಿಗಳನ್ನು ತಂದು ಮಾಂಸದ ಉತ್ಪಾದನೆಗಾಗಿ ಸಾಕಿದರೆ ಪ್ರಯೋಜನವಿಲ್ಲ. ಏಕೆಂದರೆ ಮೊಟ್ಟೆಯ ಕೋಳಿಗಳು, ಅವು ತಿಂದ ಆಹಾರವನ್ನು ಮೊಟ್ಟೆ ಉತ್ಪಾದನೆಗಾಗಿ ಬಳಸಿಕೊಳ್ಳುತ್ತವೆ. ಅದರಂತೆ, ಮಾಂಸದ ಕೋಳಿಗಳು ತಿಂದ ಆಹಾರವನ್ನು ಒಳ್ಳೆಯ ಮಾಂಸ ಮತ್ತು ಕೊಬ್ಬಿನ ತಯಾರಿಕೆಗಾಗಿ ಬಳಸಿಕೊಳ್ಳುತ್ತವೆ. ಇದು ಅವುಗಳ ಆನುವಂಶಿಕ ಗುಣ.

ಮೊಟ್ಟೆಗಳನ್ನು ಪಡೆಯುವುದೇ ಮುಖ್ಯ ಉದ್ದೇಶವಾಗಿಟ್ಟುಕೊಂಡು ಕೋಳಿ ಸಾಕಣೆ ಆರಂಭಿಸುವವರು ವೈಟ್ ಲೆಗ್‌ಹಾರ್ನ್ ತಳಿ ಕೋಳಿಗಳನ್ನು, ಅವುಗಳಿಂದ ಸೃಷ್ಟಿಸಿದ ಹೈಬ್ರಿಡ್ ತಳಿ ಕೋಳಿಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಮಾಂಸಕ್ಕಾಗಿ

ಕೋಳಿಸಾಕಣೆ ಮಾಡುವಾಗ ಮಾಂಸದ ಕೋಳಿಗಳಾದ ವೈಟ್ ಕಾರ್ನಿಶ್, ನ್ಯೂ ಹ್ಯಾಂಪ್‌ಶೈರ್, ವೈಟ್ ರಾಕ್ ತಳಿಗಳನ್ನು, ಹೈಬ್ರಿಡ್ ತಳಿಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಮಾಂಸ, ಮೊಟ್ಟೆ ಇವುಗಳೆರಡನ್ನೂ ಪಡೆಯಲು ಕೋಳಿ ಸಾಕಣೆ ಮಾಡುವಾಗ ರೋಡ್ ಐಲೆಂಡ್ ರೆಡ್, ಪ್ಲೈಮೂತ್‌ರಾಕ್, ನ್ಯೂಹ್ಯಾಂಪ್ ಶೈರ್ ಮತ್ತು ಹೈಬ್ರಿಡ್ ತಳಿಗಳನ್ನು ಆಯ್ಕೆ ಮಾಡಿಕೊಳ್ಳಬೇಕು.

ಅಧ್ಯಾಯ 3

ಕೋಳಿ ಸಾಕಣೆ ಪದ್ಧತಿಗಳು

ಕೋಳಿ ಸಾಕಣೆಯಲ್ಲಿ ಹಲವು ಬಗೆಗಳಿವೆ. ಕೆಲವು ಹಳೆಯ ಹಾಗೂ ಸಾಂಪ್ರದಾಯಿಕ ಪದ್ಧತಿಗಳು. ಇನ್ನು ಕೆಲವು ಆಧುನಿಕ ಹಾಗೂ ವೈಜ್ಞಾನಿಕ ಪದ್ಧತಿಗಳು. ಸಾಂಪ್ರದಾಯಿಕ ಪದ್ಧತಿ ಅಂದರೆ, ಕೋಳಿಗಳನ್ನು ಹೊರಗಡೆ ವಿಶಾಲವಾದ ಬಯಲಿನಲ್ಲಿ, ಮುಕ್ತ ವಾತಾರಣದಲ್ಲಿ ಬೆಳೆಸುವ ಪದ್ಧತಿಯು ಹಳ್ಳಿಗಳಿಗೇ ಸರಿ. ನಗರಗಳಲ್ಲಿ ಅದು ಸಾಧ್ಯವಿಲ್ಲ ; ಆದರೆ, ಆಧುನಿಕ ಪದ್ಧತಿಗಳಿಂದ ಕೋಳಿಗಳನ್ನು ಹಳ್ಳಿಗಳಲ್ಲೂ ನಗರಗಳಲ್ಲೂ ಸಾಕಬಹುದು. ಆಧುನಿಕ ಪದ್ಧತಿಗಳಲ್ಲಿ ಕೋಳಿಗಳಿಗೆ ಹೆಚ್ಚಿನ ಸ್ಥಳದ ಅವಶ್ಯಕತೆ ಇಲ್ಲ. ಮನೆಗಳಲ್ಲೇ ಕೋಳಿಗಳನ್ನಿಟ್ಟು ಹೆಚ್ಚಿನ ಉತ್ಪಾದನೆ ಪಡೆಯಬಹುದು. ಕೋಳಿ ಸಾಕಣೆ ಪದ್ಧತಿಗಳನ್ನು ಮುಖ್ಯವಾಗಿ **ಬಯಲು ಪದ್ಧತಿ, ಮನೆಯ ಪದ್ಧತಿ,** ಹೀಗೆ ಎರಡು ಭಾಗಗಳಾಗಿ ವಿಂಗಡಿಸಬಹುದು.

ಬಯಲು ಪದ್ಧತಿ

ಇದು ಪುರಾತನ ಹಾಗೂ ಸಾಂಪ್ರದಾಯಿಕ ಕೋಳಿ ಸಾಕಣೆ ಪದ್ಧತಿ. ಹಳ್ಳಿಗಳಲ್ಲಿ ಈ ಪದ್ಧತಿ ಒಂದು ಸಾಮಾನ್ಯ ದೃಶ್ಯ. ಈ ಪದ್ಧತಿಯಲ್ಲಿ ಹಗಲೆಲ್ಲಾ ಮನೆಯ ಹೊರಗೆ ಬಯಲಲ್ಲೇ ಕೋಳಿಗಳ ಬದುಕು ; ರಾತ್ರಿಯ ಹೊತ್ತು ರಕ್ಷಣೆಗೆ ಮನೆಯಲ್ಲಿ ಸ್ಥಳ. ಕೋಳಿಗಳು ದಿನವೆಲ್ಲಾ ಅಲ್ಲಲ್ಲಿ ಮನೆಯಂಗಳದಲ್ಲಿ ಹಾಗೂ ಹೊರಗಡೆ ಓಡಾಡುತ್ತಾ ಸಿಕ್ಕಿದ ಕಾಳು, ಎಲೆ, ಹುಳುಹುಪ್ಪಟೆ, ಕ್ರಿಮಿಕೀಟಗಳನ್ನು ತಿಂದು ಜೀವಿಸುತ್ತವೆ. ಈ ಪದ್ಧತಿಯಲ್ಲಿ ಕೋಳಿಗಳಿಗೆ ಸಮತೋಲ ಆಹಾರ ಸಿಗುವುದಿಲ್ಲ. ಇಲ್ಲಿ ಕೋಳಿ ಸಾಕಣೆಗಾರರು ಕೋಳಿ ಸಾಕಣೆಯ ಬಗ್ಗೆ, ಆಹಾರದ ಬಗ್ಗೆ ತಲೆ ಕೆಡಿಸಿಕೊಳ್ಳುವುದೂ ಇಲ್ಲ. ಈ ಪದ್ಧತಿಯ ಸಾಕಣೆಯಿಂದ ಹೆಚ್ಚು ಲಾಭ ಪಡೆಯಲು ಸಾಧ್ಯವಿಲ್ಲ. ಏಕೆಂದರೆ ಕೇವಲ 10 ರಿಂದ 15 ಕೋಳಿಗಳನ್ನು ಮಾತ್ರ ಈ ವಿಧಾನದಲ್ಲಿ ಸಾಕಬಹುದಾಗಿದೆ.

ಮನೆಯ(ಸಾಂದ್ರ) ಪದ್ಧತಿ

ಇದು ಒಂದು ಆಧುನಿಕ ರೀತಿಯ ಕೋಳಿ ಸಾಕಣೆ ಪದ್ಧತಿ ಹಾಗೂ ಪ್ರಗತಿಯ ಪ್ರತೀಕ. ಸದಾ ಕೋಳಿಗಳನ್ನು ಮನೆಗಳಲ್ಲೇ ಇಟ್ಟಿದ್ದು ಒಳ್ಳೆಯ ನೀರು, ಸಮತೋಲನ ಆಹಾರ ಕೊಡಲಾಗುತ್ತದೆ. ಮನೆಯ ಪದ್ಧತಿಯಲ್ಲಿ ಡೀಪ್ ಲಿಟ್ಟರ್ ಪದ್ಧತಿ ಮತ್ತು ಪಂಜರ (ಕೇಜ್) ಪದ್ಧತಿ ಎಂದು ಎರಡು ವಿಧ.

ಡೀಪ್ ಲಿಟ್ಟರ್ ಪದ್ಧತಿ(ದಪ್ಪ ಸತ್ತೆಯ ವಿಧಾನ)

ಈ ಡೀಪ್ ಲಿಟ್ಟರ್ ಪದ್ಧತಿಯಲ್ಲಿ ಕೋಳಿಮನೆಯಲ್ಲೇ ಕೋಳಿಗಳ ಜೋಪಾಸನೆ ಮಾಡಲಾಗುತ್ತದೆ. ಕೋಳಿಗಳ ಮನೆಯಲ್ಲಿ ನೆಲದ ಮೇಲೆ ಸುಮಾರು 3-6 ಅಂಗುಲದಷ್ಟು ದಪ್ಪ ಲಿಟ್ಟರು ವಸ್ತುವನ್ನು ಹಾಕಲಾಗಿರುತ್ತದೆ. ಬತ್ತದ ಹೊಟ್ಟು, ಮರದ ಪುಡಿ, ಚೂರು ಚೂರಾಗಿ ಕತ್ತರಿಸಿದ ರಾಗಿ ಕಾಳು, ಕಬ್ಬಿನ ಸಿಪ್ಪೆ, ನೆಲಗಡಲೆ ಕಾಯಿ ಹೊಟ್ಟು, ಮುಸುಕಿನ ಜೋಳದ ಕಾಳು ತೆಗೆದ ತೆನೆ ಇವೇ ಆ ಲಿಟ್ಟರು ವಸ್ತುಗಳು. ಇವುಗಳಲ್ಲಿ ಅಗ್ಗದ ಬೆಲೆಗೆ ಹಾಗೂ ಸುಲಭವಾಗಿ ದೊರೆಯುವ ಯಾವುದೇ ಒಂದು ವಸ್ತುವನ್ನು ಕೋಳಿ ಮನೆಗಳಲ್ಲಿ ಹಾಸಲು ಲಿಟ್ಟರು ವಸ್ತುವಾಗಿ ಬಳಸಬಹುದು. ಲಿಟ್ಟರು ಕೋಳಿಗಳಿಗೆ ಮೆತ್ತನೆ ಹಾಸಿಗೆಯಂತಿರುತ್ತದೆ. ಇದು ಕೋಳಿ ಮನೆಗಳ ನೆಲವನ್ನು ಒಣ ಸ್ಥಿತಿಯಲ್ಲಿಟ್ಟಿರುತ್ತದೆ, ಕೋಳಿಗಳ ಹಿಕ್ಕೆಯಲ್ಲಿರುವ ತೇವಾಂಶವನ್ನು ಹೀರಿಕೊಳ್ಳುತ್ತದೆ ಹಾಗೂ ಶಾಖ ತಡೆಯ ಅವಾಹಕವಸ್ತುವಾಗಿ ವರ್ತಿಸುತ್ತದೆ. ಅಲ್ಲದೆ ಕೋಳಿಗಳಿಗೆ ವಿವಿಧ ಜೀವಸತ್ವಗಳನ್ನು ಅದರಲ್ಲೂ ವಿಶೇಷವಾಗಿ ಬಿ$_{12}$ ಜೀವಸತ್ವವನ್ನು ಒದಗಿಸುತ್ತದೆ. ಮೊಟ್ಟೆಗಳು ಒಡೆಯುವುದಿಲ್ಲ. ಎಲ್ಲಾ ಹವಾಮಾನ ಪದ್ಧತಿಯಲ್ಲೂ ಕೋಳಿಗಳನ್ನು ಈ ಪದ್ಧತಿಯಲ್ಲಿ ಸಾಕಬಹುದು. ಕೋಳಿಮನೆಯ ಲಿಟ್ಟರು ವಸ್ತುವನ್ನು ಕೊನೆಯಲ್ಲಿ ಗೊಬ್ಬರವಾಗಿ ಉಪಯೋಗಿಸಬಹುದು. ಲಿಟ್ಟರು ವಸ್ತುವಿನ ಮೇಲೆ ನೀರು ಚೆಲ್ಲದಂತೆ ಜಾಗರೂಕತೆ ವಹಿಸಬೇಕು. ಒಂದು ವೇಳೆ ನೀರು ಚೆಲ್ಲಿದರೆ ನೆನೆದ ಭಾಗದ ಲಿಟ್ಟರನ್ನು ಕೂಡಲೇ ತೆಗೆಯಬೇಕು.

ಲಿಟ್ಟರು ವಸ್ತುಗಳ ಆಯ್ಕೆ : ಡೀಪ್ ಲಿಟ್ಟರು ಪದ್ಧತಿಯಲ್ಲಿ ಬಳಸುವ ಲಿಟ್ಟರು ವಸ್ತುವು ಕೆಲವೊಂದು ವಿಶಿಷ್ಟ ಗುಣಗಳನ್ನು ಹೊಂದಿರಬೇಕು. ಅವು ಯಾವುದೆಂದರೆ :

1) ಲಿಟ್ಟರು ವಸ್ತುವು ಕ್ರಮೇಣ ಚೂರು ಚೂರಾಗಿ ಮುರಿದು ಸಣ್ಣ ಸಣ್ಣ ಕಣಗಳಾಗುವ ಗುಣದಿಂದ ಕೂಡಿರಬೇಕು.

2) ನೀರು ಅಥವಾ ತೇವಾಂಶವನ್ನು ಹೀರಿಕೊಳ್ಳುವಂತಿರಬೇಕು.

3) ಸಾವಯವ ವಸ್ತುವಾಗಿರಬೇಕು. ಅದರಲ್ಲಿ ಪ್ರೋಟೀನು ಇರಬಾರದು. ಪ್ರೋಟೀನು ವಸ್ತುವಿದ್ದರೆ ಸೂಕ್ಷ್ಮ ಏಕಾಣುಜೀವಿಗಳ ಕ್ರಿಯೆಯಿಂದ ಕೊಳೆತು ಅಮೋನಿಯಾ ಅನಿಲವು ಉತ್ಪತ್ತಿಯಾಗುತ್ತದೆ. ಈ ಅನಿಲವು ಕೆಟ್ಟ ವಾಸನೆ ಕೊಡುವುದೇ ಅಲ್ಲದೆ, ಉರಿಯನ್ನು ಉಂಟುಮಾಡುತ್ತದೆ.

4) ಇದು ಈ ಪದ್ಧತಿಯನ್ನು ಆರಂಭಿಸುವ ಸ್ಥಳಗಳಲ್ಲಿ ಸುಲಭವಾಗಿ ಸಾಕಷ್ಟು ಪ್ರಮಾಣದಲ್ಲಿ ಅಗ್ಗವಾಗಿ ದೊರೆಯುವಂತಿರಬೇಕು.

5) ಚೆನ್ನಾಗಿ ಒಣಗಿರಬೇಕು ಮತ್ತು ಬೂಷ್ಟುಗಳಿಂದ ಕೂಡಿರಬಾರದು.

6) ಶಾಖವನ್ನು ತಡೆಯುವ ಅವಾಹಕ ವಸ್ತುವಾಗಿರಬೇಕು.

ಲಿಟ್ಟರು ವಸ್ತುಗಳು : ಹಲವಾರು ಬಗೆಯ ವಸ್ತುಗಳನ್ನು ಲಿಟ್ಟರು ವಸ್ತುಗಳಾಗಿ ಬಳಸಿ ಪ್ರಯತ್ನಿಸಲಾಗಿದೆ. ಆ ಲಿಟ್ಟರು ವಸ್ತುಗಳೆಂದರೆ 1) ಗೋಧಿ ಬೂಸ 2) ಬತ್ತದ ಗೊಳಲೆ 3) ನೆಲಗಡಲೆಕಾಯಿ ಸಿಪ್ಪೆ 4) ಗರಗಸದ ಪುಡಿ 5) ಒಣ ಎಲೆಗಳು 6) ಕಬ್ಬಿನ ಮೃದು ಸಿಪ್ಪೆ 7) ಕಾಳು ತೆಗೆದ ತೆನೆಗಳು 8) ಮರದ ಹೊಟ್ಟು ಮುಂತಾದುವು.

ಇವುಗಳಲ್ಲಿ ಯಾವುದನ್ನಾದರೂ ಬಳಸಬಹುದು ; ಒಂದನ್ನೇ ಬಳಸಬಹುದು ಇಲ್ಲವೇ ಒಂದೆರಡು ಸೇರಿಸಿಯೂ ಬಳಸಬಹುದು.

ಆರಂಭಿಸುವ ಕಾಲ : ಡೀಪ್ ಲಿಟ್ಟರು ಆರಂಭಿಸಲು ಚಳಿಗಾಲನಂತರ ಇಲ್ಲವೇ ಬೇಸಿಗೆ ಕಾಲ ಉತ್ತಮ. ಅವಶ್ಯವಿದ್ದರೆ ಮಳೆಗಾಲ ಕಳೆದಮೇಲೆ ಪ್ರಾರಂಭಿಸಿದರೂ ಅಡ್ಡಿಯಿಲ್ಲ. ಕೆಲವುವೇಳೆ ಬಳಸಿರುವ ಹಳೆಯ ಮಾಗಿದ ಲಿಟ್ಟರನ್ನು ತಂದು ಒಂದು ಅಂಗುಲದಷ್ಟು ದಪ್ಪಗೆ ನೆಲದ ಮೇಲೆ ಹರಡುವ ಅಭ್ಯಾಸ ರೂಢಿಯಲ್ಲಿದೆ. ಇದು ಬೇಸಿಗೆ ಕಾಲದಲ್ಲಿ ಏಕಾಣುಜೀವಿಗಳು ವೃದ್ಧಿ ಹೊಂದಲೂ ಕಿಣ್ವ ಪ್ರಕ್ರಿಯೆಗೂ ಸೂಕ್ತವಾಗಿರುತ್ತದೆ ಮತ್ತು ಬಿ$_2$, ಬಿ$_{12}$, ನಿಯಾಸಿನ್ ಮುಂತಾದ ಬೆಳವಣಿಗೆ ವರ್ಧಕಜೀವಸತ್ವಗಳ ಉತ್ಪಾದನೆಗೂ ಸಹಾಯಕವಾಗುತ್ತದೆ.

ಡೀಪ್ ಲಿಟ್ಟರು ಆರಂಭಿಸುವ ಬಗೆ : ಕೋಳಿಮನೆಗಳನ್ನು ಮೊದಲು ಚೆನ್ನಾಗಿ ಶುಚಿ ಮಾಡಬೇಕು. ಸೋಂಕು ನಿವಾರಕ ಔಷಧಿಗಳನ್ನು ಚಿಮುಕಿಸಿ ತೊಳೆದು ಒಣಗಿಸಬೇಕು. ಲಿಟ್ಟರು ವಸ್ತುವನ್ನು ಮೊದಲು ನೆಲದ ಮೇಲೆ ಮೂರು ಅಂಗುಲ ದಷ್ಟು ದಪ್ಪವಾಗಿ ಹರಡಬೇಕು. ಒಂದು ವಾರದ ಬಳಿಕ ಮತ್ತೆ ಅದರ ಮೇಲೆ ಮೂರು ಅಂಗುಲದಷ್ಟು ದಪ್ಪ ಲಿಟ್ಟರುವಸ್ತು ಹರಡಬೇಕು. ಪುನಃ ಒಂದು ವಾರದನಂತರ ಅದರ ಮೇಲೆ 3-4 ಅಂಗುಲ ದಪ್ಪ ಲಿಟ್ಟರು ವಸ್ತು ಹರಡಬೇಕು. ಹಾಗೆ ಒಟ್ಟಿನಲ್ಲಿ 9–10 ಅಂಗುಲದಷ್ಟು ಆಳ ಲಿಟ್ಟರು ವಸ್ತು ಇರಬೇಕು. ಆಗಲೇ ಅದು 'ಡೀಪ್ ಲಿಟ್ಟರು' ಎನಿಸಿಕೊಳ್ಳುವುದು.

ಲಿಟ್ಟರು ವಸ್ತುವಿನ ನಿರ್ವಹಣೆ : ಸರಿಯಾದ ರೀತಿಯಲ್ಲಿ ಲಿಟ್ಟರು ವಸ್ತುವಿನ ನಿರ್ವಹಣೆ ಮಾಡಿದಲ್ಲಿ ಅದು ಒಂದು ಉತ್ತಮ ರೀತಿಯ ಕೋಳಿ ಸಾಕಣೆ ವಿಧಾನ ಎಂದು ಹೇಳಬಹುದು. ಸಾಮಾನ್ಯವಾಗಿ ಲಿಟ್ಟರಿನ ತೇವಾಂಶವು ಶೇ. 20ರಷ್ಟಿರಬೇಕು. ಕೋಳಿಮನೆಗಳಲ್ಲಿ ಸರಾಗವಾಗಿ ಗಾಳಿಬರಲು ಅನುಕೂಲವಿರುವಂತೆ ವ್ಯವಸ್ಥೆ ಇದ್ದರೆ

ಹಾಗೂ ಆಗಿಂದಾಗ್ಗೆ ಲಿಟ್ಟರನ್ನು ತಿರುವಿಹಾಕುತ್ತಿದ್ದರೆ ಮೇಲೆ ಹೇಳಿದ ಮಟ್ಟದಲ್ಲಿ ಲಿಟ್ಟರಿನ ತೇವಾಂಶವನ್ನು ಕಾಯ್ದಿರಿಸಿರಬಹುದು. ಮಳೆಗಾಲ ಮತ್ತು ಚಳಿಗಾಲಗಳಲ್ಲಿ ಲಿಟ್ಟರಿನ ತೇವಾಂಶವು ಶೇಕಡಾ 20ಕ್ಕಿಂತಲೂ ಹೆಚ್ಚಾಗುವ ಸಂಭವ ಇದ್ದಲ್ಲಿ ಆಗ 100 ಚದರ ಅಡಿಗೆ 7-11 ಕಿಲೋಗ್ರಾಮ್‌ಗಳಷ್ಟು ಸುಣ್ಣದ ಪುಡಿಯನ್ನು ಚಿಮುಕಿಸುವುದರ ಮೂಲಕ ಹೆಚ್ಚಿನ ತೇವಾಂಶವನ್ನು ನಿಯಂತ್ರಿಸಬಹುದು ; ಆದರೆ, ಸುಣ್ಣದ ಪುಡಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಚಿಮುಕಿಸಬಾರದು. ಸುಣ್ಣದ ಪುಡಿ ಹೆಚ್ಚಾದಲ್ಲಿ ಲಿಟ್ಟರು ವಸ್ತುವಿನ ಕಳಿಯುವಿಕೆ ಪ್ರಕ್ರಿಯೆಗೆ ಅಡ್ಡಿಯಾಗುತ್ತದೆ. ಲಿಟ್ಟರಿನ ಗೊಬ್ಬರ ಮಟ್ಟವೂ ಕಡಮೆಯಾಗುತ್ತದೆ. ಅಧಿಕ ತೇವಾಂಶವನ್ನು ನಿಯಂತ್ರಿಸಲು ಸುಣ್ಣದ ಪುಡಿಗೆ ಬದಲು ಸೂಪರ್ ಫಾಸ್ಫೇಟನ್ನಾದರೂ ಲಿಟ್ಟರಿನ ಮೇಲೆ ಚಿಮುಕಿಸಬಹುದು. ಇದು ಲಿಟ್ಟರಿನ ಗೊಬ್ಬರ ಗುಣವನ್ನು ಹೆಚ್ಚಿಸುವುದೇ ಅಲ್ಲದೆ, ಅಮೋನಿಯಮ್ ಅನಿಲ ಉತ್ಪತ್ತಿಯಾಗದಂತೆ ತಡೆಯುತ್ತದೆ.

ಬೇಸಿಗೆ ಕಾಲದಲ್ಲಿ ಅಥವಾ ಒಣ ಹವಾಮಾನದಲ್ಲಿ ಲಿಟ್ಟರು ತೀರ ಒಣಗಿ, ಪುಡಿಪುಡಿಯಾಗದಂತೆ ನೋಡಿಕೊಳ್ಳಬೇಕು.

ವಾರಕೊಮ್ಮೆ ಲಿಟ್ಟರು ತಿರುವಿ ಹಾಕುತ್ತಿರಬೇಕೆಂಬ ನಿಯಮವಿದ್ದರೂ ಅಗತ್ಯವೆನಿಸಿದಲ್ಲಿ ಅದರಲ್ಲೂ ವಿಶೇಷವಾಗಿ ಮಳೆಗಾಲ, ಚಳಿಗಾಲಗಳಲ್ಲಿ ಪ್ರತಿನಿತ್ಯವೂ ತಿರುವಿಹಾಕಬಹುದು. ಅಗತ್ಯವಿದ್ದರೆ ಹೊಸ ಲಿಟ್ಟರು ವಸ್ತುವನ್ನು ಅದರ ಜೊತೆಗೆ ಸೇರಿಸಬೇಕು.

ಲಿಟ್ಟರಿನ ಪಕ್ವತೆ : ಲಿಟ್ಟರು ವಸ್ತುವು ಕೊಳೆಯುವುದರಿಂದ ಶಾಖ ಉತ್ಪತ್ತಿಯಾಗುತ್ತದೆ. ಈ ಶಾಖದಲ್ಲಿ ಹಾಗೂ ಕೋಳಿಗಳ ಹಿಕ್ಕೆ (ಪಿಚಿಕೆ)ಯಲ್ಲಿರುವ ತೇವಾಂಶದ ಸಮಕ್ಷಮದಲ್ಲಿ ಏಕಾಣುಜೀವಿಗಳು ವೃದ್ಧಿಹೊಂದುತ್ತವೆ. ಇವು ಕಿಣ್ವಗಳನ್ನು ಉತ್ಪತ್ತಿ ಮಾಡುತ್ತವೆ. ಕಿಣ್ವಗಳ ಕ್ರಿಯೆಯಿಂದ ರೈಬೋಫ್ಲೇವಿನ್, $ಬಿ_{12}$ ಮತ್ತು ನಿಯಸಿನ್ ಜೀವಸತ್ವಗಳನ್ನು ಉತ್ಪತ್ತಿ ಮಾಡುತ್ತವೆ. ಲಿಟ್ಟರು ವಸ್ತು ಒಳ್ಳೆಯ ಪಕ್ವಕ್ಕೆ ಬರಲು ಸುಮಾರು ಆರು ತಿಂಗಳಾದರೂ ಬೇಕಾದೀತು. ಪೂರ್ತಿಯಾಗಿ ಪಕ್ವಕ್ಕೆ ತಿರುಗಿದ ಲಿಟ್ಟರು ಪುಡಿ ಪುಡಿಯಾಗಿರುತ್ತದೆ. ಅಮೋನಿಯಾದ ವಾಸನೆಯೂ ಇರುವುದಿಲ್ಲ.

ಡೀಪ್ ಲಿಟ್ಟರಿನ ಮೌಲ್ಯ : ಪಕ್ವವಾದ ಡೀಪ್ ಲಿಟ್ಟರು ಹೆಚ್ಚು ಪುಷ್ಟಿಕರ ಮತ್ತು ಕ್ಷೇಮಕರ. ಸಂಶೋಧಕರು ಇದರ ಬಗ್ಗೆ ಸಂಶೋಧನೆ ನಡೆಸಿ ಪಕ್ವವಾದ ಡೀಪ್ ಲಿಟ್ಟರಿನಲ್ಲಿರುವ ವಿವಿಧ ಬಗೆಯ ಬೆಳವಣಿಗೆ ವರ್ಧಕ ಅಂಶಗಳನ್ನು ವಿಶ್ಲೇಷಣೆ ಮಾಡಿದ್ದಾರೆ. ಲಿಟ್ಟರಿನಲ್ಲಿರುವ ವಿವಿಧ ಬಗೆಯ ಪೌಷ್ಟಿಕಾಂಶಗಳು ಮತ್ತು ಅವುಗಳ

ಪ್ರಮಾಣ ಇಂತಿವೆ :

ಸಾರಜನಕ (ನೈಟ್ರೋಜೆನ್	ಶೇಕಡಾ 2.6
ರಂಜಕ (ಫಾಸ್ಫರಸ್)	ಶೇಕಡಾ 2.73
ಪೊಟ್ಯಾಷ್	ಶೇಕಡಾ 2.00
ನಿಯಸಿನ್	4.5 ಮಿಲಿಗ್ರಾಮ್
	2.2 ಕಿಲೋಗ್ರಾಮ್
ರೈಬೋಫ್ಲೇವಿನ್	4.5 ಮಿಲಿಗ್ರಾಮ್
ಜೀವಸತ್ವ ಬಿ$_{12}$	118 ಮಿಲಿಗ್ರಾಮ್

ಸರಾಸರಿ ಎರಡು ಕಿಲೋಗ್ರಾಮ್ ತೂಕವಿರುವ, 1000 ಕೋಳಿಗಳಿಂದ ಒಂದು ವರ್ಷಕ್ಕೆ 25 ರಿಂದ 30 ಟನ್ನುಗಳಷ್ಟು ಅಥವಾ 100 ಕೋಳಿಗಳಿಂದ 2½-3 ಟನ್ನುಗಳಷ್ಟು ಲಿಟ್ಟರು ಗೊಬ್ಬರ ಸಿಗುತ್ತದೆ ; ಅಂದರೆ, ನೂರು ಕೋಳಿಗಳಿಂದ ಪ್ರತಿವರ್ಷ ಒಂದು ಎಕರೆ ತೋಟ ಅಥವಾ ಎರಡೂವರೆ ಎಕರೆಗಳಷ್ಟು ಹೊಲಕೆ. ಆಗುವಷ್ಟು ಗೊಬ್ಬರ ಸಿಗುತ್ತದೆ.

ಪಂಜರ (ಕೇಜ್) ಪದ್ಧತಿ

ಪಂಜರ ಪದ್ಧತಿ ಒಂದು ಆಧುನಿಕ ರೀತಿಯ ಕೋಳಿಸಾಕಣೆ ಪದ್ಧತಿ, ಈ ಪದ್ಧತಿಯಲ್ಲಿ ಪಂಜರಗಳೇ ಕೋಳಿಗಳ ವಾಸಸ್ಥಾನ. ಈ ಪದ್ಧತಿಯಲ್ಲಿ ಕಡಮೆ ಸ್ಥಳದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕೋಳಿಗಳನ್ನು ಸಾಕಬಹುದು. ಕೋಳಿಯಿಂದ ಕೋಳಿಗೆ ರೋಗ ಹರಡುವ ಸಾಧ್ಯತೆಗಳೂ ಕಡಮೆ, ಸ್ಥಳದ ಅಭಾವವಿರುವಲ್ಲಿ ಈ ಪದ್ಧತಿಯನ್ನು ಅನುಸರಿಸಬಹುದು. ಆದರೆ ಇದು ದುಬಾರಿ ವಿಧಾನ. ಕಟ್ಟಡದ ಮೇಲೂ ಪಂಜರಗಳ ಮೇಲೂ ಹೆಚ್ಚು ಹಣ ವೆಚ್ಚ ಮಾಡಬೇಕು, ಈ ಪದ್ಧತಿಯಲ್ಲಿ ಲಿಟ್ಟರು ವಸ್ತುವನ್ನು ಬಳಸಬೇಕಾಗಿಲ್ಲ ; ಸಾಧಾರಣ ಹವಾಮಾನವಿದ್ದರೆ ಸಾಕು, ಎಲ್ಲಿ ಬೇಕಾದರೂ ಈ ಪದ್ಧತಿಯಿಂದ ಕೋಳಿ ಸಾಕಣೆ ಮಾಡಬಹುದು.

ಪಂಜರ ಪದ್ಧತಿಯಲ್ಲಿ ಬ್ಯಾಟರಿ ಪಂಜರ, ಕಾಲೋನಿ ಪಂಜರ ಎಂದು ಎರಡು ವಿಧಗಳಿವೆ, ಸಂಶೋಧನೆಯ ಉದ್ದೇಶಗಳಿಗೆ ಬ್ಯಾಟರಿ ಪಂಜರಗಳನ್ನು ಉಪಯೋಗಿಸುತ್ತಾರೆ, ಇದರಲ್ಲಿ ಒಂದೊಂದು ಕೋಳಿಗೂ ಪ್ರತ್ಯೇಕವಾದ ಪಂಜರಗಳನ್ನು ಬಳಸಲಾಗುತ್ತದೆ. ವಾಣಿಜ್ಯ ಪ್ರಮಾಣದಿಂದ ಈ ಪದ್ಧತಿಯಲ್ಲಿ ಕೋಳಿ ಸಾಕಣೆ ಮಾಡುವವರು 3 ರಿಂದ 4 ಕೋಳಿಗಳನ್ನು ಇಡುವ ಕಾಲೋನಿ ಪಂಜರಗಳನ್ನು ಬಳಸುತ್ತಾರೆ. ಪಂಜರ ಪದ್ಧತಿಯ ಕೋಳಿಸಾಕಣೆ ಈಗೀಗ ನಮ್ಮ ದೇಶದಲ್ಲಿ ಹೆಚ್ಚು ಜನಪ್ರಿಯತೆ ಗಳಿಸುತ್ತಿದೆ.

ಕಾಲೋನಿ ಪಂಜರಗಳು ಅಥವಾ ಕ್ಯಾಲಿಫೋರ್ನಿಯಾ ಮಾದರಿಯ ಪಂಜರಗಳು ಮೊದಲಿಗೆ ಅಮೇರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ಆರಂಭಕ್ಕೆ ಬಂದವು. ಕಾಲೋನಿ ಪಂಜರ ಪದ್ಧತಿಯು ಅಮೇರಿಕಾದಲ್ಲಿ 1950ರಲ್ಲಿ ಆರಂಭಕ್ಕೆ ಬಂತು. 1950-60ರ ಅವಧಿಯಲ್ಲಿ ಈ ಪದ್ಧತಿಯು ವಿಶ್ವಾದ್ಯಂತ ಪ್ರಸಿದ್ಧಿಗೆ ಬಂದಿತು. ಕೇವಲ ಹತ್ತು ವರ್ಷದ ಸಣ್ಣ ಅವಧಿಯಲ್ಲೇ ಈ ಪದ್ಧತಿಯು ಅಮೇರಿಕಾದಲ್ಲಿ ಕೋಳಿ ಸಾಕಣೆಯಲ್ಲಿ ಒಂದು ಕ್ರಾಂತಿಯನ್ನೇ ಎಬ್ಬಿಸಿತು. ಈ ಪದ್ಧತಿಯು ಊಹೆಗೆ ಮಿಂಚಿದಂತೆ ರೈತರ ಕೋಳಿ ಹಿಂಡುಗಳು ಹೆಚ್ಚುವಂತೆ ಮಾಡಿತು.

ನಮ್ಮ ದೇಶದಲ್ಲಿ ಸುಮಾರು 1965-1970ರನಂತರ ಪ್ರವರ್ಧಮಾನಕ್ಕೆ ಬಂದು ಈಗ ಸಾಧಾರಣವಾಗಿ ಎಲ್ಲ ರೈತರೂ ಈ ವಿಧಾನವನ್ನು ಬಳಸಲು ಪ್ರಾರಂಭಿಸಿದ್ದಾರೆ.

ಡೀಪ್‌ಲಿಟ್ಟರ್ ಮತ್ತು ಪಂಜರ ಪದ್ಧತಿಗಳು ತಮ್ಮದೇ ಆದ ಅನುಕೂಲತೆ, ಪ್ರತಿಕೂಲತೆಗಳನ್ನು ಹೊಂದಿವೆ. ಅವುಗಳಲ್ಲಿ ಕೆಲವನ್ನು ಕೆಳಗೆ ಕೊಟ್ಟಿದೆ :

ಕೋಳಿಸಾಕಣೆಯಲ್ಲಿ ಡೀಪ್ ಲಿಟ್ಟರು ಮತ್ತು ಪಂಜರ ಪದ್ಧತಿಗಳ ಅನುಕೂಲತೆ ಹಾಗೂ ಪ್ರತಿಕೂಲತೆಗಳು

ಡೀಪ್ ಲಿಟ್ಟರು ಪದ್ಧತಿ	ಪಂಜರ ಪದ್ಧತಿ
1) ಕಟ್ಟಡಗಳಿಗಾಗಿ ಆರಂಭ ವೆಚ್ಚ ಕಡಮೆ.	ಆರಂಭ ವೆಚ್ಚ ಹೆಚ್ಚು. ಕಟ್ಟಡಗಳಿಗಲ್ಲದೆ, ಪಂಜರಗಳಿಗೂ ವೆಚ್ಚ ಮಾಡಬೇಕು.
2) ಲಿಟ್ಟರು ಶಾಖಪ್ರಸಾರವನ್ನು ತಡೆಗಟ್ಟುತ್ತದೆ.	ಈ ವಿಧಾನದಲ್ಲಿ ಶಾಖ ಪ್ರಸಾರವನ್ನು ತಡೆಗಟ್ಟುವುದು ಸಾಧ್ಯವಿಲ್ಲ.
3) ಲಿಟ್ಟರಿನಲ್ಲಿ 'ಬಿ' ಗುಂಪಿನ ಜೀವಸತ್ವಗಳು ತಯಾರಾಗುತ್ತವೆ.	ಹಿಕ್ಕೆ ಪಂಜರದಿಂದ ಕೆಳಗೆ ಬೀಳುವುದರಿಂದ 'ಬಿ' ಅನ್ನಾಂಗ ತಯಾರಾಗುವುದಿಲ್ಲ.
4) ನೊಣಗಳ ಹಾವಳಿ ಇರುವುದಿಲ್ಲ.	ಸೂಕ್ತ ರೀತಿಯಲ್ಲಿ ಜಾಗ್ರತೆ ವಹಿಸದಿದ್ದರೆ ನೊಣಗಳ ಹಾವಳಿ ಹೆಚ್ಚು.
5) ಹೆಚ್ಚು ಜಾಗಬೇಕು.	ಸ್ವಲ್ಪ ಜಾಗ ಸಾಕು.

6)	ರೋಗ ಬಂದರೆ ಕೋಳಿಯಿಂದ ಕೋಳಿಗೆ ರೋಗ ಬೇಗ ಹರಡುತ್ತವೆ.	ಕೋಳಿಯಿಂದ ಕೋಳಿಗೆ ರೋಗ ಹರಡುವ ಸಾಧ್ಯತೆಗಳು ಕಡಮೆ.
7)	ಕೀಳ್ಮಟ್ಟದ ಕೋಳಿಗಳನ್ನು ಬೇರ್ಪಡಿಸಿ ತೆಗೆಯುವುದು ಕಷ್ಟಸಾಧ್ಯ.	ಕೀಳ್ಮಟ್ಟದ ಕೋಳಿಗಳನ್ನು ಬೇರ್ಪಡಿಸಿ ತೆಗೆಯುವುದು ಸುಲಭ.
8)	ಯಾವುದೇ ರೀತಿಯ ಹವಾಮಾನ ಪರಿಸ್ಥಿತಿಗೆ ಈ ಪದ್ಧತಿ ಸರಿಹೋಗುತ್ತದೆ.	ಸಾಧಾರಣ ಹವಾಮಾನಕ್ಕೆ ಇದು ಸರಿ.
9)	ಆರ್ದ್ರತೆ (ಗಾಳಿಯಲ್ಲಿ ತೇವಾಂಶ)ಯ ಹವಾಮಾನದಲ್ಲಿ ಕೋಳಿಮನೆಯಲ್ಲಿರುವ ಲಿಟ್ಟರಿನ ನಿರ್ವಹಣೆ ಕಷ್ಟಸಾಧ್ಯ.	ಲಿಟ್ಟರು ನಿರ್ವಹಣೆ ಸಮಸ್ಯೆ ಇರುವುದಿಲ್ಲ.
10)	ವಿಪರೀತ ಬೇಸಿಗೆ ದಿನಗಳಲ್ಲಿ ಸೆಕೆಯಿಂದ ಕೋಳಿಗಳು ನಿತ್ರಾಣಗೊಳ್ಳುವುದಿಲ್ಲ	ಬೇಸಿಗೆ ದಿನಗಳಲ್ಲಿ ಸೆಕೆಯಿಂದ ಕೋಳಿಗಳು ನಿತ್ರಾಣಗೊಳ್ಳುತ್ತವೆ.
11)	ಕೋಳಿಗಳ ಮೇಲೆ ಒತ್ತಡ ಪ್ರಯಾಸ ಅಷ್ಟೊಂದಿರುವುದಿಲ್ಲ.	ಕೋಳಿಗಳ ಮೇಲೆ ಒತ್ತಡ ಪ್ರಯಾಸ ಇರುತ್ತದೆ.
12)	ಮೊಟ್ಟೆಗಳು ಸೀಳುವ ಅಥವಾ ಒಡೆಯುವ ಸಾಧ್ಯತೆಗಳು ಬಹಳ ಕಡಮೆ.	ಮೊಟ್ಟೆಗಳು ಸೀಳುವ ಅಥವ ಒಡೆಯುವ ಸಾಧ್ಯತೆ ಹೆಚ್ಚು. ಸುಮಾರು ಶೇ. 2-3ರಷ್ಟು ಮೊಟ್ಟೆಗಳು ಒಡೆಯುತ್ತವೆ.

ಅಧ್ಯಾಯ 4

ಕೋಳಿ ವಸತಿ

ಕೋಳಿಗಳಿಗೆ ಒಳ್ಳೆಯ ವಸತಿ ಸೌಕರ್ಯ ಅವಶ್ಯಕ. ಇದು ಕೋಳಿ ಸಾಕಣೆಯಲ್ಲಿ ಪೂರ್ವಾಪೇಕ್ಷಿತ ಅಂಶಗಳಲ್ಲಿ ಒಂದು. ಕೋಳಿಗಳಿಗೆ ಅದರಲ್ಲೂ ಬೆಳೆಯುತ್ತಿರುವ ಕೋಳಿ ಮರಿಗಳಿಗೂ ಮೊಟ್ಟೆಯಿಡುತ್ತಿರುವ ಹೇಂಟೆಗಳಿಗೂ ಒಳ್ಳೆಯ ವಸತಿ ಸೌಕರ್ಯ ಒದಗಿಸುವುದರಿಂದ ಕೋಳಿಗಳಿಂದ ಹೆಚ್ಚಿನ ಲಾಭ ಪಡೆಯಬಹುದು. ಕೋಳಿಮನೆಗಳು ಕೆಲವು ಅವಶ್ಯಕ ಗುಣಗಳನ್ನು ಹೊಂದಿರಬೇಕು. ಅವು ಕೋಳಿಗಳಿಗೆ ಹಿತಕರವಾಗಿರಬೇಕು. ಅರಾಮದಾಯಕವಾಗಿರಬೇಕು, ಸಾಕಷ್ಟು ಸ್ಥಳಾವಕಾಶವನ್ನು ಒದಗಿಸುವಂತಿರಬೇಕು. ಅವು ಬೇಸಿಗೆಯಲ್ಲಿ ತಂಪಾಗಿಯೂ, ಚಳಿಗಾಳದಲ್ಲಿ ಸಾಕಷ್ಟು ಬೆಚ್ಚಗೂ ಇರಬೇಕು ; ಮಳೆ, ಬಿಸಿಲು, ಬಿರುಗಾಳಿಗಳಿಂದ ಕೋಳಿಗಳಿಗೆ ರಕ್ಷಣೆ ನೀಡುವಂತಿರಬೇಕು. ಅವು ಸದಾ ಒಣಸ್ಥಿತಿಯಲ್ಲಿರಬೇಕು; ತೇವವಿರಕೂಡದು ; ಶುದ್ಧವಾದ ಗಾಳಿ ಸಂಚಾರಕ್ಕೆ ಅವಕಾಶವಿರಬೇಕು. ಚೆನ್ನಾಗಿ ಬೆಳಕು ಬೀಳುವಂತಿರಬೇಕು. ಚೆನ್ನಾಗಿ ಬೆಳಕಿಗೆ ಅವಕಾಶವಿಲ್ಲದ, ಕೊಳಕಾದ, ಅಹಿತಕರವಾದ ಮನೆಗಳಿಂದಾಗಿ ಕೋಳಿಗಳ ಬೆಳವಣಿಗೆಯು ಕುಂಠಿತಗೊಳ್ಳುತ್ತದೆ ; ಕೋಳಿಗಳಲ್ಲಿ ಸಾವಿನ ಸಂಖ್ಯೆ ಹೆಚ್ಚುತ್ತದೆ; ಮೊಟ್ಟೆ ಉತ್ಪಾದನೆ ಇಳಿಮುಖವಾಗುತ್ತದೆ. ಫಲವಂತಿಕೆ ಇಳಿಮುಖವಾಗುತ್ತದೆ.

ಕೋಳಿಮನೆಗಳಿಗಾಗಿ ಸ್ಥಳದ ಆಯ್ಕೆ

ಕೋಳಿಮನೆಗಳನ್ನು ಕಟ್ಟುವಾಗ ಎಲ್ಲ ದೃಷ್ಟಿಯಿಂದಲೂ ಅನುಕೂಲವಾಗಿರುವ ಸ್ಥಳವನ್ನು ಆಯ್ಕೆಮಾಡಿ, ಮನೆಗಳನ್ನು ಕಟ್ಟಬೇಕು.

ಕೋಳಿಮನೆಗಳನ್ನು ಕಟ್ಟುವಾಗ ಗಮನಿಸಬೇಕಾದ ಕೆಲವು ಅಂಶಗಳನ್ನು ಈ ಕೆಳಗೆ ಸೂಚಿಸಿದೆ. :

1) ಕೋಳಿಮನೆಗಳನ್ನು ಸ್ವಲ್ಪ ಎತ್ತರದ ಸ್ಥಳದಲ್ಲಿ ಕಟ್ಟಬೇಕು. ಕೋಳಿಮನೆಗಳಿಂದ ಕೊಳಚೆನೀರು ಸರಾಗವಾಗಿ ಹರಿದುಹೋಗುವಂತೆ ಮನೆಯ ಸುತ್ತುಮುತ್ತಲ ಜಾಗ ಸ್ವಲ್ಪ ಇಳಿಜಾರಾಗಿರಬೇಕು. ತಗ್ಗಿನ ಪ್ರದೇಶದಲ್ಲಿ ಕೋಳಿಮನೆಗಳನ್ನು ಕಟ್ಟುವುದರಿಂದ ನೀರು ಸರಾಗವಾಗಿ ಹರಿದುಹೋಗಲು ಅಡ್ಡಿಯಾಗುವುದೇ ಅಲ್ಲದೆ ಸುತ್ತುಮುತ್ತಲಿನ ಸ್ಥಳದಿಂದ ನೀರು ಕೋಳಿಮನೆಗಳೊಳಕ್ಕೆ ನುಗ್ಗುವ ಸಂಭವವೂ ಇರುತ್ತದೆ.

2) ಕೋಳಿ ಉತ್ಪನ್ನಗಳನ್ನು ಮಾರಾಟಕ್ಕೆ ಕಳಿಸಲು ಅನುಕೂಲವಾಗಿರುವಂತೆ

ಕೋಳಿಮನೆಗಳನ್ನು ಕಟ್ಟಲು ಆಯ್ಕೆಮಾಡುವ ಸ್ಥಳವು ಮುಖ್ಯರಸ್ತೆಗೆ ಇಲ್ಲವೇ ರೈಲುನಿಲ್ದಾಣಕ್ಕೆ ಸಮೀಪವಿರಬೇಕು.

3) ನೀರುಮತ್ತು ವಿದ್ಯುಚ್ಛಕ್ತಿಯ ಸೌಲಭ್ಯವಿರಬೇಕು.

ಕೋಳಿಮನೆ ಮಾದರಿಗಳು

ಕೋಳಿಮನೆಗಳಲ್ಲಿ ಹಲವು ಬಗೆ. ಕೋಳಿಗಳ ವಯಸ್ಸು, ಸಾಕಣೆ ಉದ್ದೇಶಗಳನ್ನವಲಂಬಿಸಿ ಕೋಳಿಮನೆಗಳನ್ನು ಈ ಕೆಳಗಿನ ರೀತಿಯಲ್ಲಿ ವಿಂಗಡಿಸಬಹುದು :

1) **ಮರಿಮನೆ :** ಈ ಮನೆ ಮರಿಗಳಿಗಾಗಿ. ಮರಿಗಳು 8-10 ವಾರ ವಯಸ್ಸಿಗೆ ಬರುವವರೆಗೂ ಈ ಮನೆಗಳು ಬೇಕು.

2) **ಬೆಳೆಯುವ ಕೋಳಿಗಳ ಸಾಕಣೆ ಮನೆ:** ಮರಿಗಳಿಗೆ ಹತ್ತುವಾರ ತುಂಬಿದ ಮೇಲೆ ಅವುಗಳನ್ನು ಈ ಮನೆಗೆ ರವಾನಿಸಿ ಸಾಕಬೇಕು. ಹತ್ತುವಾರ ವಯಸ್ಸಿನಿಂದ 18 ವಾರ ವಯಸ್ಸಿನ ಕೋಳಿಗಳಿಗೆ ಈ ಮನೆ.

3) **ಮೊಟ್ಟೆ ಇಡುವ ಕೋಳಿಗಳ ಮನೆ :** ಕೋಳಿಗಳು ಮೊಟ್ಟೆ ಇಡುವ ವಯಸ್ಸಿಗೆ ಬಂದಮೇಲೆ ಅವುಗಳನ್ನು ಸಾಕಣೆ ಮನೆಯಿಂದ ಈ ಮನೆಗೆ ರವಾನಿಸಬೇಕು. ಅಂದರೆ, ಕೋಳಿಗಳಿಗೆ 16-18 ವಾರ ವಯಸ್ಸು ತುಂಬಿದ ಅನಂತರ ಮುಂದಕ್ಕೆ ಅವು ಮೊಟ್ಟೆ ಇಡುತ್ತಿರುವವರೆಗೂ ಈ ಮನೆ.

4) **ತಳಿ ಸಂಕರಣಾ ಮನೆ:** ಈ ಮನೆ ಕೋಳಿಗಳ ತಳಿ ಎಬ್ಬಿಸುವುದಕ್ಕಾಗಿ.

5) **ಮಾಂಸದ ಕೋಳಿಮನೆ :** ಈ ಮನೆ ಮಾಂಸಕ್ಕಾಗಿ ಸಾಕುವ ಕೋಳಿಗಳಿಗಾಗಿ ಮಾತ್ರ. ಈ ಮನೆಯಲ್ಲಿ ಕೋಳಿಗಳು ಹುಟ್ಟಿದಂದಿನಿಂದ ಹಿಡಿದು 8-10 ವಾರದವರೆಗೆ ಇಲ್ಲೀ ಇರುತ್ತವೆ.

ಕೋಳಿಮನೆಗಳನ್ನು ಮೇಲ್ಛಾವಣಿ ಮಾದರಿಗಳನ್ನಾಧರಿಸಿ ಈ ಕೆಳಗಿನ ರೀತಿಯಲ್ಲಿ ವಿಂಗಡಿಸಬಹುದು :

1) ಗೇಬಲ್ ಮಾದರಿ ಮನೆಗಳು
2) ಶೆಡ್ ಮಾದರಿ ಮನೆಗಳು
3) ಅರೆ ಮಾನಿಟರ್ ಮನೆಗಳು
4) ಪೂರ್ಣ ಮಾನಿಟರ್ ಮನೆಗಳು

ಇವುಗಳಲ್ಲಿ ಗೇಬಲ್ ಮಾದರಿ ಮನೆಗಳು ಹೆಚ್ಚು ಸಾಮಾನ್ಯ.

ಮಾದರಿ ಕೋಳಿಮನೆಯ ಅಗತ್ಯತೆಗಳು

ಮಾದರಿಯ ಕೋಳಿಮನೆಗಳು ಎಂದರೆ ಅವು ಅತ್ಯವಶ್ಯ ಅಂಶಗಳನ್ನು ಪೂರೈಸಬೇಕು. ಕೋಳಿಮನೆಗಳನ್ನು ಕಟ್ಟುವಾಗ ಕೆಳಗಿನ ಕೆಲವು ಅಗತ್ಯತೆಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು :

1) ಕೋಳಿಮನೆಗಳನ್ನು ಕಟ್ಟಬೇಕಾದ ದಿಕ್ಕು
2) ನೆಲದ ಸ್ಥಳಾವಕಾಶ
3) ಉಷ್ಣತೆ
4) ಆರ್ದ್ರತೆ
5) ಗಾಳಿ ಕಿಂಡಿಗಳು
6) ಇಲಿ, ಹೆಗ್ಗಣಗಳ ಪ್ರವೇಶಕ್ಕೆ ತಡೆ
7) ಬೆಳಕಿಗೆ ಅನುಕೂಲತೆಗಳು

1 ಕೋಳಿಮನೆಗಳನ್ನು ಕಟ್ಟಬೇಕಾದ ದಿಕ್ಕು : ಕೋಳಿಮನೆಗಳನ್ನು ಯಾವಾಗಲೂ ಪೂರ್ವಕ್ಕೆ ಇಲ್ಲವೇ ಪಶ್ಚಿಮ ದಿಕ್ಕಿಗೇ ಮುಖಮಾಡಿ ಕಟ್ಟಬೇಕು. ಈ ದಿಕ್ಕುಗಳಲ್ಲಿ ಮನೆಗಳನ್ನು ಕಟ್ಟುವುದರಿಂದ ಮಳೆಗಾಲದಲ್ಲಿ ಮಳೆ ನೀರು ಮನೆಗಳನ್ನು ಪ್ರವೇಶಿಸುವುದಿಲ್ಲ. ಬೇಸಿಗೆಯ ದಿನಗಳಲ್ಲಿ ಸುಡುಬಿಸಿಲು ಮನೆಯೊಳಕ್ಕೆ ಬೀಳುವುದಿಲ್ಲ.

2 ನೆಲದ ಸ್ಥಳಾವಕಾಶ : ಕೋಳಿಮನೆಗಳಲ್ಲಿ ಕೋಳಿಗಳಿಗೆ ಸಾಕಷ್ಟು ಸ್ಥಳಾವಕಾಶವಿರಬೇಕು. ಪ್ರತಿಯೊಂದು ಕೋಳಿಗೂ ಅವಶ್ಯವಿರುವ ಸ್ಥಳಾವಕಾಶವು

ಕೋಷ್ಟಕ 1 : ಕೋಳಿಗಳಿಗೆ ಅಗತ್ಯವಿರುವ ಸ್ಥಳಾವಕಾಶ (ವಯಸ್ಸು, ತೂಕದ ಆಧಾರದ ಮೇಲೆ)

ಕೋಳಿಯ ವಯಸ್ಸು (ವಾರಗಳು)	ಹಗುರ ಕೋಳಿ (ಚದರ ಅಡಿಗಳಲ್ಲಿ)	ತೂಕದ ಕೋಳಿ (ಚದರ ಅಡಿಗಳಲ್ಲಿ)
0-4	$\frac{1}{2}$	$\frac{1}{2}$
4-8	$\frac{1}{2}$-$\frac{3}{4}$	$\frac{1}{2}$-$\frac{3}{4}$
8-12	$\frac{3}{4}$-1$\frac{1}{4}$	$\frac{3}{4}$-1$\frac{1}{2}$
13-20	1$\frac{1}{4}$-2	1$\frac{1}{2}$-2$\frac{1}{2}$
20 ವಾರಗಳ ಮೇಲೆ	2-2$\frac{1}{2}$	2$\frac{1}{2}$-3$\frac{1}{2}$

ವಿಶೇಷವಾಗಿ ಕೋಳಿಯ ವಯಸ್ಸು, ಗಾತ್ರ, ಹವಾಮಾನ ಪರಿಸ್ಥಿತಿ, ಮನೆಯ ಗಾತ್ರ, ಗಾಳಿಕಿಂಡಿಗಳು ಇವೇ ಮುಂತಾದುವುಗಳನ್ನು ಅವಲಂಬಿಸಿರುತ್ತದೆ. ಪ್ರತಿಯೊಂದು ಕೋಳಿಗೂ ಅವಶ್ಯಕವಿರುವ ಸ್ಥಳಾವಕಾಶವನ್ನು ಕೋಷ್ಟಕ 1ರಲ್ಲಿ ಕೊಟ್ಟಿದೆ.

ಕೋಳಿಗಳಿಗೆ ಸಾಕಷ್ಟು ಸ್ಥಳಾವಕಾಶ ಒದಗಿಸದಿದ್ದರೆ, ಕೋಳಿ ಸಾಕಣೆಯಲ್ಲಿ ನಷ್ಟ ಸಂಭವಿಸುವುದು ಖಚಿತ. ಆದರಿಂದ ಅನೇಕ ಸಮಸ್ಯೆಗಳೂ ಉದ್ಭವಿಸುತ್ತವೆ: ಮೊಟ್ಟೆಗಳು ಒಡೆಯುವ ಸಂಭವವಿರುತ್ತದೆ. ಕೋಳಿಗಳಲ್ಲಿ ಮೊಟ್ಟೆ ಉತ್ಪಾದನೆ ಕಡಮೆಯಾಗುತ್ತದೆ. ಕೋಳಿಗಳು ಪರಸ್ಪರ ಪುಕ್ಕಗಳನ್ನು ಕಿತ್ತುಕೊಳ್ಳುತ್ತವೆ: ಜಗಳವಾಡಿ ಗಾಯ ಮಾಡಿಕೊಳ್ಳುತ್ತವೆ. ರೋಗ ಸಂಭಾವ್ಯತೆಗಳು ಹೆಚ್ಚಾಗುತ್ತವೆ. ಕೀಳ್ಮಟ್ಟದ ಕೋಳಿಗಳ ಸಂಖ್ಯೆ ಹೆಚ್ಚುತ್ತದೆ. ಕೋಳಿಗಳು ಹೆಚ್ಚು ಸಂಖ್ಯೆಯಲ್ಲಿ ಸಾಯುತ್ತವೆ.

3 ಉಷ್ಣತೆ : ನಮ್ಮ ದೇಶ ಉಷ್ಣವಲಯದ ಪ್ರದೇಶ. ಇಲ್ಲಿ ಅಧಿಕ ಉಷ್ಣತೆ ಒಂದು ಸಮಸ್ಯೆ. ಇತರ ಜಾನುವಾರುಗಳಿಗಿಂತಲೂ ಕೋಳಿಗಳ ದೈಹಿಕ ಉಷ್ಣತೆ ಹೆಚ್ಚು. ದೈಹಿಕ ಶಾಖವನ್ನು ಕಡಮೆಮಾಡಲು ಕೋಳಿಗಳಲ್ಲಿ ಬೆವರುಗ್ರಂಥಿಗಳಿಲ್ಲ. ಅವು ಬೆವರುವುದಿಲ್ಲ. ಆದಕಾರಣ ಅವುಗಳ ದೈಹಿಕ ಶಾಖದ ಮಟ್ಟ ಕಡಮೆಯಾಗುವುದು ಕಷ್ಟ. ಆದ್ದರಿಂದ ಕೋಳಿಗಳನ್ನಿಡುವ ಮನೆಗಳು ತಂಪಾಗಿಯೇ ಇರಬೇಕು. ಕೋಳಿಮನೆಗಳಲ್ಲಿರುವ ಉಷ್ಣತೆ 100°F. ಗಳಿಗಿಂತಲೂ ಹೆಚ್ಚಿದ್ದಲ್ಲಿ ಕೋಳಿಗಳ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಕೋಳಿಗಳಿಗೆ ಹಿತಕರವಾದ ಉಷ್ಣತೆಯೆಂದರೆ 55°-75°F. ಅಧಿಕ ಶಾಖವಿದ್ದರೆ ಕೋಳಿಗಳಲ್ಲಿ ಮೊಟ್ಟೆ ಉತ್ಪಾದನೆ ಕಡಮೆಯಾಗುತ್ತದೆ. ಮೊಟ್ಟೆ ಚಿಪ್ಪಿನ ದಪ್ಪ ಕಡಮೆಯಾಗುತ್ತದೆ. ಕೋಳಿಗಳ ದೈಹಿಕ ಬೆಳವಣಿಗೆಯೂ ಕುಂಠಿತಗೊಳ್ಳುತ್ತದೆ. ಕೋಳಿಮನೆಯ ಉಷ್ಣತೆ 40° 45°F. ಗಿಂತಲೂ ಕಡಮೆಯಾದರೂ ಒಳ್ಳೆಯದಲ್ಲ.

ಕೋಳಿಮನೆಗಳ ಉಷ್ಣತೆಯಿಂದಾಗಿ ಕೋಳಿಗಳ ಮೇಲಾಗುವ ಪರಿಣಾಮಗಳು

ಉಷ್ಣತೆ (°F.ಗಳಲ್ಲಿ)	**ಪರಿಣಾಮಗಳು**
45-75	ತೃಪ್ತಿಕರವಾದ ಉಷ್ಣತೆ. ಉತ್ಪಾದನೆ ಹೆಚ್ಚು.
80-85	ಮೇವು ತಿನ್ನುವುದರಲ್ಲಿ ಸ್ವಲ್ಪ ಇಳಿಮುಖತೆ.
85-90	ಮೇವು ತಿನ್ನುವುದು ಬಹಳವಾಗಿ ಕಡಮೆಯಾಗಿ ನೀರು ಕುಡಿಯುವುದು ಹೆಚ್ಚಾಗುತ್ತದೆ. ಕೋಳಿ ಮೊಟ್ಟೆಗಳ ಗಾತ್ರ ಚಿಕ್ಕದಾಗುತ್ತದೆ. ಮೊಟ್ಟೆ ಚಿಪ್ಪು ತೆಳುವಾಗಿರುತ್ತದೆ.
90-95	ಕೋಳಿಗಳಲ್ಲಿ ಸ್ವಲ್ಪಮಟ್ಟಿಗೆ ಏದುಸಿರು ಕಂಡುಬರುತ್ತದೆ. ಕೊಕ್ಕು ತೆರೆದು ಉಸಿರಾಡತೊಡಗುತ್ತವೆ. ಇತರ ಪರಿಣಾಮಗಳು ಮೇಲೆ ಹೇಳಿದಂತೆಯೇ ಇರುತ್ತವೆ. ಬೆಳೆಯುತ್ತಿರುವ ಕೋಳಿಗಳಲ್ಲಿ ಪರಿಸ್ಥಿತಿ ಅಷ್ಟೊಂದು ತೀವ್ರವಾಗಿರುವುದಿಲ್ಲ.
95-100	ಈ ಉಷ್ಣತೆಯಲ್ಲಿ ಕೋಳಿಗಳು ತೀರ ನಿತ್ರಾಣವಾಗುವ ಸಂಭವವಿರುತ್ತದೆ. ಕೋಳಿಮನೆಗಳನ್ನು ತಂಪುಮಾಡುವ ಅವಶ್ಯಕ್ರಮಗಳನ್ನು ಕೈಗೊಳ್ಳಬೇಕು.

100° F. ಮತ್ತು ಕೋಳಿಗಳು ಸಾಯತೊಡಗುತ್ತವೆ. ಆದ್ದರಿಂದ ತಕ್ಷಣ ಅದಕ್ಕಿಂತಲೂ ಹೆಚ್ಚಿನ ಮನೆಯನ್ನು ತಂಪುಮಾಡಬೇಕು.

ಉಷ್ಣತೆ

ಅಧಿಕ ಉಷ್ಣತೆಯ ವಾತಾವರಣದಲ್ಲಿ ಕೋಳಿಮನೆಗಳನ್ನು ತಂಪಾಗಿರಿಸಲು ಹಲವು ಕ್ರಮಗಳುಂಟು. ಅವುಗಳಲ್ಲಿ ಕೆಲವನ್ನು ಈ ಕೆಳಗೆ ಸೂಚಿಸಿದೆ :

1) **ಬಿಸಿಲಿಗೆ ಅಡ್ಡ ಹಾಕುವಿಕೆ :** ಕೋಳಿಮನೆಗಳಲ್ಲಿ ಸರಿಯಾಗಿ ನೆರಳಿರಬೇಕು. ಸೂಕ್ತ ರೀತಿಯಲ್ಲಿ ನೆರಳನ್ನು ಒದಗಿಸುವುದರಿಂದ ಕೋಳಿಗಳ ಮೇಲೆ ಬೀಳುವ ಶೇಕಡಾ 30ರಷ್ಟು ಸೂರ್ಯರಶ್ಮಿಯನ್ನು ಕಡಮೆಮಾಡಬಹುದು. ಪೂರ್ವ-ಪಶ್ಚಿಮವಾಗಿ ಕಟ್ಟಿದ ಮನೆಗಳು ಉತ್ತರ-ದಕ್ಷಿಣಕ್ಕೆ ಕಟ್ಟಿದ ಮನೆಗಳಿಗಿಂತಲೂ ಹೆಚ್ಚು ತಂಪಾದ ವಾತಾವರಣವನ್ನು ಕಲ್ಪಿಸುತ್ತವೆ. ಪಕ್ಕದ ಗೋಡೆಗಳಿಗೆ ಸಾಕಷ್ಟು ಉದ್ದದ ಅಂದರೆ 30''-36''ಗಳಷ್ಟು ಸಜ್ಜೆಗಳನ್ನಿಡಬೇಕು. ಇದೂ ಸಹ ಗೋಡೆಗಳು ಬಿಸಿಯಾಗದಂತೆ ತಡೆಗಟ್ಟುತ್ತದೆ.

2) **ತಣ್ಣೀರಿನಿಂದ ತಂಪುಮಾಡುವಿಕೆ :** ಇದನ್ನು ಎರಡು ರೀತಿಯಲ್ಲಿ ಸಾಧಿಸಬಹುದು (1) ಮೇಲ್ಛಾವಣಿಯ ಮೇಲೆ ನೀರು ಚಿಮುಕಿಸುವಿಕೆ (2) ಒದ್ದೆ ಮಾಡಿದ ಗೋಣಿ ಚೀಲಗಳನ್ನು ಕಿಟಕಿ, ಬಾಗಿಲುಗಳಿಗೆ ಅಡ್ಡ ಹಾಕಿ, ಕೋಳಿ ಮನೆಯನ್ನು ಪ್ರವೇಶಿಸುವ ಬಿಸಿಗಾಳಿಯನ್ನು ತಂಪುಮಾಡುವಿಕೆ.

ಈ ಮೇಲಿನ ವಿಧಾನಗಳಿಂದ ಕೋಳಿಮನೆಗಳಲ್ಲಿ 10°-20°C ಗಳಷ್ಟು ಉಷ್ಣತೆಯನ್ನು ಕಡಮೆಮಾಡಬಹುದು.

4 **ಆರ್ದ್ರತೆ :** ಮೊಟ್ಟೆ ಇಡುವ ಕೋಳಿಗಳ ಮನೆಗಳಲ್ಲಿ ಶೇಕಡಾ 40-70ರಷ್ಟು ಸಾಪೇಕ್ಷ ಆರ್ದ್ರತೆ ಇರಬೇಕು. ಈ ಆರ್ದ್ರತೆಯಲ್ಲಿ ಲಿಟ್ಟರು ಧೂಳಾಗುವುದಿಲ್ಲ; ಒದ್ದೆಯಾಗುವುದಿಲ್ಲ. ಆರ್ದ್ರತೆಯನ್ನು ತೇವಾಂಶ ಸೂಚಿ ಬುರುಡೆ ಉಷ್ಣಮಾಪಕದಿಂದ ಅಳೆಯಬಹುದು. ತೇವಾಂಶ ಸೂಚಿ ಬುರುಡೆಯ ಸೂಚ್ಯಾಂಕವು ಹೆಚ್ಚಿದಾಗ ಅದು ಕೋಳಿಮನೆಯಲ್ಲಿ ಆರ್ದ್ರತೆ ಹೆಚ್ಚಿದೆ ಎಂದು ಸೂಚನೆ.

ಕೋಳಿಮನೆಯಲ್ಲಿ ಅಧಿಕ ಆರ್ದ್ರತೆಯೂ ಒಳ್ಳೆಯದಲ್ಲ; ಅಧಿಕ ಉಷ್ಣತೆಯೂ ಒಳ್ಳೆಯದಲ್ಲ. ಬಹಳ ಕಡಮೆ ಆರ್ದ್ರತೆಯಲ್ಲಿ ಕೋಳಿಗಳ ಗರಿಗಳು ಚೆನ್ನಾಗಿ ಬೆಳೆಯುವುದಿಲ್ಲ. ಕೋಳಿಗಳೂ ಸಹ ಗರಿಕೀಳುವುದು, ಗರಿತಿನ್ನುವುದು ಮುಂತಾದ ದುರಭ್ಯಾಸಗಳನ್ನು ಕಲಿತುಕೊಳ್ಳುತ್ತವೆ. ಒದ್ದೆಯ ಲಿಟ್ಟರು ಅಥವಾ ಲಿಟ್ಟರು ತಟ್ಟೆಯಂತಾಗಿರುವುದು ಕೋಳಿಮನೆಗಳಲ್ಲಿ ಆರ್ದ್ರತೆಯನ್ನು ಸೂಚಿಸುತ್ತದೆ. ಕೋಳಿಮನೆಗಳಲ್ಲಿರುವ ತೇವಾಂಶವು ರೋಗಾಣುಗಳ ಬೆಳವಣಿಗೆಗೆ ಅವಕಾಶ ಮಾಡಿಕೊಡುತ್ತದೆ.

5 ಗಾಳಿಕಿಂಡಿಗಳು : ಕೋಳಿಮನೆಗಳಲ್ಲಿ ಶುದ್ಧವಾದ ಗಾಳಿಯ ಪ್ರವೇಶಕ್ಕೂ ಒಳಗಿನ ಕೆಟ್ಟ ಹವೆ ಹೊರಸಾಗಲೂ ತಕ್ಕ ಅನುಕೂಲವಿರಬೇಕು. ಅದರಲ್ಲೂ ವಿಶೇಷ ವಾಗಿ, ಬೇಸಿಗೆಯಲ್ಲಿ ಗಾಳಿಕಿಂಡಿಗಳ ಅಗತ್ಯತೆ ಬಹಳ ಹೆಚ್ಚು. ಗಾಳಿಸಂಚಾರದಿಂದ ಬೇಸಿಗೆಯಲ್ಲಿನ ಅಧಿಕ ಶಾಖವು ಕಡಮೆಯಾಗುತ್ತದೆ. ನಿರ್ಮಲವಾದ ಗಾಳಿ ಮನೆ ಯೊಳಕ್ಕೆ ಪ್ರವೇಶಿಸುತ್ತದೆ. ಚಳಿಗಾಲದಲ್ಲಿ ಕೋಳಿಮನೆಗಳಲ್ಲಿ ಅಧಿಕ ಆರ್ದ್ರತೆ ಯಾಗುವುದಿಲ್ಲ.

6 ಇಲಿ ಹೆಗ್ಗಣಗಳ ಪ್ರವೇಶಕ್ಕೆ ತಡೆ : ಕೋಳಿಮನೆಯೊಳಕ್ಕೆ ಇಲಿ, ಹೆಗ್ಗಣ ಮುಂತಾದ ದಂಶಕಗಳು ಪ್ರವೇಶಿಸಲು ಸಾಧ್ಯವಾಗದಂತೆ ನೆಲದಿಂದ 1½ ಅಡಿ ಎತ್ತರದ ಗೋಡೆಗೆ ಒಂದು ಅಡಿ ಅಗಲದ ಅಡ್ಡಗೋಡೆಯನ್ನು ಹಾಕಿರಬೇಕು. ಈ ಅಡ್ಡ ಗೋಡೆಯಿಂದಾಗಿ ಇಲಿಗಳಿಗೆ ಕೋಳಿಮನೆಯೊಳಕ್ಕೆ ಪ್ರವೇಶಿಸಲು ಸಾಧ್ಯವಾಗುವುದಿಲ್ಲ.

ಕೋಳಿಮನೆಗಳಲ್ಲಿ ಇಲಿಗಳ ಕಾಟ ಒಂದು ಸಮಸ್ಯೆ. ಇವು ಕೋಳಿಮನೆಗಳನ್ನು ಪ್ರವೇಶಿಸಿ ಮೊಟ್ಟೆಗಳನ್ನು ತಿನ್ನುತ್ತವೆ. ಮರಿಗಳನ್ನು ಸಾಯಿಸುತ್ತವೆ. ಮೇವನ್ನು ತಿನ್ನುತ್ತವೆ. ಮೂರು ಇಲಿಗಳು ಒಂದು ಕೋಳಿ ತಿನ್ನುವಷ್ಟು ಮೇವನ್ನು ತಿನ್ನುತ್ತವೆ!

7 ಬೆಳಕಿಗೆ ಅನುಕೂಲತೆಗಳು : ಕೋಳಿಮನೆಗಳಲ್ಲಿ ಸಾಕಷ್ಟು ಬೆಳಕಿರಬೇಕು. ಇಲ್ಲಿ ಎಷ್ಟು ಬೆಳಕು ಇದೆ ಎಂಬುದು ಮುಖ್ಯವಲ್ಲ. ಬೆಳಕು ಯಾವ ರೀತಿಯಲ್ಲಿ ಕೋಳಿಮನೆಗಳಲ್ಲಿ ಹರಡಿಕೊಂಡಿದೆ ಎಂಬುದು ಮುಖ್ಯ. ಬೆಳಕು, ಕೋಳಿಮನೆಗಳಲ್ಲಿ ಎಲ್ಲಾ ಕಡೆಗಳಲ್ಲೂ ಸಮಾನವಾಗಿ ಹರಡಿರಬೇಕು. ಇದರಿಂದ ಕೋಳಿಗಳು ಆರೋಗ್ಯ ವಾಗಿರುತ್ತವೆ. ಬೆಳಕು ಎಲ್ಲ ಕಡೆಗಳಲ್ಲೂ ಸಮಾನವಾಗಿ ಹರಡಿಕೊಂಡಿರದೆ ಒಂದೇ ಕಡೆ ಮಾತ್ರವೇ ಇದ್ದರೆ ಕೋಳಿಗಳೆಲ್ಲಾ ಬೆಳಕಿರುವ ಕಡೆ ಒಟ್ಟುಗೂಡುತ್ತವೆ. ಮನೆಯ ಉಳಿದೆಲ್ಲ ಜಾಗವು ಖಾಲಿ ಬಿದ್ದಿರುತ್ತದೆ. ಕೋಳಿಮರಿಗಳಿಗೆ ಮನೆಗಳಲ್ಲಿ ದಿನದ 24 ಗಂಟೆಗಳೂ ಬೆಳಕಿರಬೇಕು. ಬೆಳೆಯುತ್ತಿರುವ ವಯಸ್ಕ ಕೋಳಿಗಳಿಗೆ ಹಗಲು ಹೊತ್ತಿನಲ್ಲಿ ಮಾತ್ರ ಬೆಳಕಿದ್ದರೆ ಸಾಕು. ಮೊಟ್ಟೆಯಿಡುತ್ತಿರುವ ಕೋಳಿಗಳಿಗೆ ಕೊನೆಯ ಪಕ್ಷ ದಿನಕ್ಕೆ 14-16 ಗಂಟೆಗಳಷ್ಟಾದರೂ ಬೆಳಕು ಬೇಕು. ಕೋಳಿಗಳ ಬೆಳಕಿನ ಅವಶ್ಯಕತೆಯನ್ನು ಸಾಮಾನ್ಯವಾಗಿ ಈ ರೀತಿ ಲೆಕ್ಕ ಮಾಡಬಹುದು- ಒಂದು ಕೋಳಿಗೆ ಒಂದು ವ್ಯಾಟ್ ಅಥವಾ 100 ಚದರ ಅಡಿ ವಿಸ್ತೀರ್ಣ ಜಾಗಕ್ಕೆ 40 ವ್ಯಾಟ್‌ಗಳ ಒಂದು ವಿದ್ಯುತ್ ಬಲ್ಬು ಬೇಕು. ಇದನ್ನು ಲಿಟ್ಟರ್ ಮಟ್ಟದಿಂದ 6 ಅಡಿ ಎತ್ತರದಲ್ಲಿ ನೇತುಹಾಕಿರಬೇಕು. ಸಾಮಾನ್ಯವಾಗಿ ಕೋಳಿಮನೆಗಳಲ್ಲಿ 40 ವ್ಯಾಟುಗಳ ಬಲ್ಬುಗಳನ್ನು ಬಳಸಲಾಗುತ್ತದೆ. ಕೋಳಿಮನೆಗಳಲ್ಲಿ ಸಾಮಾನ್ಯವಾಗಿ ಅದು ಸಣ್ಣದಿದ್ದರೆ ಒಂದು ಬಲ್ಬು ಸಾಕು. ಅದನ್ನು ಮನೆಯ ಮಧ್ಯದಲ್ಲಿ ನೇತು ಹಾಕಿದ್ದರೆ ಆಯಿತು. ಕೋಳಿಗಳ ಸಂಖ್ಯೆ ಹೆಚ್ಚಿದ್ದು ಕೋಳಿಮನೆ ದೊಡ್ಡದಿದ್ದರೆ

ಅಂತಹ ಬಲ್ಬುಗಳನ್ನು ಎರಡು ಅಥವಾ ಮೂರು ಸಾಲುಗಳಲ್ಲಿ ನೇತುಹಾಕಬೇಕಾಗುತ್ತದೆ.

ಕೋಳಿಮನೆಯ ಉಪಕರಣಗಳು

ಗೂಡುಗಳು

ಕೋಳಿಮರಿಗಳು ಬೆಳೆದು ದೊಡ್ಡವಾಗಿ ಮೊಟ್ಟೆ ಇಡುವಷ್ಟರ ಪ್ರಾಯಕ್ಕೆ ಬಂದಾಗ ಮತ್ತು ಮೊಟ್ಟೆಯಿಡಲು ಆರಂಭಿಸಿದಾಗ ಅವು ತಮ್ಮ ತಮ್ಮ ಸಹಜ ಪ್ರವೃತ್ತಿಯಂತೆ ಕತ್ತಲ ಹಾಗೂ ಏಕಾಂತ ಮೂಲೆಯನ್ನು ಹುಡುಕುತ್ತವೆ. ಮೂಲೆಯಲ್ಲಿ ಮುದುಡಿ ಕೂರುತ್ತವೆ. ಕೋಳಿಮನೆಯಲ್ಲಿ ಕೋಳಿಗಳು ಮೊಟ್ಟೆಯಿಡಲು ತಕ್ಕ ವ್ಯವಸ್ಥೆ ಮಾಡಿರಬೇಕು. ಇಲ್ಲದಿದ್ದರೆ ಅವು ನೆಲದ ಮೇಲೆಯೇ ಮೊಟ್ಟೆ ಇಟ್ಟು ಬಿಡುತ್ತವೆ. ಮೊಟ್ಟೆ ಒಡೆಯುವ ಹಾಗೂ ಗಲೀಜಾಗುವ ಸಂಭವ ಇರುತ್ತದೆ; ನಷ್ಟವೂ ಹೆಚ್ಚು. ಇದಕ್ಕಾಗಿ ಮಡಕೆ ಅಥವಾ ಘನ ಅಡಿ ಅಗಲದ ಮರದ ಪೆಟ್ಟಿಗೆಗಳನ್ನು ಇಡುವುದುಂಟು. ಯಾವುದನ್ನೇ ಬಳಸಲಿ, ಗೂಡಿನಲ್ಲಿ ಸಾಕಷ್ಟು ಸ್ಥಳಾವಕಾಶವಿರಬೇಕು: ಸಾಕಷ್ಟು ಅಗಲದ ಬಾಯಿ ಇರಬೇಕು. ಸುಲಭವಾಗಿ ಚೊಕ್ಕಟ ಮಾಡಲು ಸಾಧ್ಯವಾಗುವ ಗೂಡುಗಳಾಗಿರಬೇಕು: ಔಷಧಿ ಚಿಮುಕಿಸಲು ಅನುಕೂಲವಾಗಿರಬೇಕು: ಕತ್ತಲಿರಬೇಕು: ತಂಪಾಗಿರಬೇಕು: ಲಿಟ್ಟರುಪಸ್ತುವನ್ನು ಹರಡಿರಬೇಕು. ಮೊಟ್ಟೆಯಿಡುವ ಕೋಳಿ ಗೂಡಿನೊಳಗೆ ನಿರಾಂತಕವಾಗಿ ಆರಾಮವಾಗಿ ಕೂರುವಂತಿರಬೇಕು. ಗೂಡುಗಳನ್ನು ಒಂದೇ ಸಾಲಿನಲ್ಲಿ ಜೋಡಿಸಿರಬಹುದು: ಇಲ್ಲವೇ ಒಂದು ಸಾಲಿನ ಮೇಲೆ ಮತ್ತೊಂದು ಸಾಲು ಜೋಡಿಸಿರಬಹುದು.

ಗೂಡುಗಳನ್ನು ನೆಲದಿಂದ ಸುಮಾರು 18 ಅಂಗುಲದಷ್ಟು ಎತ್ತರದಲ್ಲಿ ನೆಟ್ಟಿರಬೇಕು. ಕೋಳಿ ಸುಲಭವಾಗಿ ಮೇಲೆ ಹಾರಿ ಗೂಡಿನೊಳಕ್ಕೆ ಪ್ರವೇಶಮಾಡಲು ಸಾಧ್ಯವಾಗುವಂತಿರಬೇಕು. ಗೂಡುಗಳನ್ನು ಬಹಳ ಎತ್ತರದಲ್ಲಿ ಇಟ್ಟಿದ್ದರೆ ಕೋಳಿಹಾರುವಾಗ ಪೆಟ್ಟಾಗಿ ಕೋಳಿಯ ಅಂಡಾಣುನಾಳ(ಗರ್ಭನಾಳ)ದೊಳಗೇ ಮೊಟ್ಟೆಯೊಡೆದು ಕೋಳಿಗೆ ಅಪಾಯವಾಗುವ ಸಂಭವವಿರುತ್ತದೆ. ಮೊಟ್ಟೆಗಳನ್ನು ಸುಲಭವಾಗಿ ಆಯ್ದುಕೊಳ್ಳಲು ಸಾಧ್ಯವಾಗುವಂತೆ ಕಡಮೆವೇಳೆ ಒಡಿಸುವ ರೀತಿಯಲ್ಲಿ ಗೂಡುಗಳನ್ನು ಕೋಳಿಮನೆಯಲ್ಲಿ ಸಾಲಾಗಿ ಜೋಡಿಸಿದರೆ ಒಳ್ಳೆಯದು. ಪ್ರತಿ ಐದು ಕೋಳಿಗಳಿಗೆ ಒಂದರಂತೆ ಗೂಡುಗಳನ್ನಿಟ್ಟಿರಬೇಕು. ವಿಪರೀತ ಸೆಕೆ ಹವಾಮಾನದ ಪ್ರದೇಶಗಳಲ್ಲಿ ಅಥವಾ ಕಾಲದಲ್ಲಿ ಲೋಹದಿಂದ ಮಾಡಿದ ಗೂಡುಗಳನ್ನು ಬಳಸಬಾರದು. ಅವು ವಿಪರೀತ ಬಿಸಿಯಾಗುತ್ತವೆ.

ಬೋನುಗೂಡುಗಳು

ಬೋನುಗೂಡುಗಳನ್ನು 1899ರಲ್ಲಿ ಜಾರ್ಜ್ ಲೈಟಲ್ ಅಮೇರಿಕಾ ಸಂಯುಕ್ತ

ಸಂಸ್ಥಾನದಲ್ಲಿ ಬಳಕೆಗೆ ತಂದ. ಇದರಲ್ಲಿ ಕೋಳಿಯ ಮೊಟ್ಟೆ ಉತ್ಪಾದನಾ ಸಾಮರ್ಥ್ಯವನ್ನು ಅಳೆಯಬಹುದು. ಪ್ರತಿ ಕೋಳಿಯ ಮೊಟ್ಟೆಯನ್ನು ಗುರುತಿಸಲು ಇದರಲ್ಲಿ ಸಾಧ್ಯ. ಆದ್ದರಿಂದ ಈ ರೀತಿಯ ಬೋನುಗೂಡುಗಳನ್ನು ಚೆನ್ನಾಗಿ ಮೊಟ್ಟೆಯಿಡುವ ಕೋಳಿಯನ್ನು ಆರಿಸಿಕೊಳ್ಳಲು ಮತ್ತು ತಳಿಸಂಕರಣೆಯಲ್ಲಿ ಬಳಸುತ್ತಾರೆ. ಇದರಲ್ಲಿ ಒಮ್ಮೆ ಕೋಳಿ ಗೂಡಿನೊಳಕ್ಕೆ ಪ್ರವೇಶಿಸಿದರೆ ಸಾಕು, ಮತ್ತೆ ಅದು ಅಲ್ಲಿಂದ ತಪ್ಪಿಸಿಕೊಂಡು ಹೊರಬರಲು ಸಾಧ್ಯವಾಗುವುದಿಲ್ಲ. ಗೂಡಿನ ಬಾಗಿಲು ತಾನಾಗಿ ಮುಚ್ಚಿಕೊಳ್ಳುತ್ತದೆ. ಮತ್ತೆ ಯಾರಾದರೂ ಬಂದು ಬಾಗಿಲು ತೆಗೆದು ಕೈಯಿಂದ ಕೋಳಿ ಹಿಡಿದು ಹೊರಹಾಕಬೇಕಷ್ಟೇ. ಅಂತಹ ಒಂದು ವ್ಯವಸ್ಥೆಯನ್ನು ಬೋನುಗೂಡುಗಳಲ್ಲಿ ಮಾಡಲಾಗಿರುತ್ತದೆ.

ಮೊಟ್ಟೆಯಿಡುವಾಗ ಬೋನುಗೂಡನ್ನು ಪ್ರವೇಶಮಾಡಬೇಕು ಎಂಬುದು ಮತ್ತು ಹಾಗೆ ಪ್ರವೇಶ ಮಾಡುವುದರ ಬಗ್ಗೆ ಕೋಳಿಗಳಿಗೆ ತರಪೇತಿ ನೀಡುವುದು ಕಷ್ಟ. ಬೋನುಗೂಡಿನ ಬಾಗಿಲು ಸರಿಯಾಗಿ ಕೆಲಸ ಮಾಡದಿದ್ದಲ್ಲಿ ಒಂದೇ ಗೂಡಿನೊಳಕ್ಕೆ ಎರಡು, ಮೂರು ಕೋಳಿಗಳು ಹೋಗಿ ಕೂರುತ್ತವೆ; ಅಂತಹ ಸಮಯದಲ್ಲಿ ಗೂಡಿನಲ್ಲಿರುವ ಮೊಟ್ಟೆ ಯಾವ ಕೋಳಿಯದು ಎಂದು ಗುರುತಿಸುವುದು ಕಷ್ಟ. ಇದರಲ್ಲಿ ಕೆಲಸ ಹೆಚ್ಚು. ಉಷ್ಣವಲಯ ಪ್ರದೇಶಗಳಲ್ಲಿ ಇವುಗಳನ್ನು ವರ್ಷಾದ್ಯಂತ ಬಳಸಲಾಗದು. ಬೇಸಿಗೆ ಕಾಲದಲ್ಲಿ ವಿಪರೀತ ಸೆಕೆಯಿಂದಾಗಿ ಕೋಳಿಗಳು ಬೋನು ಗೂಡಿನೊಳಗೇ ಸಾಯಬಹುದು.

ಮೇವುಣಿಕ(ಫೀಡರು)ಗಳು

ಮೇವುಣಿಕಗಳಲ್ಲಿ ನಾನಾ ತರಹ ಮಾದರಿಗಳಿವೆ.

1) ಉದ್ದನೆಯ ಹಾಗೂ ಕಿರಿದಾದ ಮೇವುಣಿಕಗಳು
2) ಚಪ್ಪಟೆಯಾದ (ಸಪಾಟಾದ) ಮೇವುಣಿಕಗಳು
3) ನೇತುಹಾಕುವ ಮೇವುಣಿಕಗಳು

ಯಾವುದೇ ರೀತಿಯ ಮೇವುಣಿಕಗಳಿರಲಿ, ಅವು ಸಾಧ್ಯವಾದಮಟ್ಟಿಗೂ ಮೇವು ನಷ್ಟ ತಡೆಯುವಂತಹವಾಗಿರಬೇಕು. ಮೇವುಣಿಕಗಳು ಮರದ ಹಲಗೆಯಿಂದ ಮಾಡಿದ್ದಿರಬಹುದು, ಸತುವು ಬಳಿದ ಕಬ್ಬಿಣದ ತಗಡಿನಿಂದ ತಯಾರಿಸಿದ್ದಿರಬಹುದು. ಇವುಗಳನ್ನು ಶುಚಿ ಮಾಡುವುದು ಸುಲಭ. ಮರದ ಮೇವುಣಿಕಗಳನ್ನು ಬಳಸಿದಲ್ಲಿ ಮೇವು, ಸಂದುಗಳಲ್ಲಿ ಸೇರಿಕೊಂಡು ಮೇವಿನಲ್ಲಿರುವ ಪ್ರೋಟೀನು ಅಂಶವು ಕೊಳೆತು ನಾತ ಬರುತ್ತದೆ ಹಾಗೂ ಇದನ್ನು ಚೊಕ್ಕಟಮಾಡುವುದು ಕಷ್ಟಸಾಧ್ಯ. ಕೋಳಿಗಳು ಮೇವುಣಿಕಗಳಲ್ಲಿ ಮೇವು ತಿನ್ನಲು ಪ್ರತಿಯೊಂದಕ್ಕೂ ಈ ಮುಂದೆ ತಿಳಿಸಿರುವಷ್ಟು ಸ್ಥಳಾವಕಾಶವಿರಬೇಕು :

ಪ್ರತಿ ಕೋಳಿಗೆ ಮೇಯಲು ಅಗತ್ಯವಾಗಿರುವ ಸ್ಥಳಾವಕಾಶ

ಕೋಳಿಯ ವಯಸ್ಸು (ವಾರಗಳಲ್ಲಿ)	ಸ್ಥಳಾವಕಾಶ (ಅಂಗುಲಗಳಲ್ಲಿ)
0-2	1-1½
3-6	2-2½
7-12	3-4
13 ಮತ್ತು ಅದಕ್ಕಿಂತಲೂ ಹೆಚ್ಚು	5-6

ದುಂಡಾಕಾರದ ಮೇವುಣಿಕಗಳಲ್ಲಿ ಪ್ರತಿ ಕೋಳಿಗೂ ಮೇಲೆ ತಿಳಿಸಿದ ಸ್ಥಳಾವಕಾಶದಲ್ಲಿ ಅರ್ಧ ಅಳತೆ ಸಾಕು.

ಮೇವುಣಿಕಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಈ ಕೆಳಗಿನ ಅಂಶಗಳನ್ನು ಪರಿಗಣಿಸಬೇಕು:

1) ಮೇವುಣಿಕಗಳು ಮೇವು ತುಂಬಲು ಮತ್ತು ಚೊಕ್ಕಟಮಾಡಲು ಸುಲಭವಾಗಿರಬೇಕು.
2) ಮೇವು ನಷ್ಟವಾಗದ ಹಾಗೆ ತಯಾರಿಸಿರಬೇಕು.
3) ಕೋಳಿಗಳು ಅದರ ಮೇಲೆ ಕೂತುಕೊಳ್ಳುವ ಸಾಧನವಾಗಿರಬಾರದು.

ನೀರುಣಿಕ(ನೀರು ಕುಡಿಯಲು ಸಾಧನ)ಗಳು

ಇವು ಕೋಳಿಗಳು ನೀರು ಕುಡಿಯಲು ಕೋಳಿಮನೆಗಳಲ್ಲಿ ಇಟ್ಟಿರುವ ಪಾತ್ರೆಗಳು. ಇವು ನೀರು ಕೆಡದ ಹಾಗೆ ಶುಚಿಯಾಗಿಟ್ಟಿರಬೇಕು. ಬೇಸಿಗೆಕಾಲದಲ್ಲೂ ಸೆಕೆಯ ಹವಾಮಾನದಲ್ಲೂ ನೀರನ್ನು ತಂಪಾಗಿಟ್ಟಿರಬೇಕು. ನೀರು ಬಿಸಿಯಾಗಬಾರದು. ಸುಲಭವಾಗಿ ಚೊಕ್ಕಟ ಮಾಡುವಂತಿರಬೇಕು. ನೀರುಣಿಕ ಮಣ್ಣಿನಿಂದ ಮಾಡಿದ್ದಾಗಿರಬಹುದು ಇಲ್ಲವೇ ಲೋಹದಿಂದ ಮಾಡಿದ್ದಾಗಿರಬಹುದು. ಮಣ್ಣಿನ ಮಡಕೆಯಾಗಿರಲಿ, ಲೋಹದ ಪಾತ್ರೆಯಾಗಿರಲಿ ಇವುಗಳನ್ನು ಲಿಟ್ಟರಿನಿಂದ ಸ್ವಲ್ಪ ಎತ್ತರದಲ್ಲಿ ಇಟ್ಟಿರಬೇಕು. ನೀರು ಲಿಟ್ಟರಿನಿಂದ ಗಲೀಜಾಗಬಾರದೆಂಬುದೇ ಇದರ ಉದ್ದೇಶ.

0-4 ವಾರದೊಳಗಿನ ಮರಿಗಳಿಗೆ 1 ಅಂಗುಲ ವ್ಯಾಸ ಕಂಠವಿರುವ ನೀರುಣಿಕಗಳು ಬೇಕು. 5-12 ವಾರದೊಳಗಿನ ಮರಿಗಳಿಗೆ 2 ಅಂಗುಲ ವ್ಯಾಸ ಕಂಠವಿರುವ ನೀರುಣಿಕಗಳು ಬೇಕು. 12 ವಾರಗಳು ಮತ್ತು ಅದಕ್ಕಿಂತಲೂ ಹೆಚ್ಚಿನ ವಯಸ್ಸಿನ ಕೋಳಿಗಳಿಗೆ 3-4 ಅಂಗುಲ ಕಂಠವ್ಯಾಸವಿರುವ ನೀರುಣಿಕಗಳು ಬೇಕು.

ಪ್ರತಿ ನೂರು ಕೋಳಿಗಳಿಗೆ ಬೇರೆ ಬೇರೆ ಮಾದರಿಯ ನೀರುಣಿಕಗಳಲ್ಲಿ ಬೇರೆ ಬೇರೆ ವಯಸ್ಸಿನ ಕೋಳಿಗಳಿಗೆ, ಈ ಮುಂದೆ ತಿಳಿಸಿದ ಅಳತೆಯ ಸ್ಥಳಾವಕಾಶವಿರಬೇಕು.

ಕೋಳಿಗಳ ವಯಸ್ಸು (ವಾರಗಳಲ್ಲಿ)	ಉದ್ದನೆಯ ಮತ್ತು ಕಿರಿದಾದ ನೀರುಣಿಕ (ಅಂಗುಲಗಳಲ್ಲಿ)	ಚಿಲುಮೆ ಮಾದರಿಯ ನೀರುಣಿಕ (ಲೀಟರುಗಳಲ್ಲಿ)
0-2	10	9
3-12	40	18
13 ಮತ್ತು ಹೆಚ್ಚು	100	22.5

ಬೇಸಿಗೆಯಲ್ಲಿ ನೀರು ಕುಡಿಯಲು ಸ್ಥಳಾವಕಾಶ ಹೆಚ್ಚಿಸಬೇಕು. ಅದರಲ್ಲೂ ವಿಶೇಷವಾಗಿ ಚಿಲುಮೆ ಮಾದರಿಯ ನೀರುಣಿಕಗಳಲ್ಲಿ ಇದು ತೀರ ಅಗತ್ಯ. ಅಳತೆಯನ್ನು ಒಂದಕ್ಕೆ ಎರಡರಷ್ಟು ಹೆಚ್ಚಿಸಬೇಕು.

ಅಡ್ಡಕಂಬಿ ಅಥವಾ ಗೂಡುಗಂಬಿ

ಇದು ಮರ(ಕೋಲು ಅಥವಾ ಕಿರಿದಾದ ಹಲಗೆ)ದಿಂದ ಮಾಡಿದ್ದಾಗಿರಬಹುದು. ನೆಲದಿಂದ 18 ಅಂಗುಲ ಎತ್ತರದಲ್ಲಿ ನೇತುಹಾಕಿರಬೇಕು. ದಂಡಿಗೆಯು 2'' x 2'' ಅಳತೆಯಿರಬೇಕು ಮತ್ತು ತುದಿಗಳು ದುಂಡಗಿರಬೇಕು. ವಿದ್ಯುತ್ ತಂತಿಗಳನ್ನು ರಕ್ಷಿಸಲು ಬಳಸುವ 2'' ವ್ಯಾಸದ ಕಾಪುಕೊಳವೆ(ಕಾಂಡಿಟ್)ಯನ್ನು ಇದಕ್ಕಾಗಿ ಬಳಸಬಹುದು. ಗೂಡುಗಂಬಿಯ ಮೇಲೆ ಹಗುರ ಕೋಳಿಗಾದರೆ 6 ಅಂಗುಲ ಸ್ಥಳಾವಕಾಶ, ಮಾಂಸದ ಕೋಳಿಗಾದರೆ 9 ಅಂಗುಲ ಸ್ಥಳಾವಕಾಶವಿರಬೇಕು. ಗೂಡುಗಂಬಿ ಗೋಡೆಗೆ ತಾಕಬಾರದು. ದಂಡಗಳು ಒಂದರಿಂದ ಮತ್ತೊಂದಕ್ಕೆ ಒಂದು ಅಡಿ ದೂರವಿರಬೇಕು.

ಅಡ್ಡಕಂಬಿ ಬಳಕೆಯಲ್ಲಿಯ ಕೆಲವು ಅನುಕೂಲತೆಗಳು ಈ ಕೆಳಕಂಡಂತಿವೆ :

1) ಇದು ಕೋಳಿಗಳಿಗೆ ಸಹಜ ರೀತಿಯ ವಿರಾಮಸ್ಥಳ ಅಥವಾ ಗೂಡಾಗಿರುತ್ತದೆ.

2) ನೆಲದ ಮೇಲೆ ಕೋಳಿಗಳು ಗುಂಪು ಕೂಡುವುದನ್ನು ತಪ್ಪಿಸುತ್ತದೆ.

3) ಕೋಳಿಮನೆಗಳಲ್ಲಿ ನೈರ್ಮಲ್ಯೀಕರಣ ಕಾಯ್ದಿರಿಸಲು ನೆರವಾಗುತ್ತದೆ.

ಗೂಡುಗಂಬಿ(ಅಡ್ಡಕಂಬಿ)ಗಳು ಬಹಳ ಎತ್ತರದಲ್ಲಿದ್ದರೆ ಹೊಟ್ಟೆಗಳಲ್ಲಿ ರಕ್ತದ ಕಲೆಗಳು ಬರಲು ಕಾರಣವಾಗುತ್ತದೆ. ಕೆಲವುವೇಳೆ ಕೋಳಿಯ ಅಂಡಾಣುನಾಳ (ಗರ್ಭನಾಳ)ದಲ್ಲೇ ಮೊಟ್ಟೆ ಒಡೆಯುವುದುಂಟು, ಗೂಡು(ಅಡ್ಡ)ಗಂಬಿಯ ತುದಿಗಳನ್ನು ದುಂಡಗೆ ಮಾಡದಿದ್ದರೆ ಕೋಳಿಗಳಲ್ಲಿ ಕಾಲೂತ ಕಾಣಿಸಿಕೊಳ್ಳುತ್ತದೆ,

ಗ್ರಿಟ್ ಹಾಪರು(ಮರಳು ತುಂಬಿದ ಗೋಪುರದಾಕಾರದ ಮೇವುಣಿಕ)ಗಳು

ಮೇವಿನಲ್ಲಿ ಮರಳು(ಗ್ರಿಟ್) ಸೇರಿಸದೇ ಇದ್ದರೆ ಗ್ರಿಟ್‌ಗಾಗಿಯೇ ಪ್ರತ್ಯೇಕ

ವಾದ ಗ್ರಿಟ್ ಹಾಪರುಗಳ ವ್ಯವಸ್ಥೆ ಮಾಡಿರಬೇಕು. ಕೋಳಿಮನೆ ಸಣ್ಣದಿದ್ದರೆ ಮನೆಗೆಲ್ಲಾ ಒಂದೇ ಒಂದು ಗ್ರಿಟ್ ಹಾಪರ್ ಸಾಕು. ಅದನ್ನು ಮನೆಯ ಮಧ್ಯದಲ್ಲಿ ಇಡಬೇಕು. ಇದು ಒಂದು ಅಡಿ ಉದ್ದವಿರಬೇಕು. ಕೋಳಿಮನೆ ದೊಡ್ಡದಿದ್ದರೆ ಅಂತಹ ನಾಲ್ಕು ಹಾಪರ್‌ಗಳು ಬೇಕಾಗುತ್ತವೆ. ಇವುಗಳನ್ನು ನಾಲ್ಕು ಮೂಲೆಗಳಲ್ಲೂ ಒಂದೊಂದು ಇಡಬೇಕು.

ಕೃತಕ ಬೆಳಕಿನ ವ್ಯವಸ್ಥೆ

ಕನಿಷ್ಠ ಪಕ್ಷ ದಿನದಲ್ಲಿ 14-16 ಗಂಟೆಗಳವರೆಗಾದರೂ ಕೋಳಿಮನೆಗಳಲ್ಲಿ ಕೃತಕ ಬೆಳಕಿನ ವ್ಯವಸ್ಥೆ ಮಾಡಿರಬೇಕು. ಪ್ರತಿ ಕೋಳಿಗೆ ಒಂದು ವ್ಯಾಟ್ ವಿದ್ಯುತ್ ಬೆಳಕಿನ ದರದಂತೆ ಇಲ್ಲವೆ 22 ಚದರ ಅಡಿ ಜಾಗಕ್ಕೆ ಒಂದು ವ್ಯಾಟ್ ಬೆಳಕಿನ ದರದಂತೆ ಕೃತಕ ಬೆಳಕಿನ ವ್ಯವಸ್ಥೆ ಮಾಡಿರಬೇಕು. ಮನೆತುಂಬಾ ಒಂದೇ ಸಮನಾಗಿ ಬೆಳಕು ಹರಡಿರುವಂತೆ ವ್ಯವಸ್ಥೆ ಮಾಡಿರಬೇಕು. ಬಲ್ಬುಗಳು ನೆಲದಿಂದ 9 ಅಡಿ ಎತ್ತರದಲ್ಲಿರಬೇಕು. ಬಲ್ಬುಗಳಿಗೆ ಕಾವುಮರೆ(ಕಾವಳ) ಹಾಕಿರಬೇಕು. ಬಲ್ಬುಗಳು ಚೊಕ್ಕಟವಾಗಿರಬೇಕು. ಮನೆ 15 ಅಡಿ ಅಗಲವಿದ್ದರೆ ಮಧ್ಯದಲ್ಲಿ ಒಂದು ಸಾಲಿನಲ್ಲಿ ಬಲ್ಬುಗಳು ಸಾಕು. ಮನೆ 20-25 ಅಡಿ ಅಗಲವಿದ್ದರೆ ಬೆಳಕು ಸಮನಾಗಿ ಮನೆಗೆಲ್ಲಾ ಹರಡಿರುವಂತೆ ಎರಡು ಸಾಲಿನಲ್ಲಿ ಬಲ್ಬುಗಳನ್ನು ಹಾಕಿರಬೇಕು. ಮನೆ 25 ಅಡಿಗಳಿಗಿಂತಲೂ ಹೆಚ್ಚು ಅಗಲವಿದ್ದರೆ ಬಲ್ಬುಗಳನ್ನು 3 ಅಥವಾ 4 ಸಾಲುಗಳಲ್ಲಿ ಜೋಡಿಸಿರಬೇಕು.

ಅಧ್ಯಾಯ 5

ಆಹಾರ(ಮೇವು)

ಕೋಳಿಗಳಿಗೆ ಉತ್ತಮ ಆಹಾರ ಬೇಕು. ಅದು ಸಮತೋಲವಾಗಿರಬೇಕು. ವೈಜ್ಞಾನಿಕ ರೀತಿಯಲ್ಲಿ ತಿನ್ನಿಸಬೇಕು. ಆಗ ಮಾತ್ರ ಕೋಳಿಗಳಿಂದ ಅಧಿಕ ಉತ್ಪಾದನೆ ಪಡೆಯಲು ಸಾಧ್ಯ. ಕೋಳಿಗಳ ಆಹಾರದ ಬೆಲೆ ಹೆಚ್ಚು. ಕೋಳಿ ಫಾರ್ಮ್‌ನ ಒಟ್ಟು ವೆಚ್ಚದಲ್ಲಿ ಶೇಕಡಾ 60-65ರಷ್ಟು ಆಹಾರದ್ದಾಗಿರುತ್ತದೆ. ಆರ್ಥಿಕ ದೃಷ್ಟಿಯಿಂದ ಇದೊಂದು ಹೆಚ್ಚು ಗಮನಾರ್ಹ ಅಂಶ. ಪ್ರತಿ ಕೋಳಿಸಾಕಣೆಗಾರನಿಗೂ ಕಡಮೆ ಬೆಲೆಯ ಎಲ್ಲ ಪೌಷ್ಟಿಕಾಂಶಗಳನ್ನು ಒದಗಿಸುವ ಆಹಾರದ ಪೂರೈಕೆ ಅಗತ್ಯ.

ಪೌಷ್ಟಿಕಾಂಶಗಳು

ಕೋಳಿಗಳಿಗೆ ಅಗತ್ಯವಿರುವ ಪೌಷ್ಟಿಕಾಂಶಗಳೆಂದರೆ ನೀರು, ಶರ್ಕರ ಪಿಷ್ಟ, ಕೊಬ್ಬು ಮತ್ತು ಪ್ರೋಟೀನು(ಸಸಾರಜನಕ)ಗಳು.

ನೀರು : ನೀರು ಕೋಳಿಗಳ ಆಹಾರದಲ್ಲಿ ಬಹುಮುಖ್ಯವಾದ ಅಂಶ. ಕೋಳಿಗಳಿಗೆ ಶುಚಿಯಾದ ನೀರನ್ನು ಸದಾಕಾಲ ಒದಗಿಸಬೇಕು. ಕೋಳಿಗಳಿಗೆ ನೀರಿನ ಅಭಾವ ಇರಕೂಡದು. ನೀರು ಆಹಾರ ಜೀರ್ಣಿಕೆ (ಪಚನ) ಮತ್ತು ಜೀವವಸ್ತುಕರಣ ಕ್ರಿಯೆಗಳಿಗೆ ಅಗತ್ಯ. ಸಾಮಾನ್ಯವಾಗಿ ಕೋಳಿಗಳು ಆಹಾರದ ಎರಡರಷ್ಟು ನೀರು ಕುಡಿಯುತ್ತವೆ. ವಾತಾವರಣದ ಉಷ್ಣತೆ, ಕೋಳಿಯ ವಯಸ್ಸು, ಉತ್ಪದನಾ ಮಟ್ಟ ಇವು ಕೋಳಿಗಳ ನೀರಿನ ಅಗತ್ಯತೆಯ ಮೇಲೆ ಹೆಚ್ಚು ಪ್ರಭಾವ ಬೀರುತ್ತವೆ.

ಶರ್ಕರ ಪಿಷ್ಟ: ಸಸ್ಯಗಳು ಮತ್ತು ಕಾಳುಗಳಲ್ಲಿ ಶರ್ಕರ ಪಿಷ್ಟಗಳಿರುತ್ತವೆ. ಇವುಗಳ ಒಣತೂಕದಲ್ಲಿ ಶೇಕಡಾ 75ಭಾಗ ಶರ್ಕರ ಪಿಷ್ಟಗಳು. ಇವು ಶರೀರದ ಶಕ್ತಿಯ ಮುಖ್ಯ ಮೂಲ. ಶರೀರಕ್ಕೆ ಬೇಕಾದ ಶಕ್ತಿಯನ್ನು ನೀಡಿ, ಉಳಿದ ಭಾಗ ಕೊಬ್ಬಿನ ರೂಪದಲ್ಲಿ ಶೇಖರವಾಗುತ್ತದೆ. ಕೋಳಿ ಆಹಾರದಲ್ಲಿ ಶೇಕಡಾ 65-70 ಭಾಗ ಧಾನ್ಯದ ಕಾಳುಗಳು ಮತ್ತು ಅವುಗಳ ಉಪಉತ್ಪನ್ನಗಳು. ಇವೇ ಕೋಳಿಗಳ ಆಹಾರದಲ್ಲಿ ಪ್ರಧಾನ ಶಕ್ತಿಮೂಲ ಶರ್ಕರ ಪಿಷ್ಟಗಳು.

ಕೊಬ್ಬು : ಕೊಬ್ಬು, ಶಕ್ತಿಯ ಭಂಡಾರ. ಇದು ಶರ್ಕರ ಪಿಷ್ಟಗಳಿಗಿಂತಲೂ 2.25 ರಷ್ಟು ಹೆಚ್ಚಿನ ಶಕ್ತಿಯನ್ನು ಪಡೆದಿರುತ್ತದೆ. ಹಂದಿ ಕೊಬ್ಬು, ಪ್ರಾಣಿಯ ಗಟ್ಟಿ

ಕೊಬ್ಬು(ಪ್ರಾಣಿ ಚರಬಿ) ಇವು ಕೊಬ್ಬಿನ ಅತ್ಯುತ್ತಮ ಮೂಲಗಳು. ಇವುಗಳನ್ನು ಮೊಟ್ಟೆಯಿಡುವ ಕೋಳಿಗಳ ಇಲ್ಲವೇ ಮಾಂಸದ ಕೋಳಿಗಳ ಆಹಾರದಲ್ಲಿ ಶೇಕಡಾ 5ರವರೆಗೆ ಸೇರಿಸಬಹುದು. ಆದರೆ ನಮ್ಮ ದೇಶದಲ್ಲಿ ಕೊಬ್ಬು ಮತ್ತು ಎಣ್ಣೆಗಳ ಬೆಲೆ ಹೆಚ್ಚು. ಆದ್ದರಿಂದ ಕೋಳಿ ಆಹಾರದಲ್ಲಿ ಇದನ್ನು ಸೇರಿಸಲು ಅಡ್ಡಿ. ಜೊತೆಗೆ ಕೊಬ್ಬು ಹೆಚ್ಚಿರುವ ಆಹಾರಕ್ಕೆ ಕೆಟ್ಟವಾಸನೆ ಉಂಟಾಗುತ್ತದೆ. ಮೇದಸ್ಸಿನ ಆಮ್ಲಗಳನ್ನು ಹೆಚ್ಚು ಕಾಲ ಗಾಳಿ. ಸೆಕೆ, ಸೂರ್ಯನ ಬೆಳಕು ಮುಂತಾದುವುಗಳಿಗೆ ಒಡ್ಡುವುದರಿಂದ ಕಮಟು ನಾತ ಉಂಟಾಗುತ್ತದೆ. ಆದ್ದರಿಂದ ಇದನ್ನು ಆಮ್ಲಜನಕ ಸಂಯೋಗ ನಿರೋಧಕಗಳನ್ನು ಬಳಸಿ ಸ್ಥಿರೀಕರಣ ಮಾಡಬೇಕು.

ಪ್ರೋಟೀನು : ಪ್ರೋಟೀನುಗಳು ಸಸ್ಯ ಮತ್ತು ಪ್ರಾಣಿಗಳಲ್ಲಿ ವ್ಯಾಪಕವಾಗಿ ಹರಡಿರುತ್ತವೆ. ಶರೀರದ ಬೆಳವಣಿಗೆಗೆ, ನಶಿಸಿಹೋದ ಭಾಗಗಳನ್ನು ಸರಿಪಡಿಸಲು ಮತ್ತು ಮೊಟ್ಟೆ ಉತ್ಪಾದನೆ ಮುಂತಾದುವುಗಳಿಗೆ ಪ್ರೋಟೀನುಗಳು ಬಹು ಮುಖ್ಯ. ಪ್ರೋಟೀನುಗಳು ಅಮೈನೋ ಆಮ್ಲಗಳಿಂದ ರೂಪುಗೊಂಡಿರುತ್ತವೆ. ಒಟ್ಟು ಸುಮಾರು 23 ಅಥವಾ ಅದಕ್ಕಿಂತಲೂ ಹೆಚ್ಚಿನ ಅಮೈನೋ ಆಮ್ಲಗಳಿವೆ. ಇವುಗಳಲ್ಲಿ ಕೆಲವನ್ನು ಶರೀರದ ಕೋಶಿಕೆಗಳೇ ತಯಾರಿಸಬಲ್ಲವು. ಆದ್ದರಿಂದ ಇವುಗಳನ್ನು ಆಹಾರದಲ್ಲಿ ಸೇರಿಸಿಕೊಡಬೇಕಾಗಿಲ್ಲ. ಇವುಗಳಿಗೆ ' ಅನಗತ್ಯ ಅಮೈನೋ ಆಮ್ಲ ' ಗಳೆಂದು ಹೆಸರು. ಕೆಲವು ಅಮೈನೋ ಅಮ್ಲಗಳನ್ನು ಶರೀರವು ತಯಾರಿಸಲಾರದು. ಇವುಗಳನ್ನು ಆಹಾರದ ಜೊತೆಯಲ್ಲಿ ಸೇರಿಸಿಕೊಡಬೇಕು. ಇವುಗಳಿಗೆ 'ಅಗತ್ಯ ಅಮೈನೋ ಆಮ್ಲ 'ಗಳು ಎಂದು ಹೆಸರು.

ಅಗತ್ಯ ಅಮೈನೋ ಆಮ್ಲಗಳು	**ಅನಗತ್ಯ ಅಮೈನೋ ಆಮ್ಲಗಳು**
ಆರ್ಜಿನೀನ್	ಆಸ್‌ಪಾರಿಟಿಕ್ ಆಮ್ಲ
ಗ್ಲೈಸೀನ್	ಗ್ಲುಟಾಮಿಕ್ ಆಮ್ಲ
ಹಿಸ್ಟಿಡೀನ್	ಸೀರೀನ್
ಐಸೊಲೂಸೀನ್	ಪ್ರೋಲೀನ್
ಲೂಸೀನ್	ಹೈಡ್ರಾಕ್ಸಿ ಪ್ರೋಲೀನ್
ಲೈಸೀನ್	ಆಲನೀನ್
ಮೆಥಿಯೋನೀನ್	
ಫೀನೈಲ್ ಆಲನೀನ್	
ಥ್ರಿಯೋನೀನ್	
ಟ್ರಿಪ್ಟೋಫೇನ್	
ವ್ಯಾಲೀನ್	

ಅಗತ್ಯ ಅಮೈನೋ ಆಮ್ಲಗಳಲ್ಲಿ ಲೈಸೀನ್, ಮೆಥಿಯೋನೀನ್,ಆರ್ಜಿನೀನ್ ಮತ್ತು ಟ್ರಿಪ್ಟೋಫೇನ್ ಇವು ಬಹುಮುಖ್ಯ ಅಮೈನೋ ಆಮ್ಲಗಳು. ಇವು ಸಾಮಾನ್ಯವಾಗಿ ಮೂಮೂಲು ಕೋಳಿ ಆಹಾರಗಳಲ್ಲಿ ಕೊರತೆಯಾಗಿರುತ್ತವೆ. ಆದರೆ ಪ್ರಾಣಿ ಮೂಲ ಪ್ರೋಟೀನುಗಳಲ್ಲಿ ಸರ್ವೇಸಾಮಾನ್ಯವಾಗಿ ಹೆಚ್ಚಾಗಿರುತ್ತವೆ. ಶ್ರೇಷ್ಠ ಗುಣಮಟ್ಟದ ಮೀನಿನ ಪುಡಿಯು ಈ ಅಗತ್ಯ ಅಮೈನೋ ಆಮ್ಲಗಳ ಅತ್ಯಂತ ಮುಖ್ಯ ಮೂಲ.

ಜೀವಸತ್ವಗಳು

ಜೀವಸತ್ವಗಳು ಸಾವಯುವ ವಸ್ತುಗಳು. ಇವು ಸಸ್ಯ ಮತ್ತು ಪ್ರಾಣಿಗಳಲ್ಲಿ ಬಹಳ ಕಡಮೆ ಪ್ರಮಾಣದಲ್ಲಿರುತ್ತವೆ: ಶರೀರದ ಆರೋಗ್ಯ, ಬೆಳವಣಿಗೆ ಮತ್ತು ಸಂತಾನೋತ್ಪತ್ತಿ ಕ್ರಿಯೆಗಳಿಗೆ ಕಡಮೆ ಪ್ರಮಾಣದಲ್ಲೇ ಆದರೂ ಬೇಕೇ ಬೇಕು. ಆದ್ದರಿಂದ ಇವುಗಳನ್ನು ಆಹಾರದಲ್ಲಿ ಒದಗಿಸಲೇ ಬೇಕು. ಇವುಗಳನ್ನು ಕೊಬ್ಬಿನಲ್ಲಿ ಕರಗುವ ಹಾಗೂ ನೀರಿನಲ್ಲಿ ಕರಗುವ ಜೀವಸತ್ವಗಳೆಂದು ಎರಡು ಗುಂಪುಗಳಾಗಿ ವಿಂಗಡಿಸಬಹುದು:

ಕೊಬ್ಬಿನಲ್ಲಿ ಕರಗುವ ಜೀವಸತ್ವಗಳು

ಜೀವಸತ್ವ - ಎ
ಜೀವಸತ್ವ - ಬಿ
ಜೀವಸತ್ವ - ಡಿ
ಜೀವಸತ್ವ - ಕೆ

ನೀರಿನಲ್ಲಿ ಕರಗುವ ಜೀವಸತ್ವಗಳು

ಥೈಯಮಿನ್ (ಬಿ$_1$)	ಪ್ಯಾಂಟೋಥೀನಿಕ್ ಆಮ್ಲ
ರೈಬೋಫ್ಲೇವಿನ್ (ಬಿ$_2$)	ಬಯೋಟಿನ್
ಪೈರಿಡಾಕ್ಸಿನ್ (ಬಿ$_6$)	ಕೋಲೀನ್
ನೈಯಾಸಿನ್	ಫೋಲಿಕ್ ಆಮ್ಲ
ಜೀವಸತ್ವ ಬಿ$_{12}$	

ಕೋಳಿ ಆಹಾರದಲ್ಲಿ ಸಾಮಾನ್ಯವಾಗಿ ಜೀವಸತ್ವ - ಎ, ಜೀವಸತ್ವ -ಬಿ$_2$ ಜೀವಸತ್ವ - ಡಿ$_3$ ಗಳ ಕೊರತೆ ಇರುತ್ತದೆ. ಆದ್ದರಿಂದ ಇವುಗಳನ್ನು ಆಹಾರದ ಜೊತೆಯಲ್ಲಿ ಸೇರಿಸಿಕೊಡಬೇಕು.

ಖನಿಜಾಂಶಗಳು

ಖನಿಜಾಂಶಗಳು ಆಹಾರದಲ್ಲಿ ತೀರ ಅಗತ್ಯ. ಮೂಳೆರಚನೆ, ರಕ್ತ ತಯಾರಿಕೆ

ಮತ್ತು ಮೊಟ್ಟೆ ಚಿಪ್ಪು ರಚನೆಗಳಿಗೆ ಖನಿಜಾಂಶ ಅಗತ್ಯ. ಸಾಧಾರಣವಾಗಿ ಕೋಳಿ ಆಹಾರದಲ್ಲಿ ಕೊರತೆ ಬೀಳುವ ಖನಿಜಾಂಶಗಳೆಂದರೆ ಕ್ಯಾಲ್ಸಿಯಂ, ರಂಜಕ, ಮ್ಯಾಂಗನೀಸ್, ಸತು(ಜಿಂಕ್),ಸೋಡಿಯಂ, ಕ್ಲೋರೀನ್. ಕಬ್ಬಿಣ ಮತ್ತು ಅಯೋಡಿನ್. ಇವು ತೀರ ಅಗತ್ಯ ಖನಿಜಾಂಶಗಳು. ಇವುಗಳನ್ನು ಖನಿಜಾಂಶ ಪೂರೈಕೆಯಲ್ಲಿ ಕೋಳಿಗಳಿಗೆ ಒದಗಿಸಬೇಕು. ಇತರ ಖನಿಜಾಂಶಗಳು ಕೋಳಿಗಳಿಗೆ ಮಾಮೂಲಿ ಆಹಾರದಲ್ಲೇ ಸಾಕಷ್ಟು ಲಭಿಸುತ್ತವೆ. ಅವು ಆಹಾರದಲ್ಲೇ ಸಾಕಷ್ಟಿರುವುದರಿಂದ ಪ್ರತ್ಯೇಕವಾಗಿ ಪೂರೈಸಬೇಕಾದ ಅವಶ್ಯಕತೆ ಇಲ್ಲ.

ಆಹಾರ ಸೇರ್ಪುಗಳು

ಇವು ಪೌಷ್ಟಿಕ ಆಹಾರಾಂಶಗಳಲ್ಲ. ಈ ವಸ್ತುಗಳನ್ನು ಆಹಾರದಲ್ಲಿ ಸೇರಿಸಿ ಕೊಡುವುದರಿಂದ ಕೋಳಿಗಳಿಗೆ ಬರಲಿರುವ ಕೆಲವು ರೋಗಗಳನ್ನು ತಡೆಗಟ್ಟುವಿಕೆ ಇಲ್ಲವೇ ಆಹಾರಾಂಶ ಸ್ಥಿರೀಕರಣ ಇಲ್ಲವೇ ಕೋಳಿಗಳ ಬೆಳವಣಿಗೆವರ್ಧಕ ಅಥವಾ ಮೊಟ್ಟೆ ಉತ್ಪಾದನೆ ಕಾಪಾಡುವಿಕೆ ಇವೇ ಮುಂತಾದ ಕೆಲವೊಂದು ಉಪಯೋಗಕರ ಪರಿಣಾಮಗಳುಂಟಾಗುತ್ತವೆ. ಸಾಮಾನ್ಯವಾಗಿ ಬಳಸುವ ಕೆಲವು ಆಹಾರ ಸೇರ್ಪುಗಳೆಂದರೆ ಪ್ರತಿಜೀವಕಗಳು, ಕಾಕ್ಸಿಡಿಯೋಸ್ಟಾಟ್ಸ್ (ಕಾಕ್ಸಿಡಿಯೋ ನಿರೋಧಕ) ಮತ್ತು ಆಂಟಿ ಆಕ್ಸಿಡಾಂಟ್ಸ್(ಆಮ್ಲ ಜನಕ ಸಂಯೋಗ ನಿರೋಧಕ).

ಪ್ರತಿಜೀವಕಗಳು : ಎಳೆವಯಸ್ಸಿನ ಕೋಳಿಗಳ ಬೆಳವಣಿಗೆಯನ್ನು ಹೆಚ್ಚಿಸಲು ಇವುಗಳನ್ನು ಆಹಾರದೊಂದಿಗೆ (ಒಂದು ಟನ್ ಆಹಾರಕ್ಕೆ 5-10 ಗ್ರಾಮಿನಂತೆ)ಸೇರಿಸಿ ಕೊಡಲಾಗುತ್ತದೆ. ಸಾಮಾನ್ಯವಾಗಿ ಬಳಸುವ ಪ್ರತಿಜೀವಕಗಳೆಂದರೆ, ಕ್ಲೋರೋಟೆಟ್ರಾಸೈಕ್ಲೀನ್, ಆಕ್ಸಿಟೆಟ್ರಾಸೈಕ್ಲೀನ್ ಮತ್ತು ನೈಟ್ರೋಫ್ಯೂರಾಜೀನ್ ಮುಂತಾದುವು.

ಕಾಕ್ಸಿಡಿಯೋಸ್ಟಾಟ್ಸ್(ಕಾಕ್ಸಿಡಿಯೋ ನಿರೋಧಕ) : ಇವುಗಳನ್ನು ಮರಿ ಆಹಾರದಲ್ಲಿ, ಬೆಳೆಯುವ ಕೋಳಿ ಆಹಾರದಲ್ಲಿ ಹಾಗೂ ಮಾಂಸದ ಕೋಳಿ ಆಹಾರದಲ್ಲಿ ಸೇರಿಸಲಾಗುತ್ತದೆ, ಆದರೆ ಮೊಟ್ಟೆಯಿಡುವ ಕೋಳಿ ಆಹಾರದಲ್ಲಿ ಸೇರಿಸುವುದಿಲ್ಲ. ಸಾಮಾನ್ಯವಾಗಿ ಬಳಸುವ ಕಾಕ್ಸಿಡಿಯೋ ನಿರೋಧಕಗಳೆಂದರೆ, ಅಂಪ್ರಾಲ್‌ಪ್ಲಸ್ (ಎಂ. ಎಸ್. ಡಿ. ಕಂಪೆನಿ), ಬೈಫ್ಯುರಾನ್ (ಎಸ್. ಕೆ. ಎಫ್. ಕಂಪೆನಿ), ಎಂಬಾಜಿನ್ ಪ್ರೀಮಿಕ್ಸ್ (ಎಂ. ಅಂಡ್ ಬಿ. ಕಂಪೆನಿ) ಮುಂತಾದುವು, ಇವು ಕೋಳಿಗಳಿಗೆ ಬರುವ ಕಾಕ್ಸಿಡಿಯಾ ರೋಗವನ್ನು ತಡೆಗಟ್ಟುತ್ತವೆ.

ಆಂಟಿ ಆಕ್ಸಿಡಾಂಟ್ಸ್(ಆಮ್ಲ ಜನಕ ಸಂಯೋಗ ನಿರೋಧಕಗಳು) : ಇವನ್ನು ಮೇವಿನಲ್ಲಿಯ ಕಮಟುನಾತ ತಪ್ಪಿಸಲು ಸೇರಿಸಲಾಗುತ್ತದೆ. ಅದರಲ್ಲೂ ವಿಶೇಷವಾಗಿ ಆಹಾರದಲ್ಲಿ ಕೊಬ್ಬು ಅಥವಾ ಎಣ್ಣೆ ಅಧಿಕ ಪ್ರಮಾಣದಲ್ಲಿದ್ದರೆ ಇದನ್ನು ಸೇರಿ

ಸುವುದು ತೀರ ಅಗತ್ಯ. ಹೆಚ್ಚು ಪರಿಣಾಮಕಾರಿಯಾಗಿ ಕೆಲಸಮಾಡುವ ಅಮ್ಲಜನಕ ಸಂಯೋಗ ನಿರೋಧಕಗಳೆಂದರೆ ಎಥಾಕ್ಸಿಕ್ವಿನ್, ಬಿ.ಎಚ್.ಟಿ. ಮತ್ತು ಬಿ.ಎಚ್.ಎ.

ಕೋಳಿ ಆಹಾರ ಘಟಕಾಂಶಗಳು

ಕೋಳಿ ಆಹಾರ ಮಿಶ್ರಣದಲ್ಲಿರುವ ಘಟಕಾಂಶಗಳನ್ನು ಈ ಕೆಳಗಿನ ರೀತಿಯಲ್ಲಿ ವರ್ಗೀಕರಿಸಬಹುದು :

ಶಕ್ತಿದಾಯಕ ಆಹಾರ ಘಟಕಾಂಶಗಳು

ಕಾಳು (ಧಾನ್ಯ) ಮತ್ತು ಅವುಗಳ ಉಪ ಪದಾರ್ಥಗಳು, ಕೊಬ್ಬು ಹಾಗೂ ಕೆಲವು ಶರ್ಕರ ಪಿಷ್ಟಾದಿಗಳು ಕೋಳಿ ಆಹಾರಗಳಲ್ಲಿ ಮುಖ್ಯ ಶಕ್ತಿಮೂಲ ಆಹಾರ ಘಟಕಾಂಶಗಳಾಗಿರುತ್ತವೆ. ಹೆಚ್ಚು ಸಾಮಾನ್ಯವಾಗಿ ಬಳಸುವ ಶಕ್ತಿಮೂಲ ಆಹಾರ ಘಟಕಾಂಶಗಳೆಂದರೆ ಮುಸುಕಿನ ಜೋಳ, ಅಕ್ಕಿ ತೌಡು, ಗೋಧಿ ತೌಡು, ಮುಸುಕಿನ ಜೋಳದ ತೌಡು, ಬೆಲ್ಲದ ಮಡ್ಡಿ ಮುಂತಾದುವು,

ಪ್ರೋಟೀನು(ಸಸಾರಜನಕ) ಆಹಾರ ಘಟಕಾಂಶಗಳು

ಪ್ರೋಟೀನು ಮೂಲ ಆಹಾರ ಘಟಕಾಂಶಗಳನ್ನು ಪ್ರಾಣಿಮೂಲದವು, ಸಸ್ಯ ಮೂಲದವು ಎಂದು ಎರಡು ಗುಂಪುಗಳಾಗಿ ವಿಂಗಡಿಸಬಹುದು. ಸಾಧಾರಣವಾಗಿ ಎರಡು ಮೂರು ತರಹ ಪ್ರೋಟೀನು ಆಹಾರ ಘಟಕಾಂಶಗಳನ್ನು ಒಟ್ಟಿಗೆ ಆಹಾರ ಮಿಶ್ರಣದಲ್ಲಿ ಸೇರಿಸಿಕೊಡುವುದರಿಂದ ಒಂದು ಬಗೆಯ ಪ್ರೋಟೀನು ಆಹಾರದಲ್ಲಿ ಇಲ್ಲದ ಅಮೈನೋ ಆಮ್ಲ ಮತ್ತೊಂದು ಬಗೆಯ ಪ್ರೋಟೀನು ಆಹಾರದಲ್ಲಿ ಸಿಗುವಂತಾಗಿ ಹೆಚ್ಚು ಅಮೈನೋ ಆಮ್ಲಗಳು ಲಭ್ಯವಾಗುತ್ತವೆ.

ಕೆಲವು ಪ್ರಾಣಿ ಮತ್ತು ಸಸ್ಯ ಪ್ರೋಟೀನು ಆಹಾರ ಘಟಕಾಂಶಗಳು ಇಂತಿವೆ:

1 ಪ್ರಾಣಿಮೂಲ ಪ್ರೋಟೀನು ಆಹಾರ ಘಟಕಾಂಶಗಳು

1) ಮೀನಿನ ಪುಡಿ
2) ರೇಷ್ಮೆಗೂಡು ಪುಡಿ
3) ಮಾಂಸದ ಪುಡಿ
4) ರಕ್ತದ ಪುಡಿ
5) ಪ್ಯಾಚರಿಯ ಕಸ

2 ಸಸ್ಯಮೂಲ ಪ್ರೋಟೀನು ಆಹಾರ ಘಟಕಾಂಶಗಳು

1) ನೆಲಗಡಲೆಕಾಯಿ ಹಿಂಡಿ
2) ಕೊಬ್ಬರಿ ಹಿಂಡಿ
3) ಎಳ್ಳಿನ ಹಿಂಡಿ

4) ಸೂರ್ಯಕಾಂತಿ ಬೀಜದ ಹಿಂಡಿ
5) ಮುಸುಕಿನ ಜೋಳ ಗ್ಲೂಟೆನ್ ಹಿಂಡಿ (ಹಿಟ್ಟಿನಲ್ಲಿಯ ಪಿಷ್ಟಾಂಶವನ್ನು ತೊಳೆದುಬಿಟ್ಟಮೇಲೆ ಉಳಿಯುವ ಜಿಗುಟಾದ ಸಸಾರಜನಕ ಭಾಗ (ಹಿಟ್ಟಿನ ಜಿಗಟು)
6) ಸೋಯಾಬೀನ್ ಹಿಂಡಿ

ಖನಿಜಾಂಶಗಳು

ಧಾನ್ಯದ ಕಾಳುಗಳು ಮತ್ತು ಸಸ್ಯಪ್ರೋಟೀನು ಆಹಾರಗಳಲ್ಲಿ ಖನಿಜಾಂಶಗಳು ಕಡಮೆ ಇರುತ್ತವೆ. ಸಸ್ಯಮೂಲ ಆಹಾರಗಳಿಗಿಂತಲೂ ಪ್ರಾಣಿಮೂಲ ಆಹಾರಗಳಲ್ಲಿ ಹೆಚ್ಚು ಖನಿಜಾಂಶಗಳಿರುತ್ತವೆ.

ಖನಿಜಾಂಶ ಪೂರಕಗಳು

ಸುಣ್ಣದ ಕಲ್ಲು
ಚಿಪ್ಪಿ (ಮೊಟ್ಟೆ)ನ ಪುಡಿ
ಮೂಳೆ ಪುಡಿ
ಡೈಕ್ಯಾಲ್ಸಿಯಂ ಫಾಸ್ಫೇಟ್
ಮ್ಯಾಂಗನೀಸ್
ಪೊಟ್ಯಾಸಿಯಂ ಅಯೋಡೈಡ್
ಜಿಂಕ್ ಕಾರ್ಬೊನೇಟ್ ಆಕ್ಸೈಡ್
ಅಡಿಗೆ ಉಪ್ಪು

ಜೀವಸತ್ವ ಪೂರಕ ಆಹಾರಗಳು

ಹಸುರು ಸೊಪ್ಪು ಕೋಳಿಗಳಿಗೆ ಒಳ್ಳೆಯ ಜೀವಸತ್ವ ಮೂಲಗಳು. ಇವು ಒಣಗಿದ್ದರೂ ಆಯಿತು ಇಲ್ಲವೇ ಹಾಗೆಯೇ ಕಚ್ಚಾ ಹಸುರು ರೂಪದಲ್ಲೇ ಬಳಸಿದರೂ ಆಯಿತು. ಲೂಸೆರ್ನ್, ಬರ್ಸೀಮ್, ನೆಲಗಡಲೆಕಾಯಿ ಗಿಡ, ಇವು ಕೋಳಿಗಳ ಆಹಾರವಾಗಿ ಬಳಸಬಹುದಾದ ಕೆಲವು ಮುಖ್ಯ ಜೀವಸತ್ವ ಮೂಲದ ಹಸುರು ಮೇವುಗಳು. ಅಂಗಡಿಗಳಲ್ಲಿ ದೊರೆಯುವ ಕೋಳಿಗಳ ಜೀವಸತ್ವಗಳಾದ ಎ, ಬಿ$_2$, ಡಿ$_3$, ಇ ಮತ್ತು ಬಿ ಗುಂಪಿನವು ಕೋಳಿ ಆಹಾರದಲ್ಲಿ ಬಳಸುವ ಕೆಲವು ಸಾಮಾನ್ಯ ಜೀವಸತ್ವ ಪೂರಕ ಆಹಾರಗಳು.

ಕೋಳಿ ಆಹಾರಗಳಿಗಿರಬೇಕಾದ ಅವಶ್ಯಕತೆಗಳು

ಬೇರೆ ಬೇರೆ ವಯಸ್ಸಿನ ಕೋಳಿಗಳಿಗೆ ಬೇರೆ ಬೇರೆ ಮಟ್ಟದಲ್ಲಿ ಪೌಷ್ಟಿಕಾಂಶಗಳ ಆಗತ್ಯವಿರುತ್ತದೆ. ಭಾರತೀಯ ಮಾನಕ ಸಂಸ್ಥೆ ಇತ್ತೀಚೆಗೆ ನಿಗದಿಪಡಿಸಿರುವ

ಕೋಷ್ಟಕ 2 : ವಿವಿಧ ಕೋಳಿ ಆಹಾರಗಳಲ್ಲಿರಬೇಕಾದ ಆವಶ್ಯ ಪೌಷ್ಟಿಕಾಂಶಗಳು

ಆವಶ್ಯ ಅಂಶಗಳು	ಮಾಂಸದ ಕೋಳಿ ಮರಿಯ ಪ್ರಾರಂಭಿಕ ಆಹಾರ	ಮಾಂಸದ ಕೋಳಿಗೆ ಬೆಳವಣಿಗೆ ಆಹಾರ	ಮೊಟ್ಟೆಯಿಡುವ ಕೋಳಿಗೆ ಪ್ರಾರಂಭಿಕ ಮರಿ ಆಹಾರ	ಮೊಟ್ಟೆಯಿಡುವ ಕೋಳಿಗೆ ಬೆಳವಣಿಗೆ ಆಹಾರ	ಮೊಟ್ಟೆಯಿಡುತ್ತಿರುವ ಕೋಳಿಗೆ ಆಹಾರ
1	2	3	4	5	6
1. ತೇವಾಂಶ (ಗರಿಷ್ಠ ಶತಾಂಶ)	10.00	10.00	10.00	10.00	10.00
2. ಕಚ್ಚಾ (ಪ್ರಾಕೃತ) ಪ್ರೋಟೀನು (ಕನಿಷ್ಠ ಶತಾಂಶ)	22.00	19.00	20.00	16.00	18.00
3. ಕಚ್ಚಾ ನಾರು (ಗರಿಷ್ಠ ಶತಾಂಶ)	6.00	6.00	7.00	8.00	8.00
4. ಆಮ್ಲದಲ್ಲಿ ಕರಗುವ ಬೂದಿ (ಖನಿಜಾಂಶ) (ಗರಿಷ್ಠ ಶತಾಂಶ)	3.00	3.00	4.00	4.00	4.00
5. ಉಪ್ಪು (ಗರಿಷ್ಠ ಶತಾಂಶ)	—	—	0.6	0.6	0.6

6. ಕ್ಯಾಲ್ಸಿಯಂ, (ಕನಿಷ್ಠ ಶತಾಂಶ)	1.0—1.2	0.8—1.0	1.00	1.00	2.75
7. ಲಭ್ಯ ರಂಜಕ (ಕನಿಷ್ಠ ಶತಾಂಶ)	0.4	0.4	0.7	0.5	0.5
8. ಲಿನೊಲೀಯಿಕ್ ಆಮ್ಲ (ಕನಿಷ್ಠ ಶತಾಂಶ)	—	—	1.0	1.0	1.0
9. ಲೈಸೀನ್ (ಕನಿಷ್ಠ ಶತಾಂಶ)	0.9	0.9	1.0	0.7	0.5
10. ಮೆಥಿಯೋನೀನ್ (ಕನಿಷ್ಠ ಶತಾಂಶ)	0.5	0.5	0.35	0.25	0.25
11. ಸಲ್ಫರ್ ಅಮೈನೋ ಆಮ್ಲಗಳು ಒಟ್ಟಿಗೆ (ಕನಿಷ್ಠ ಶತಾಂಶ)	—	—	0.7	0.5	0.5
12. ಜೀವವಸ್ತುಕರಣವಾಗುವ ಶಕ್ತಿ (ಕಿಲೊ ಕ್ಯಾಲರಿಗಳು ಕಿಲೊಗ್ರಾಮಿಗೆ)	—	—	2800	2600	2800
13. ಮ್ಯಾಂಗನೀಸ್, ಮಿಲಿಗ್ರಾಮ್/ಕಿಲೊಗ್ರಾಮಿಗೆ	60	60	55	55	55
14. ಅಯೋಡಿನ್, ಮಿಲಿಗ್ರಾಮ್/ಕಿಲೊಗ್ರಾಮಿಗೆ	1.0	1.0	1.0	1.0	1.0

ಕೋಷ್ಟಕ 2(ಮುಂದುವರಿದುದು)

1	2	3	4	5	6
15. ಕಬ್ಬಿಣ, ಮಿಲಿಗ್ರಾಮ್/ ಕಿಲೊಗ್ರಾಮಿಗೆ	40	40	20	20	20
16. ಸತುವು, ಮಿಲಿಗ್ರಾಮ್/ ಕಿಲೊಗ್ರಾಮಿಗೆ	50	50	—	—	—
17. ಜೀವಸತ್ವ ಎ, IU/ ಕಿಲೊಗ್ರಾಮಿಗೆ	6000	6000	4000	4000	8000
18. ಜೀವಸತ್ವ ಡಿ, ICU/ ಕಿಲೊಗ್ರಾಮಿಗೆ	600	600	600	600	1200
19. ಥೈಯಮಿನ್, ಮಿಲಿಗ್ರಾಮ್/ ಕಿಲೊಗ್ರಾಮಿಗೆ	2	2	6	6	6
20. ರೈಬೋಫ್ಲೇವಿನ್, ಮಿಲಿಗ್ರಾಮ್/ ಕಿಲೊಗ್ರಾಮಿಗೆ	5	5	5	5	5
21. ಪ್ಯಾಂಟೋಥೇನಿಕ್ ಆಮ್ಲ, ಮಿಲಿಗ್ರಾಮ್/ಕಿಲೊಗ್ರಾಮಿಗೆ	12	12	10	10	15

22. ನಿಕೋಟಿನಿಕ್ ಆಮ್ಲ. ಮಿಲಿಗ್ರಾಮ್/ಕಿಲೊಗ್ರಾಮಿಗೆ	40	40	30	20	20
23. ಬಯೋಟಿನ್, ಮಿಲಿಗ್ರಾಮ್/ಕಿಲೊಗ್ರಾಮಿಗೆ	0.1	0.1	0.1	0.1	0.15
24. ಜೀವಸತ್ವ ಬಿ$_{12}$, ಮೈಕ್ರೊಗ್ರಾಮ್/ಕಿಲೊಗ್ರಾಮಿಗೆ	8	8	15	15	15
25. ಜೀವಸತ್ವ ಇ. ಮಿಲಿಗ್ರಾಮ್/ಕಿಲೊಗ್ರಾಮಿಗೆ	20	20	10	10	10
26. ಕೋಲೀನ್ ಕ್ಲೋರೈಡ್	1400	1400	1300	—	—

ಬೇರೆ ಬೇರೆ ಮಾದರಿಯ ಕೋಳಿ ಆಹಾರದ ವಿವಿಧ ಬಗೆಯ ಪೌಷ್ಟಿಕಾಂಶ ಸೂಚಿ ಹೀಗಿದೆ (ಕೋಷ್ಟಕ2) :

1. 1) **ಮಾಂಸದ ಕೋಳಿ ಮರಿಯ ಪ್ರಾರಂಭಿಕ ಆಹಾರ:** ಇದು ಮಾಂಸದ ಉತ್ಪಾದನೆಯ ಉದ್ದೇಶಕ್ಕಾಗಿ ಬೆಳೆಸುವ ಕೋಳಿ ಮರಿಗಳಿಗೆ ಮೊದಲ ಆರುವಾರಗಳವರೆಗೆ ನೀಡುವ ತಿಂಡಿ. ಈ ತಿಂಡಿಯಲ್ಲಿ ಶೇಕಡಾ 22-23 ರಷ್ಟು ಪ್ರೋಟೀನು ಇರುತ್ತದೆ.

   2) **ಮಾಂಸದ ಕೋಳಿಗೆ ಬೆಳವಣಿಗೆ ಆಹಾರ:** ಮಾಂಸದ ಉತ್ಪಾದನೆಗಾಗಿ ಬೆಳೆಸುವ ಕೋಳಿಗಳಿಗೆ ಆರುವಾರಗಳನಂತರ ನೀಡುವ ಆಹಾರ.

2. 1) **ಮೊಟ್ಟೆಯಿಡುವ ಕೋಳಿಗೆ ಪ್ರಾರಂಭಿಕ ಮರಿ ಆಹಾರ:** ಇದು ಮರಿಗಳಿಗೆ ಕೊಡುವ ಆಹಾರ. ಮಾಂಸದ ಉತ್ಪಾದನೆಗಾಗಿ ಅಲ್ಲ; ಕೇವಲ ಬೆಳವಣಿಗೆಗಾಗಿ ಇದನ್ನು ಮರಿಗಳಿಗೆ ಮೊದಲ ಎಂಟುವಾರಗಳವರೆಗೆ ಕೊಡಲಾಗುತ್ತದೆ.

   2) **ಮೊಟ್ಟೆಯಿಡುವ ಕೋಳಿಗೆ ಬೆಳವಣಿಗೆ ಆಹಾರ:** ಕೋಳಿಗಳ ಬೆಳವಣಿಗೆಗಾಗಿ 8-20 ವಾರಗಳವರೆಗೆ ಕೊಡಬೇಕಾದ ಆಹಾರ.

   3) **ಮೊಟ್ಟೆಯಿಡುತ್ತಿರುವ ಕೋಳಿಗೆ ಆಹಾರ:** ಮೊಟ್ಟೆಯಿಡುವ ಕೋಳಿಗಳಿಗೆ 20 ವಾರ ವಯಸ್ಸಿನನಂತರ ಕೊಡುವ ಆಹಾರ.

ಅಧ್ಯಾಯ 6

ಕಾವು ಕೊಡುವಿಕೆ ಮತ್ತು ಮರಿಮಾಡಿಸುವಿಕೆ

ಮೊಟ್ಟೆಗಳಿಂದ ಮರಿಮಾಡಿಸುವಿಕೆ ಕೋಳಿ ಸಾಕಣೆಯಲ್ಲಿ ಬಹುಮುಖ್ಯವಾದ ಅಂಶ. ಇದು ಇಂದು ಕೋಳಿ ಸಾಕಣೆಯಲ್ಲಿ ಒಂದು ವಿಶೇಷ ಉದ್ಯಮವಾಗಿದೆ. ಇದಕ್ಕೆ ಕಾರಣ ಮರಿಮಾಡಿಸುವಿಕೆಯಲ್ಲಿ ಆಗಿರುವ ಆಧುನಿಕ ರೀತಿಯ ಬೆಳವಣಿಗೆಗಳು. ಮರಿ ಮಾರಾಟಗಾರರು ವಿವಿಧ ಉದ್ದೇಶಗಳಿಗೆ ತಕ್ಕಂತೆ ಬೇರೆ ಬೇರೆ ತಳಿಗಳ ಮರಿಗಳನ್ನು ಉತ್ಪತ್ತಿಮಾಡಿ ಮಾರಾಟ ಮಾಡುತ್ತಾರೆ. ಸಣ್ಣಪುಟ್ಟ ರೈತರು ಮತ್ತು ಕೋಳಿ ಸಾಕಣೆಗಾರರು ಮರಿಮಾರಾಟಗಾರರಿಂದ ಒಳ್ಳೆಯ ಮರಿಗಳನ್ನು ತಮ್ಮ ಅಗತ್ಯತೆಗೆ ತಕ್ಕ ಪ್ರಮಾಣದಲ್ಲಿ ಪಡೆದು ಸಾಕುತ್ತಾರೆ. ಮರಿಮಾಡಿಸುವ ಉದ್ಯಮಕ್ಕೆ ಕೋಳಿ ತಳಿ ಎಬ್ಬಿಸುವಿಕೆ, ಆಹಾರ ನೀಡಿಕೆ ಹಾಗೂ ಕೋಳಿ ಸಾಕಣೆ ಮತ್ತು ನಿರ್ವಹಣೆಯ ವಿಷಯಗಳಲ್ಲಿ ವಿಶೇಷ ಪರಿಣತಿ ಇರಬೇಕು.

ಮೊಟ್ಟೆಗಳ ಆಯ್ಕೆ

ಮರಿಮಾಡಲು ಒಳ್ಳೆಯ ಫಲವತ್ತು ಮೊಟ್ಟೆಗಳನ್ನು ಆಯ್ಕೆಮಾಡಿಕೊಳ್ಳಬೇಕು. ಮೊಟ್ಟೆಗಳನ್ನು ಆರಿಸುವುದರಲ್ಲಿ ಹೆಚ್ಚು ಜಾಗರೂಕತೆ ಅವಶ್ಯಕ; ಮೊಟ್ಟೆಗಳಲ್ಲಿ ಕೆಲವೊಂದು ದೋಷಗಳಿರಬಹುದು. ಅಂಥ ಮೊಟ್ಟೆಗಳಿಂದ ಮರಿಮಾಡಿಸುವಿಕೆಗೆ ಭಾರಿ ಪೆಟ್ಟಾಗುತ್ತದೆ. ಮರಿಮಾಡಿಸುವಿಕೆಗಾಗಿ ಮೊಟ್ಟೆಗಳನ್ನು ಆಯ್ಕೆ ಮಾಡುವಾಗ ಗಮನಿಸಬೇಕಾದ ಕೆಲವೊಂದು ಅಂಶಗಳೆಂದರೆ ಮೊಟ್ಟೆಗಳ ಗಾತ್ರ, ಮೊಟ್ಟೆಗಳ ಆಕಾರ, ಮೊಟ್ಟೆಚಿಪ್ಪಿನ ಗುಣಮಟ್ಟ ಹಾಗೂ ಮೊಟ್ಟೆಯೊಳಗಿನ ವಸ್ತುಗಳ ಗುಣಮಟ್ಟ. ಮೊಟ್ಟೆಯೊಳಗಿನ ಗುಣಮಟ್ಟವನ್ನು ಮೊಟ್ಟೆಗಳಿಗೆ ಕೃತಕ ಬೆಳಕೊಡ್ಡಿ ಕಂಡುಕೊಳ್ಳಬಹುದು.

ಮೊಟ್ಟೆಗಳ ಗಾತ್ರ

ಮೊಟ್ಟೆಗಳ ಗಾತ್ರಕ್ಕೂ ಅವುಗಳಿಂದ ಮರಿಯಾಗುವುದಕ್ಕೂ ಬಹಳ ಸಂಬಂಧವಿದೆ. ಅತಿ ಹೆಚ್ಚಿನ ಗಾತ್ರದ ಮೊಟ್ಟೆಗಳಿಂದಲೂ ಸರಿಯಾಗಿ ಮರಿಯಾಗುವುದಿಲ್ಲ. ಹಾಗೆಯೇ ತೀರ ಸಣ್ಣದಾದ ಗಾತ್ರದ ಮೊಟ್ಟೆಗಳಿಂದಲೂ ಸರಿಯಾಗಿ ಮರಿಯಾಗುವುದಿಲ್ಲ. ಆದ್ದರಿಂದ ಮರಿಮಾಡಲು ಆಯ್ಕೆಮಾಡುವ ಮೊಟ್ಟೆಗಳು ತೀರ ದೊಡ್ಡವೂ ಇರಕೂಡದು, ತೀರ ಸಣ್ಣವೂ ಇರಕೂಡದು. ಮಧ್ಯಮ ಗಾತ್ರದ ಮೊಟ್ಟೆಗಳಾಗಿರ

ಬೇಕು. ಬಹಳ ದೊಡ್ಡ ಮೊಟ್ಟೆಗಳಲ್ಲಿ ದಪ್ಪನೆಯ(ತೀರ ಮಂದವಾದ) ಬಿಳಿಯ ಲೋಳೆ ಹೆಚ್ಚಾಗಿರುತ್ತದೆ. ಸಣ್ಣಗಾತ್ರದ ಮೊಟ್ಟೆಗಳಲ್ಲಿ ಬಿಳಿಯ ಲೋಳೆಯ ಪ್ರಮಾಣ ಬಹಳ ಕಡಮೆ ಇರುತ್ತದೆ. ಹೆಚ್ಚು ಬಿಳಿಯ ಲೋಳೆ ಇದ್ದರೂ ತೀರ ಕಡಮೆ ಬಿಳಿಯ ಲೋಳೆ ಇದ್ದರೂ ಮೊಟ್ಟೆಗಳಿಂದ ಸರಿಯಾಗಿ ಮರಿ ಆಗುವುದಿಲ್ಲ. ಅಂಥ ಮೊಟ್ಟೆಗಳಿಗೆ ಮರಿಯಾಗುವ ಸಾಮರ್ಥ್ಯ ಕಡಮೆ ಇರುತ್ತದೆ.

ಮೊಟ್ಟೆಗಳ ಆಕಾರ

ಕೋಳಿಗಳು ಕೆಲವುವೇಳೆ ವಿವಿಧ ಆಕಾರದ ಮೊಟ್ಟೆಗಳನ್ನಿಡುತ್ತವೆ. ಆಕಾರದಲ್ಲಿ ಲೋಪದೋಷವಿದ್ದಲ್ಲಿ ಅಂತಹ ಮೊಟ್ಟೆಗಳಿಂದ ಸರಿಯಾಗಿ ಮರಿಯಾಗುವುದಿಲ್ಲ. ಆದ್ದರಿಂದ, ಮರಿಮಾಡಲು ಆಯ್ಕೆಮಾಡುವ ಮೊಟ್ಟೆಗಳು ಮಾಮೂಲಿನ ಅಂಡಾಕಾರವನ್ನು ಹೊಂದಿರಬೇಕು.

ಮೊಟ್ಟೆಚಿಪ್ಪಿನ ಗುಣಮಟ್ಟ

ಮೊಟ್ಟೆಚಿಪ್ಪಿನ ಗುಣಮಟ್ಟ ಮರಿಯಾಗುವಿಕೆಯ ಮೇಲೆ ಹೆಚ್ಚು ಪ್ರಭಾವ ಬೀರುತ್ತದೆ. ಮೊಟ್ಟೆ ಮರಿಯಾಗುವಿಕೆಗೂ ಮೊಟ್ಟೆಚಿಪ್ಪಿಗೂ ನಿಕಟ ಸಂಬಂಧವಿರುತ್ತದೆ. ಮೊಟ್ಟೆಚಿಪ್ಪು ಮೊಟ್ಟೆಯೊಳಗಿನ ವಸ್ತುಗಳನ್ನು ರಕ್ಷಿಸುವ ಮುಚ್ಚಳ. ಒಳಗಿನ ಅನಿಲ ಹೊರಗೆ, ಹೊರಗಿನ ಅನಿಲ ಒಳಗೆ ವಿನಿಮಯಗೊಳ್ಳುವುದು ಈ ಮೊಟ್ಟೆ ಚಿಪ್ಪಿನ ಮೂಲಕವೇ. ಒಳಗೆ ಬೆಳೆಯುವ ಭ್ರೂಣಕ್ಕೆ ಅಗತ್ಯವಾದ ಕ್ಯಾಲ್ಸಿಯಂ ಖನಿಜಾಂಶವನ್ನು ಚಿಪ್ಪು ಒದಗಿಸುತ್ತದೆ. ತೆಳುವಾದ ಮೊಟ್ಟೆಚಿಪ್ಪು ಹೊಂದಿರುವ ಮೊಟ್ಟೆಗಳಿಂದ ಸರಿಯಾಗಿ ಮರಿಗಳಾಗುವುದಿಲ್ಲ. ಏಕೆಂದರೆ, ಕಾವು ಕೊಡುವ ಕಾಲದಲ್ಲಿ ಒಳಗಿನ ತೇವಾಂಶವು ಬಹಳಷ್ಟು ಬಾಷ್ಪೀಕರಣದ ಮೂಲಕ ನಷ್ಟವಾಗುತ್ತದೆ. ಅಲ್ಲದೆ ಮೊಟ್ಟೆಚಿಪ್ಪು ತೆಳ್ಳಗಿರುವುದರಿಂದ ಮೊಟ್ಟೆ ಒಡೆಯುವ ಸಾಧ್ಯತೆಯೂ ಹೆಚ್ಚು. ಇದರಿಂದ ಹೆಚ್ಚು ನಷ್ಟ ಸಂಭವಿಸುವುದುಂಟು. ಆದ್ದರಿಂದ ಮರಿಮಾಡಲು ಗಟ್ಟಿಯಾದ ಹಾಗೂ ಒಳ್ಳೆಯ ಚಿಪ್ಪಿನಿಂದ ಕೂಡಿದ ಮೊಟ್ಟೆಗಳನ್ನೇ ಆಯ್ಕೆಮಾಡಬೇಕು. ಮೊಟ್ಟೆಗಳು ಶುಚಿಯಾಗಿರಬೇಕು. ಶುಚಿಯಾದ ಮೊಟ್ಟೆಗಳು ಮಣ್ಣಾದ(ಗಲೀಜಾದ) ಮೊಟ್ಟೆಗಳಿಗಿಂತಲೂ ಚೆನ್ನಾಗಿ ಮರಿಯಾಗುತ್ತವೆ. ಏಕೆಂದರೆ, ಮೊಟ್ಟೆಚಿಪ್ಪಿನ ಮೇಲಿರುವ ಮಣ್ಣು ಅಥವಾ ಗಲೀಜು ಚಿಪ್ಪಿನ ರಂಧ್ರಗಳನ್ನು ಮುಚ್ಚುತ್ತದೆ. ಪರಿಣಾಮವಾಗಿ, ಆ ರಂಧ್ರಗಳ ಮೂಲಕ ಗಾಳಿಯ ವಿನಿಮಯ ಸರಾಗವಾಗಿ ಸಾಗುವುದಿಲ್ಲ. ಭ್ರೂಣಕ್ಕೆ ಸರಿಯಾಗಿ ಗಾಳಿ ಲಭಿಸುವುದಿಲ್ಲ; ಅಲ್ಲದೆ, ಗಲೀಜಿನಲ್ಲಿ ಸೂಕ್ಷ್ಮಾಣುಜೀವಿಗಳಿರಬಹುದು; ಇದರಿಂದ ಮೊಟ್ಟೆಗಳು ಕೆಡುತ್ತವೆ. ಮೊಟ್ಟೆಗಳನ್ನು ಶುಚಿಮಾಡಿ ಅನಂತರ ಬಳಸಬೇಕು.

ಮೊಟ್ಟೆಯೊಳಗಿನ ವಸ್ತುಗಳ ಗುಣಮಟ್ಟ

ಮರಿಮಾಡಲು ಆಯ್ಕೆಮಾಡುವ ಮೊಟ್ಟೆಗಳನ್ನು ಮೊದಲು ಸೂಕ್ಷ್ಮ, ಕೃತಕ

ಬೆಳಕಿನಲ್ಲಿ ಪರೀಕ್ಷಿಸಬೇಕು. ಇದರಿಂದ ಮೊಟ್ಟೆಯೊಳಗಿನ ದೋಷಗಳು ಗೋಚರವಾಗುತ್ತವೆ. ಮೊಟ್ಟೆಯೊಳಗೆ ಸಡಿಲವಾದ ಗಾಳಿಕೋಶಗಳೂ ಕೆಂಪು ಚುಕ್ಕೆಗಳೂ ಮಾಂಸದ ಚುಕ್ಕೆಗಳೂ ಕಂಡುಬರುತ್ತವೆ. ಮೊಟ್ಟೆಗಳು ಸೀಳುಬಿಟ್ಟರೆ ಇಲ್ಲವೇ ಮಟ್ಟದಲ್ಲಿ ಗೌಣವಾಗಿದ್ದರೆ ತಿಳಿಯುತ್ತದೆ. ಇಂತಹ ದೋಷಗಳಿದ್ದಲ್ಲಿ ಮೊಟ್ಟೆಗಳಿಂದ ಮರಿಗಳಾಗುವುದಿಲ್ಲ. ಅಂತಹ ದೋಷಪೂರಿತ ಮೊಟ್ಟೆಗಳನ್ನು ಮರಿಮಾಡಲು ಬಳಸಬಾರದು. ಕೃತಕ ಬೆಳಕಿನಲ್ಲಿ ಪರೀಕ್ಷಿಸಿದರೆ ಮೊಟ್ಟೆಯ ಒಳಗೂ ಹೊರಗೂ ಯಾವ ದೋಷಗಳೂ ಕಂಡುಬರದೆ, ಒಳಗೆ ಸಣ್ಣ ಸಣ್ಣ ಗಾಳಿಕೋಶಗಳು, ಒಳ್ಳೆಯ ಬಿಳಿ ಲೋಳೆ, ಹಳದಿ ಲೋಳೆಯ ನೆರಳು ಕಂಡುಬರುವ ಮೊಟ್ಟೆಗಳನ್ನು ಮಾತ್ರವೇ ಆಯ್ಕೆ ಮಾಡಬೇಕು.

ಮೊಟ್ಟೆಗಳ ಜೋಪಾಸನೆ

ಮರಿಮಾಡಲು ಮೊಟ್ಟೆಗಳನ್ನು ಆಯ್ಕೆಮಾಡಿ ಒಂದು ಕಡೆ ಕೂಡಿಡುವಾಗ ಹೆಚ್ಚು ಜಾಗರೂಕತೆ ವಹಿಸಬೇಕು. ಸೂಕ್ತ ಉಷ್ಣತೆ, ಆರ್ದ್ರತೆ (ಗಾಳಿಯಲ್ಲಿ ತೇವ), ಮೊಟ್ಟೆಗಳ ಜೋಪಾನ, ಇವುಗಳಿಗೆ ಹೆಚ್ಚು ಆದ್ಯತೆ ನೀಡಬೇಕು.

1. ಉಷ್ಣತೆ : ಮರಿಮಾಡಲು ಬಳಸುವ ಮೊಟ್ಟೆಗಳನ್ನು ಶೇಖರಿಸಿಡಲು ಸರಿಯಾದ ಉಷ್ಣತೆ ಎಂದರೆ 50°-55 °F. ಒಳಗೆ. ಅತಿ ಹೆಚ್ಚಿನ ಅಥವಾ ತೀರ ಕಡಮೆ ಉಷ್ಣತೆಗಳಲ್ಲಿ ಮೊಟ್ಟೆಗಳನ್ನು ಶೇಖರಿಸಿಟ್ಟಲ್ಲಿ ಮೊಟ್ಟೆಗಳ ಮರಿಯಾಗುವ ಸಾಮರ್ಥ್ಯ ಕಡಮೆಯಾಗುತ್ತದೆ. ಫಲೀಕೃತ ಮೊಟ್ಟೆಗಳನ್ನು 67°F. ಗಿಂತಲೂ ಹೆಚ್ಚಿನ ಉಷ್ಣತೆಯಲ್ಲಿ ಇಟ್ಟಲ್ಲಿ ಸರಿಯಾಗಿ ಭ್ರೂಣಗಳ ಬೆಳವಣಿಗೆಯಾಗುವುದಿಲ್ಲ; ಬಲಹೀನವಾಗುತ್ತವೆ. ಅದೇ ರೀತಿ ಮೊಟ್ಟೆಗಳನ್ನು 40°F. ಗಿಂತಲೂ ತೀರ ಕಡಮೆ ಉಷ್ಣತೆಯಲ್ಲಿ ಶೇಖರಿಸಿಟ್ಟಾಗ ಮೊಟ್ಟೆಗಳ ಮರಿಯಾಗುವಿಕೆಯ ಸಾಮರ್ಥ್ಯ ಕಡಮೆಯಾಗುತ್ತದೆ.

2. ಆರ್ದ್ರತೆ : ಅತಿಯಾದ ಆರ್ದ್ರತೆಯಲ್ಲಿ ಮೊಟ್ಟೆಗಳನ್ನು ಶೇಖರಿಸಿಟ್ಟಲ್ಲಿ ಮೊಟ್ಟೆಗಳ ಒಳಗಿನ ತೇವಾಂಶವು ಬಾಷ್ಪೀಕರಣದಿಂದ ನಷ್ಟವಾಗುವುದಿಲ್ಲ. ಮೊಟ್ಟೆಗಳ ಮರಿಯಾಗುವಿಕೆಯ ಸಾಮರ್ಥ್ಯಕ್ಕೆ ಪೆಟ್ಟಾಗುವುದಿಲ್ಲ. ಬೇಸಿಗೆಯಲ್ಲಿ ಬಾಷ್ಪೀಕರಣದ ಮೂಲಕ ಹೆಚ್ಚು ತೇವಾಂಶವು ನಷ್ಟವಾಗುವುದರಿಂದ ಆ ಕಾಲದಲ್ಲಿ ಆರ್ದ್ರತೆ ಹೆಚ್ಚು ಉಪಯೋಗಕರ. ಸೂಕ್ತ ಆರ್ದ್ರತೆ ಎಂದರೆ ಶೇಕಡಾ 60-80.

3. ಮೊಟ್ಟೆಗಳ ಜೋಪಾನ : ಮೊಟ್ಟೆಗಳನ್ನು ಎತ್ತುವಾಗ, ಸಾಗಿಸುವಾಗ ಇವೇ ಮುಂತಾದ ಸಂದರ್ಭಗಳಲ್ಲಿ ಹೆಚ್ಚು ಜಾಗರೂಕರಾಗಿರುವುದು ಅಗತ್ಯ. ಒರಟೊರಟಾಗಿ ಮೊಟ್ಟೆಗಳೊಂದಿಗೆ ಕೆಲಸ ಮಾಡಿದಲ್ಲಿ ಮೊಟ್ಟೆಗಳು ಒಡೆಯಬಹುದು. ಯಾವಾಗಲೂ ಮೊಟ್ಟೆಯ ಚೂಪಾದ ತುದಿ ಭಾಗವು ಕೆಳಗೆ ಬರಬೇಕು. ಅಗಲವಾದ ಮೊಟ್ಟೆ ಭಾಗವು ಕೆಳಗೆ ಬಂದರೆ ಕಂಪನದಿಂದ ಗಾಳಿಕೋಶಗಳು ತಯಾರಾಗುತ್ತವೆ

ಅಂಥಹ ಸಡಿಲ ಹಾಗೂ ಬಿಡಿಬಿಡಿಯೂದ ಗಾಳಿಕೋಶಗಳುಳ್ಳ ಮೊಟ್ಟೆಗಳಿಂದ ಸರಿಯೂಗಿ ಮರಿಗಳಾಗುವುದಿಲ್ಲ. ಸಾಮಾನ್ಯವಾಗಿ ಮೊಟ್ಟೆಗಳನ್ನು 50°-60°F. ಉಷ್ಣತೆಯಲ್ಲಿ ಒಂದು ವಾರದವರೆಗೆ ಕೆಡದಂತೆ ಇಡಬಹುದು.

ಮೊಟ್ಟೆಗಳಿಗೆ ಕಾವು ಕೊಡುವಿಕೆ

ಸಾಧಾರಣವಾಗಿ ಕೋಳಿ ಮೊಟ್ಟೆಗಳ ಮೇಲೆ ಕುಳಿತು ಕಾವು ಕೊಟ್ಟು ಮರಿ ಮಾಡುತ್ತದೆ. ಇದು ಸಹಜವಾದ ಪದ್ಧತಿ. ಕೋಳಿಯ ನೆರವಿಲ್ಲದೆ, ಸೂಕ್ತ ಕೃತಕ ಶಾಖ ಬಳಸಿ ಮೊಟ್ಟೆಗಳನ್ನು ಮರಿಮಾಡುವುದು ಕೃತಕ ಕಾವು ಪದ್ಧತಿ. ಇಂದು ಬಹುಮಟ್ಟಿಗೆ ಎಲ್ಲೆಡೆಯೂ ಕೃತಕ ಕಾವು ಪದ್ಧತಿಯೇ ಹೆಚ್ಚು ಅನುಸರಣೆಯಲ್ಲಿದೆ. ಸಹಜ ಕಾವು ಪದ್ಧತಿಯಲ್ಲಿ ಸರಿಸುಮಾರು ಶೇಕಡಾ30ರಷ್ಟು ಮೊಟ್ಟೆಗಳು ಮರಿಗಳಾಗುವುದಿಲ್ಲ, ಇದರಿಂದ ಹೆಚ್ಚು ಆರ್ಥಿಕ ನಷ್ಟವಾಗುತ್ತದೆ. ಆದರೆ ಕೃತಕ ಕಾವು ವ್ಯವಸ್ಥೆಯಿಂದ ಇಂತಹ ನಷ್ಟವಾಗುವುದಿಲ್ಲ. ಆದ್ದರಿಂದ ಇದು ಲಾಭದಾಯಕ.

ಅಲಮಾರು (ಕ್ಯಾಬಿನೆಟ್)ಮಾದರಿಯ ಕಾವು ಯಂತ್ರಗಳನ್ನು ಈಗೀಗ ಹೆಚ್ಚು ಸಾಮಾನ್ಯವಾಗಿ ಬಳಸುತ್ತಾರೆ, ಕಾವು ಯಂತ್ರಗಳ ಕಾರ್ಯನಿರ್ವಹಣೆಯನ್ನು ಯಶಸ್ವಿಯಾಗಿ ನಡೆಸಿಕೊಂಡುಹೋಗಲು ಈ ಕೆಳಗಿನ ಕೆಲವು ಅಂಶಗಳನ್ನು ಗಮನದಲ್ಲಿಡಬೇಕು:

1) ಕೊಠಡಿ ಉಷ್ಣತೆ(ಶಾಖ)
2) ಕಾವು ಯಂತ್ರದ ಶಾಖ
3) ಕಾವು ಯಂತ್ರದ ಗಾಳಿಕಿಂಡಿಗಳು
4) ತೇವಾಂಶ
5) ಮೊಟ್ಟೆಗಳ ಆಯ್ಕೆ ಮತ್ತು ಗುಣಮಟ್ಟ
6) ಕಾವು ಯಂತ್ರದ ಕಾರ್ಯನಿರ್ವಹಣೆ
7) ನೈರ್ಮಲ್ಯೀಕರಣ ಮತ್ತು ಧೂಪನ

1. ಕೊಠಡಿ ಉಷ್ಣತೆ(ಶಾಖ) : ಮೊಟ್ಟೆಗಳಿಂದ ಮರಿಮಾಡಲು ಮುಖ್ಯವಾಗಿ ಬೇಕಾದುದು ಸ್ಥಳ(ಕೊಠಡಿಗಳು).ಆಫೀಸಿಗೆ(ಕಾರ್ಯಾಲಯಕ್ಕೆ) ಬೇರೆ ಕೊಠಡಿ ಇರಬೇಕು: ಮೊಟ್ಟೆ ಸ್ವೀಕರಿಸಲು, ಮೊಟ್ಟೆಗಳ ಗುಣಮಟ್ಟ ಅಳೆಯಲು, ಮೊಟ್ಟೆಗಳಿಗೆ ಕಾವುಕೊಡಲು ಪ್ರತ್ಯೇಕ ಕೊಠಡಿಗಳಿರಬೇಕು. ಹಾಗೆಯೇ ಮರಿಗಳಿಗೆ ಕಾವು ಕೊಡಲು ಸಹ ಪ್ರತ್ಯೇಕ ಕೊಠಡಿ ಇರಬೇಕು.

ಒಳ್ಳೆಯ ಫಲಿತಾಂಶ ದೊರೆಯಬೇಕಾದರೆ ಮೊಟ್ಟೆಗಳಿಗೆ ಕಾವುಕೊಡುವ ಮತ್ತು ಮರಿಮಾಡುವ ಕೊಠಡಿಗಳಲ್ಲಿ ಸಾಧ್ಯವಾದಮಟ್ಟಿಗೆ 70°F.ನಷ್ಟು ಉಷ್ಣತೆ (ಶಾಖ) ಕಾಯ್ದಿರಿಸಬೇಕು. ಕೊಠಡಿಯ ಶಾಖದಲ್ಲಿ ಬಹಳಷ್ಟು ವ್ಯತ್ಯಾಸವಿದ್ದರೆ ಕಾವು ಯಂತ್ರವನ್ನು ಸರಿಹೊಂದಿಸುವುದು ಕಷ್ಟವಾಗುತ್ತದೆ.

2. ಕಾವು ಯಂತ್ರದ ಶಾಖ ; ಆಲಮಾರಿ ಕಾವು ಯಂತ್ರಗಳಿಗೆ ವಿದ್ಯುತ್ ಶಾಖ ತಂತಿಗಳಿಂದಾಗಲೀ ಬಿಸಿನೀರು ಸರಬರಾಜುಗಳಿಂದಾಗಲೀ ಶಾಖ ಒದಗಿಸಬಹುದು. ವಿದ್ಯುತ್ ಶಕ್ತಿಯಿಂದ ಚಾಲನೆಗೊಳ್ಳುವ ಬೀಸಣಿಗೆ ಯಂತ್ರಗಳಿಂದ ಶಾಖವು ಕಾವು ಯಂತ್ರದ ಎಲ್ಲ ಕಡೆಯೂ ಸರಿಸಮಾನವಾಗಿ ವಿತರಣೆಯಾಗುತ್ತದೆ; ಈ ಬೀಸಣಿಗೆ ಯಂತ್ರಗಳು ಒಳಗಿನ ಕೆಟ್ಟ(ಇಂಗಾಲಾಮ್ಲ) ಗಾಳಿಯನ್ನು ಹೊರಗೆ ದೂಡಲೂ ಹೊರಗಿನ ಹೊಸ ಶುದ್ಧಗಾಳಿ ಒಳಗೆ ಬರಲೂ ನೆರವಾಗುತ್ತವೆ. ಸರಿಯಾದ ಶಾಖ,99°F.

ಅಧಿಕ ಉಷ್ಣತೆಯ ಪರಿಣಾಮ : ಮೊಟ್ಟೆಗಳಿಂದ ಮರಿಮಾಡಲು ಶಾಖ ಸೂಕ್ತ ಮಟ್ಟದಲ್ಲಿರಬೇಕು, ಶಾಖ ಜಾಸ್ತಿಯಾದರೆ ಮೊಟ್ಟೆಗಳಿಂದ ಇಂಗಾಲಾಮ್ಲವು ಹೆಚ್ಚಿಗೆ, ಬಹುಬೇಗ ಹೊರಬರುತ್ತದೆ. ಭ್ರೂಣವು ಸಾಯುತ್ತದೆ. ಕಾಲುಗಳು ಬೆಂದುಹೋಗಿರುತ್ತವೆ, ಮೆದುಳಿನ ಬೆಳವಣಿಗೆ ಸರಿಯಾಗಿ ಆಗಿರುವುದಿಲ್ಲ. ಹಾಗೆಯೇ ಕಣ್ಣು, ತಲೆಯಲ್ಲಿ ಊನ ಇರುತ್ತದೆ. ಮೊಟ್ಟೆಗಳು ಹೆಚ್ಚಿನ ಪ್ರಮಾಣದಲ್ಲಿ ನೀರು ಕಳೆದುಕೊಳ್ಳುತ್ತವೆ. ಮರಿಗಳು ಸಣ್ಣದಾಗಿರುತ್ತವೆ. ಮೊಟ್ಟೆಯೊಳಗಿನ ಆಂತರಿಕ ಮಾರಕ ಶಾಖವೆಂದರೆ 106°- 108°F.

ಕಡಮೆ ಉಷ್ಣತೆಯ ಪರಿಣಾಮ : ಕಾವು ಕಡಮೆ ಇದ್ದರೆ, ಮೊಟ್ಟೆ ಮರಿಯಾಗಲು ಹೆಚ್ಚು ಕಾಲ ಹಿಡಿಯುತ್ತದೆ. ಮೊಟ್ಟೆಯೊಳಗಿನ ಇಂಗಾಲಾಮ್ಲವು ಹೊರಹೋಗುವುದು ಕಡಮೆಯಾಗುತ್ತದೆ. ಪರಿಣಾಮವಾಗಿ ಬಹಳಷ್ಟು ಮರಿಗಳು ಮೊಟ್ಟೆಯ ಚಿಪ್ಪಿನಿಂದ ಹೊರಬರುವುದಿಲ್ಲ. ಶಾಖ ಕಡಮೆಯಾದಾಗ ಅದು ಮೊಟ್ಟೆಗಳ ಮೇಲೆ ಅಧಿಕ ಶಾಖದಷ್ಟೇ ಕೆಟ್ಟ ಪರಿಣಾಮ ಬೀರುವುದಿಲ್ಲ. ಏಕೆಂದರೆ, ಮೊಟ್ಟೆಗಳನ್ನು ಪ್ರತಿದಿನ 12 ಗಂಟೆಗಳ ಕಾಲ 70°F. ಗಳಷ್ಟರ ಶಾಖದಲ್ಲಿಟ್ಟರೂ ನಷ್ಟವಾಗುವುದು ಕೇವಲ ಶೇಕಡಾ 3.4 ಮಾತ್ರ.

3. ಕಾವು ಯಂತ್ರದ ಗಾಳಿ ಕಿಂಡಿಗಳು : ಮೊಟ್ಟೆಗಳನ್ನು ಕಾವಿಗಿಟ್ಟಿರುವಾಗ ಒಳಗಿನ ಭ್ರೂಣವು ಉಸಿರಾಡುತ್ತಿರುತ್ತದೆ. ಆಗ ಅದು ಆಮ್ಲಜನಕವನ್ನು ತೆಗೆದುಕೊಂಡು ಇಂಗಾಲಾಮ್ಲ ಮತ್ತು ತೇವಾಂಶಗಳನ್ನು ಬಿಟ್ಟುಕೊಡುತ್ತಿರುತ್ತದೆ. ಗಾಳಿಯಲ್ಲಿ ಶೇಕಡಾ 21ರಷ್ಟು ಆಮ್ಲಜನಕವಿರುತ್ತದೆ. ಮೊಟ್ಟೆಯಲ್ಲಿ ಬೆಳೆಯುತ್ತಿರುವ ಭ್ರೂಣಕ್ಕೆ ಆಮ್ಲಜನಕ ಬೇಕು. ಆದ್ದರಿಂದ ಗಾಳಿಯನ್ನು ಒದಗಿಸಲು ಕಾವು ಯಂತ್ರಕ್ಕೆ ಗಾಳಿಕಿಂಡಿ ವ್ಯವಸ್ಥೆ ಇರಬೇಕು ಹಾಗೂ ಶೇಕಡಾ 21ರಷ್ಟು ಆಮ್ಲಜನಕ ಇರುವಂತಹ ಗಾಳಿ ಒದಗಿಸುವಂತಿರಬೇಕು. ಮೊಟ್ಟೆಗೂಡಿನಲ್ಲಿ ಶೇಕಡಾ 21ಕ್ಕಿಂತಲೂ ಕಡಮೆಯಾಗುವ ಶೇಕಡಾ ಆಮ್ಲಜನಕಕ್ಕೆ ಶೇಕಡಾ5ರಷ್ಟು ಮರಿಯಾಗುವಿಕೆ ಕಡಮೆಯಾಗುತ್ತದೆ. ಶೇಕಡಾ21ರಮೇಲೆ ಹೆಚ್ಚಾಗುವ ಶೇಕಡಾ ಆಮ್ಲಜನಕಕ್ಕೆ ಶೇಕಡಾ 1 ರಷ್ಟು ಮರಿಯಾಗುವಿಕೆ ಕಡಮೆಯಾಗುತ್ತದೆ. ಕಾವು ಯಂತ್ರದಲ್ಲಿ ಸಾಧಾರಣ

ಮಟ್ಟದಲ್ಲಿ ಇಂಗಾಲಾಮ್ಲವಿರುವುದೂ ಅವಶ್ಯಕ. ಭ್ರೂಣದ ಸೂಕ್ತ ಬೆಳವಣಿಗೆಯನ್ನು ಪ್ರಚೋದಿಸಲು ಇದು ಅಗತ್ಯ. ಇದು ಹೆಚ್ಚಿನ ಪ್ರಮಾಣದಲ್ಲಿದ್ದರೆ ಭ್ರೂಣದ ಬೆಳವಣಿಗೆ ಕುಗ್ಗುತ್ತದೆ. ವಿಪರೀತವಾಗಿ ಹೆಚ್ಚಾದರೆ (10,000 ಭಾಗದಷ್ಟು ಗಾಳಿಯಲ್ಲಿ 200 ಭಾಗ ಇಂಗಾಲಾಮ್ಲ) ಭ್ರೂಣ ಸಾಯುತ್ತದೆ. ಇಂಗಾಲಾಮ್ಲವು ಸಾಮಾನ್ಯವಾಗಿ ಶೇಕಡಾ 0.5ರಷ್ಟು ಇರಬೇಕು.

4. ತೇವಾಂಶ : ಮೊಟ್ಟೆಗಳು ಚೆನ್ನಾಗಿ ಮರಿಯಾಗಲು ಕಾವುಯಂತ್ರದ ಗಾಳಿಯಲ್ಲಿರುವ ತೇವಾಂಶ(ಆರ್ದ್ರತೆ) ಸರಿಯಾದ ಮಟ್ಟದಲ್ಲಿರಬೇಕು. ಇದು ಉಷ್ಣತೆಯಷ್ಟೇ ಮುಖ್ಯ. ಇದನ್ನು ಒದಗಿಸಲು ನೀರು ಬೀಸಣಿಕೆ ಯಂತ್ರವನ್ನು ಬಳಸಲಾಗುತ್ತದೆ. ತೇವಾಂಶವು ಸೂಕ್ತ ಪ್ರಮಾಣದಲ್ಲಿದ್ದರೆ ಮೂಳೆಗಳು ಚೆನ್ನಾಗಿ ಬೆಳೆಯುತ್ತವೆ. ಭ್ರೂಣದ ಗಾತ್ರ ಹೆಚ್ಚುತ್ತದೆ. ಹೆಚ್ಚಿನ ತೇವಾಂಶ ಮರಿಗಳ ಮೇಲೆ ಯಾವುದೇ ಕೆಟ್ಟ ಪರಿಣಾಮವನ್ನೂ ಉಂಟುಮಾಡುವುದಿಲ್ಲವಾದರೂ ಮರಿಗಳು ಬೇಗ ಒಣಗುವುದಿಲ್ಲ ಮತ್ತು ಅವು ಚಟುವಟಿಕೆಯಿಂದಿರುವುದಿಲ್ಲ. ಏನೇ ಆದರೂ ಕೆಲವೇ ಗಂಟೆಗಳಲ್ಲಿ ಅವು ಸರಿಹೋಗುತ್ತವೆ. ಆದರೆ, ತೇವಾಂಶವು ಕಡಿಮೆ ಇದ್ದರೆ ಮೂಳೆ ಚೆನ್ನಾಗಿ ಬೆಳೆಯುವುದಿಲ್ಲ. ಮೂಳೆ ತಯಾರಿಕೆಗೆ ಅವಶ್ಯಕವಿರುವ ಅಂಶಗಳು ಅಷ್ಟೊಂದು ಸರಿಯಾಗಿ ರಕ್ತಗತವಾಗುವುದಿಲ್ಲ, ಪರಿಣಾಮವಾಗಿ ಭ್ರೂಣವು ಬಹಳ ಕಿರಿದಾಗುತ್ತದೆ. ಕಾವು ಯಂತ್ರದಲ್ಲಿ ಕಡಿಮೆ ತೇವಾಂಶ ಇದ್ದರೆ ಮರಿಗಳು ಚಿಪ್ಪಿಗೆ ಅಂಟಿಕೊಂಡಿರುತ್ತವೆ.

5. ಮೊಟ್ಟೆಗಳ ಆಯ್ಕೆ ಮತ್ತು ಗುಣಮಟ್ಟ : ಮೊಟ್ಟೆಗಳು ಮರಿಯಾಗುವುದರಲ್ಲಿಯ ಯಶಸ್ಸು ಇಲ್ಲವೇ ಉಂಟಾಗುವ ನಷ್ಟ ಅದಕ್ಕಾಗಿ ಆಯ್ಕೆಮಾಡಿಕೊಳ್ಳುವ ಮೊಟ್ಟೆಗಳನ್ನು ಅವಲಂಬಿಸಿರುತ್ತದೆ. ಅಂಥ ಮೊಟ್ಟೆಗಳು ರೋಗಮುಕ್ತವಾಗಿರಬೇಕು. ಅವನ್ನು ರೋಗಮುಕ್ತ(ಫಾರ್ಮ್) ಕೋಳಿಗಳಿಂದ ಪಡೆದಿರಬೇಕು: ಮುಖ್ಯವಾಗಿ ಪುಲ್ಲೋರಂ ರೋಗದಿಂದ ಮುಕ್ತವಾಗಿರಬೇಕು. ಫಲೀಕೃತ ಮೊಟ್ಟೆಗಳೆಲ್ಲಾ ಮರಿಗಳಾಗುವುದಿಲ್ಲ. ಕೆಲವು ಫಲೀಕೃತ ಮೊಟ್ಟೆಗಳು ಸಾಕಷ್ಟು ಜೀವಶಕ್ತಿಯನ್ನು ಹೊಂದಿರುವುದಿಲ್ಲ; ಇದಕ್ಕೆ ತಳಿಯೆಬ್ಬಿಸಲು ಬಳಸಿರುವ ಕೋಳಿಗಳ ಬಲಹೀನತೆ ಕಾರಣವಿರಬಹುದು ಇಲ್ಲವೇ ಮೊಟ್ಟೆಗಳನ್ನು ಕಾವು ಯಂತ್ರದಲ್ಲಿಡುವ ಮುನ್ನ, ಸರಿಯಾಗಿ ಕೃತಕ ಬೆಳಕಿಗಿಟ್ಟು ಪರೀಕ್ಷಿಸದೆ ಇರುವುದೂ ಕಾರಣವಿರಬಹುದು.

ಮೊಟ್ಟೆಗಳು ಇನ್ನೂ ಹೊಸದಾಗಿರುವಾಗಲೇ ಕಾವು ಯಂತ್ರ(ಪೆಟ್ಟಿಗೆ)ದಲ್ಲಿಟ್ಟಲ್ಲಿ ಅವು ಚೆನ್ನಾಗಿ ಮರಿಯಾಗುತ್ತವೆ. ಏಳು ದಿನಗಳಿಗಿಂತಲೂ ಹಳೆಯದಾದ ಮೊಟ್ಟೆಗಳನ್ನು ಮರಿಮಾಡಲು ಬಳಸಬಾರದು. ಕಾವು ಯಂತ್ರದಲ್ಲಿಡುವ ಮುನ್ನ ಮೊಟ್ಟೆಗಳನ್ನು 50°-60°F. ಉಷ್ಣತೆಯಲ್ಲಿಟ್ಟಿರಬೇಕು. ಬೇರೆ ಕಡೆಯಿಂದ ತರಿಸಿಕೊಂಡ ಮೊಟ್ಟೆಗಳನ್ನು ಕಾವು ಯಂತ್ರದಲ್ಲಿಡುವ ಮುನ್ನ 12ಗಂಟೆಗಳ ಕಾಲ ಒಂದು

ಕಡೆ ಇಟ್ಟಿರಬೇಕು. ಮರಿಮಾಡಲು ಒಳ್ಳೆಯ ಆಕಾರದ ಹಾಗೂ ಅಂಗಾಂಶ ರಚನೆ ಯುಳ್ಳ 60ಗ್ರಾಮ್‌ಗಳಿಗಿಂತಲೂ ಕಡಮೆ ತೂಕವಿರುವ ಮೊಟ್ಟೆಗಳನ್ನೇ ಬಳಸಬೇಕು. 75 ಗ್ರಾಮ್‌ಗಳಿಗಿಂತಲೂ ಹೆಚ್ಚಿನ ತೂಕವಿರುವ ಮೊಟ್ಟೆಗಳು ಸರಿಯಾಗಿ ಮರಿ ಯಾಗುವುದಿಲ್ಲ. ಅಲುಗಾಡುವ ಗಾಳಿ ಕೋಣೆಗಳಿರುವ ಮೊಟ್ಟೆಗಳು ಸಹ ಸರಿಯಾಗಿ ಮರಿಯಾಗುವುದಿಲ್ಲ.

6. ಕಾವು ಯಂತ್ರದ ಕಾರ್ಯನಿರ್ವಹಣೆ : ಖಾಲಿ ತಟ್ಟೆಗಳನ್ನು ಸದಾ ಕಾವು ಯಂತ್ರದಲ್ಲಿಟ್ಟಿರಲೇ ಬೇಕು. ಕೋಳಿಮೊಟ್ಟೆಗಳನ್ನು ಅವರಲ್ಲಿ ಜೋಡಿಸುವ ಅವಶ್ಯಕತೆ ಇದ್ದಾಗ ಮಾತ್ರ ತೆಗೆಯಬೇಕಷ್ಟೆ. ಪ್ರತಿದಿನ ಕೊನೆಯ ಪಕ್ಷ ನಾಲ್ಕು ಬಾರಿಯಾದರೂ ಕಾವು ಯಂತ್ರದಲ್ಲಿರುವ ಮೊಟ್ಟೆಗಳನ್ನು ತಿರುಗಿಸುತ್ತಿರಬೇಕು. ವಿದ್ಯುತ್ ಶಕ್ತಿ ನಿಂತ ಪ್ರಸಂಗಗಳಲ್ಲಿ ಕಾವು ಯಂತ್ರದ ಬಾಗಿಲು ಸ್ವಲ್ಪ ಮಟ್ಟಿಗಾದರೂ ತೆರೆಯಬೇಕು. ಕಾವು ಯಂತ್ರದಲ್ಲಿರುವ ಅದರಲ್ಲೂ ವಿಶೇಷವಾಗಿ ಯಂತ್ರದ ಮೇಲ್ಭಾಗದಲ್ಲಿರುವ ಅಧಿಕ ಮಟ್ಟದ ಶಾಖವನ್ನು ತೆಗೆಯಲು ಹಾಗೂ ಮೊಟ್ಟೆಯಿಟ್ಟಿರುವ ಗೂಡಿನಲ್ಲಿ ಇಂಗಾಲಾಮ್ಲವು ಶೇಖರಣೆಗೊಳ್ಳುವುದನ್ನು ತಪ್ಪಿಸಲು ಇದು ಬಹು ಮುಖ್ಯ.

7. ನೈರ್ಮಲ್ಯೀಕರಣ ಮತ್ತು ಧೂಪನ : ಮೊಟ್ಟೆಮರಿಮಾಡುವ ಮನೆ ಮತ್ತು ಕಾವು ಯಂತ್ರಗಳನ್ನು ಶುಚಿಯಾಗಿಟ್ಟಿರಬೇಕು. ಅವನ್ನು ಸೋಂಕುನಿವಾರಕ ಔಷಧಗಳಿಂದ ತೊಳೆಯಬೇಕು. ಮರಿಯಾದನಂತರ ತುಪ್ಪುಳ, ಧೂಳು ಇತ್ಯಾದಿ ಎಲ್ಲವನ್ನೂ ತೆಗೆಯಬೇಕು. ತಟ್ಟೆಗಳು ಮತ್ತು ಇತರೇ ಉಪಕರಣಗಳನ್ನು ಪ್ರತಿಸಲ ಮರಿಮಾಡಿಸಿದ ಬಳಿಕ ಹೊರತೆಗೆದು, ನೀರು ಹಾಕಿ ಚೆನ್ನಾಗಿ ಉಜ್ಜಿ ತೊಳೆಯಬೇಕು. ಮರಿಮಾಡುವ ಯಂತ್ರದಿಂದ ರೋಗ ಪ್ರಸಾರವಾಗುವುದನ್ನು ತಪ್ಪಿಸಲು ಸೋಂಕು ನಾಶಕ ಔಷಧಿ ಸಿಂಪರಣೆ ಬಹಳ ಅಗತ್ಯ. ಪ್ರತಿಸಲ ಮರಿಗಳನ್ನು ಮರಿಮಾಡಿಸುವಿಕೆ ಮನೆಯಿಂದ ಹೊರತೆಗೆದ ಕೂಡಲೇ ಈ ಕಾರ್ಯ ಕೈಗೊಳ್ಳಬೇಕು. ಮುಂಜಾಗ್ರತೆ ಗಾಗಿ, ಅಂದರೆ ಪುಲ್ಲೋರಂ ರೋಗ ಹರಡುವುದನ್ನು ತಪ್ಪಿಸಲು ಕಾವು ಯಂತ್ರವನ್ನು ಫಾರ್ಮಾಲ್ಡಿಹೈಡ್ ಅನಿಲದಿಂದ ಧೂಪಿಸಬೇಕು.

ಅಧ್ಯಾಯ 7

ಕೋಳಿಮರಿಗಳ ಕಾವುಕಾಪುಗೆ ಹಾಗೂ ಆಧುನಿಕ ರೀತಿಯಲ್ಲಿ ಮರಿಸಾಕಣೆ

ಕೋಳಿಮರಿಗಳು ಮೊಟ್ಟೆಗಳಿಂದ ಹೊರಬಂದ ಕೂಡಲೇ ಅವುಗಳ ರಕ್ಷಣೆ ಹಾಗೂ ಪಾಲನೆ ಹೆಚ್ಚು ಜವಾಬ್ದಾರಿಯುತವಾದುದು. ಅವುಗಳಿಗೆ ಅಗತ್ಯ ಬೆಚ್ಚಗಿನ ವಾತಾವರಣ ಕಲ್ಪಿಸಬೇಕು. ಅವುಗಳನ್ನು ಕೆಟ್ಟ ಹವಾಗುಣದಿಂದ ರಕ್ಷಿಸಬೇಕು: ಒಳ್ಳೆಯ ನೀರು, ಆಹಾರ ಸಿದ್ಧವಾಗಿಟ್ಟಿರಬೇಕು; ನೈರ್ಮಲ್ಯತೆಯನ್ನು ಕಾಯ್ದಿರಿಸಬೇಕು. ಮರಿಗಳು ಚೆನ್ನಾಗಿ ಬೆಳೆದು ದೊಡ್ಡದಾಗಿ ಮುಂದೆ ಅವು ಉತ್ತಮ ಹೇಂಟೆಗಳಾಗಬೇಕಾದರೆ ಮರಿಗಳ ಆರೈಕೆಗೆ ಹೆಚ್ಚಿನ ಗಮನ ಅಗತ್ಯ.

ಕಾವುಕಾಪುಗೆಯಲ್ಲಿ ಮುಖ್ಯವಾಗಿ ಎರಡುವಿಧ. 1) ಸ್ವಾಭಾವಿಕ ಕಾವುಕಾಪುಗೆ 2) ಕೃತಕ ಕಾವುಕಾಪುಗೆ. ಮೊಟ್ಟೆಗಳಿಂದ ಹೊರಬಂದ ಎಳೆಮರಿಗಳಿಗೆ ಕೋಳಿ (ಹೇಂಟೆ)ಗಳು ತಮ್ಮ ರೆಕ್ಕೆಗಳ ಕೆಳಗೆ ರಕ್ಷಣೆ ಹಾಗೂ ಕಾವು ಕೊಟ್ಟು ಕಾಪಾಡುವುದು ಸ್ವಾಭಾವಿಕ ಕಾವುಕಾಪುಗೆ. ಇದು ಹೇಂಟೆಗಳ ಸಹಜ ಹಾಗೂ ಸ್ವಭಾವಸಿದ್ಧ ಮರಿಸಾಕಣೆ. ಇಲ್ಲಿ ಕೋಳಿಗಳೇ ಕಾವುಕಾಪುಗೆಯ ಯಂತ್ರಗಳಾಗಿ ವರ್ತಿಸುತ್ತವೆ. ಹೇಂಟೆಗಳ ನೆರವಿಲ್ಲದೆಯೇ ಕೃತಕ ರೀತಿಯಲ್ಲಿ ಮರಿಗಳಿಗೆ ಕಾವುರಕ್ಷಣೆ ಕೊಟ್ಟು ಕಾಪಾಡುವುದು 'ಕೃತಕ ಕಾವುಕಾಪುಗೆ'. ಮರಿಗಳಿಗೆ ಕಾವುರಕ್ಷಣೆ ನೀಡುವ ಸಾಧನಗಳೇ ಕಾವುಕಾಪುಗಳು ಅಥವಾ ಬಿಸಿ(ಕಾವು) ಬುಟ್ಟಿಗಳು. ಬಿಸಿಬುಟ್ಟಿ ಅಥವಾ ಕಾವುಕಾಪುಗೆ ಉಪಕರಣಗಳು ಹೇಂಟೆಗಳ ಪಾತ್ರ ವಹಿಸುತ್ತವೆ. ಕೃತಕ ಕಾವುಕಾಪುಗೆ ಸ್ವಾಭಾವಿಕ ಕಾವುಕಾಪುಗೆಗಿಂತಲೂ ಹೆಚ್ಚು ಪ್ರಯೋಜನಕಾರಿ. ಕೃತಕ ಕಾವುಕಾಪುಗೆಯಿಂದ ವರ್ಷದ ಎಲ್ಲ ಕಾಲಗಳಲ್ಲೂ ಕೋಳಿಮರಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸಾಕಬಹುದು. ಕಾವನ್ನು ನಿಯಂತ್ರಿಸಬಹುದು. ಕಾವುಕಾಪುಗೆ ಸಾಧನಗಳಲ್ಲಿ ನೈರ್ಮಲ್ಯೀಕರಣ ಕ್ರಮಗಳನ್ನು ಅನುಸರಿಸಬಹುದು. ಯೋಜನೆಗೆ ಅನುಸಾರವಾಗಿ ಕೋಳಿಮರಿಗಳಿಗೆ ಕಾವು ಕೊಡಬಹುದು.

ಸಾಂದ್ರಪದ್ಧತಿಯಿಂದ ಕೋಳಿಮರಿಗಳ ಕಾವುಕಾಪುಗೆ ಹಾಗೂ ಸಾಕಣೆ

ಕೋಳಿಸಾಕಣೆ ಉದ್ದಿಮೆಯು ಯಶಸ್ವಿಯಾಗಬೇಕಾದರೆ ವೈಜ್ಞಾನಿಕ ರೀತಿಯಲ್ಲಿ ಕೋಳಿಮರಿಗಳಿಗೆ ಕಾವುಕಾಪುಗೆ ಕೊಟ್ಟು ಪೋಷಣೆ ಮಾಡಬೇಕು. ಸಾಂದ್ರಪದ್ಧತಿ

ಯಲ್ಲಿ, ವಿಶೇಷ ಗಮನ ನೀಡಿ, ಸೂಕ್ತ ರೀತಿಯ ಮರಿಸಾಕಣಾ ಕ್ರಮಗಳನ್ನು ಅವಲಂಬಿಸಿ ಕೋಳಿಮರಿಗಳನ್ನು ಸಾಕುವುದು ಒಳ್ಳೆಯದು. ಈ ಪದ್ಧತಿಯಿಂದ ಚೆನ್ನಾಗಿ ಮೊಟ್ಟೆಯಿಡುವ ಸಾಮರ್ಥ್ಯವುಳ್ಳ ಹೇಂಟೆಗಳನ್ನು ಸಾಕಬಹುದು. ಕಾವುಕಾಪ್ಪುಗೆ ಹಾಗೂ ಕೋಳಿಮರಿ ಸಾಕಣೆ ಹಲವು ಅಂಶಗಳಿಂದ ಪ್ರಭಾವಿತವಾಗುತ್ತದೆ. ಈ ಅಂಶಗಳಲ್ಲಿ ಮುಖ್ಯವಾಗಿ, ಕೋಳಿಮರಿಗಳ ಸಾಕಣೆಯನ್ನು ಯಾವ ಕಾಲದಲ್ಲಿ ಆರಂಭಿಸಿದರೆ ಒಳ್ಳೆಯದು. ಮನೆಗಳು ಹೇಗಿರಬೇಕು, ಬಳಸಬೇಕಾಗಿರುವ ಕಾವುಕಾಪ್ಪುಗೆ ಉಪಕರಣಗಳು, ಕೋಳಿಮರಿಗಳನ್ನು ತರಿಸಿಕೊಳ್ಳುವ ಮುನ್ನ ಮಾಡಿಕೊಳ್ಳಬೇಕಾದ ಸಿದ್ಧತೆಗಳು, ಕೋಳಿಮರಿಗಳ ಆರೈಕೆ, ಕಾವುಕಾಪಿನ ಮನೆಗಳ ನಿರ್ವಹಣೆ ಇವೇ ಮುಂತಾದವುಗಳ ಅರಿವು ಅಗತ್ಯ.

ಕೋಳಿಮರಿ ಸಾಕಣೆ ಆರಂಭಿಸಬೇಕಾದ ಕಾಲ

ಕೋಳಿಸಾಕಣೆಯಲ್ಲಿ ತೃಪ್ತಿಕರ ಲಾಭಗಳಿಸಬೇಕಾದರೆ ಕೋಳಿಮರಿಗಳನ್ನು ಸಕಾಲದಲ್ಲಿ ಸಾಕಲು ಆರಂಭಿಸಿ, ಬೆಳೆಸಿ, ಮೊಟ್ಟೆಗೆ ಬರುವಂತೆ ಮಾಡಬೇಕು. ಸೂಕ್ತ ಕಾಲದಲ್ಲಿ ಅವುಗಳನ್ನು ಮೊಟ್ಟೆ ಮನೆಗಳಿಗೆ ಕಳುಹಿಸಲು ಸಿದ್ಧಗೊಳಿಸಬೇಕು. ಸಾಮಾನ್ಯವಾಗಿ ಸಕಾಲದಲ್ಲಿ ಮರಿಸಾಕಣೆ ಆರಂಭಿಸಿ ಮೊಟ್ಟೆಗಳಿಗೆ ಹೆಚ್ಚಿನ ಬೇಡಿಕೆ ಇರುವ ಕಾಲಕ್ಕೆ ಸರಿಯಾಗಿ ಅವು ಮೊಟ್ಟೆಗೆ ಬರುವಂತೆ ಮಾಡುವುದು ಸಂಪ್ರದಾಯ. ಜನವರಿ-ಫೆಬ್ರವರಿ ತಿಂಗಳುಗಳಲ್ಲಿ ಕೋಳಿಮರಿಗಳನ್ನು ಸಾಕಲಾರಂಭಿಸಿದಲ್ಲಿ ಚಳಿಗಾಲದ ವೇಳೆಗೆ ಸರಿಯಾಗಿ ಅವು ಮೊಟ್ಟೆ ಉತ್ಪಾದನೆಯಲ್ಲಿ ಉತ್ಕೃಷ್ಟ ಮಟ್ಟವನ್ನು ಮುಟ್ಟುತ್ತವೆ. ಚಳಿಗಾಲದಲ್ಲಿ ಮೊಟ್ಟೆಗಳಿಗೆ ಬೇಡಿಕೆ ಹೆಚ್ಚು: ಮಾರಾಟ ಸುಲಭ. ಲಾಭ ಹೆಚ್ಚು. ಏನೇ ಆದರೂ ಕೃತಕ ಕಾವುಕಾಪ್ಪುಗೆಯಿಂದ ಮೊಟ್ಟೆ ಉತ್ಪಾದನೆಯ ಮೇಲಿನ ಋತುವಿನ ಸಮಸ್ಯೆಯನ್ನು ನಿವಾರಿಸಬಹುದು.

ಕೋಳಿಮರಿಗಳ ಕಾವುಕಾಪುಗೆಯ ಮನೆಗಳು

ಕೋಳಿಮರಿಗಳಿಗಾಗಿ ಒಳ್ಳೆಯ ಕಾವುಕಾಪ್ಪುಗೆ ಮನೆಗಳು ಅವಶ್ಯಕ. ಇದು ಕೋಳಿಮರಿಗಳನ್ನು ಯಶಸ್ವಿಯಾಗಿ ಸಾಕಲು ಅಗತ್ಯವಿರುವ ಅಂಶಗಳಲ್ಲಿ ಒಂದು. ಇದು ಹೆಚ್ಚು ವೆಚ್ಚದಾಯಕವಾದುದಾಗಿರಬೇಕಿಲ್ಲ; ಕಡಮೆ ಬೆಲೆಯದಿದ್ದು, ಕೋಳಿಮರಿಗಳಿಗೆ ಸಮರ್ಥವಾಗಿ ಕಾವುರಕ್ಷಣೆ ನೀಡುವಂಥದ್ದಾಗಿರಬೇಕು. ಬಿರುಗಾಳಿ, ಮಳೆ, ಚಳಿ ಹಾಗೂ ಕೆಟ್ಟ ಹವಾಮಾನದಿಂದ ಮರಿಗಳಿಗೆ ರಕ್ಷಣೆ ನೀಡುವಂತಿರಬೇಕು. ಕೋಳಿಮರಿಗೆ ಬೆಚ್ಚನೆಯ ವಾತಾವರಣವನ್ನು ಕಲ್ಪಿಸಬೇಕು; ಅಗತ್ಯ ಉಷ್ಣತೆಯನ್ನು ಸಮನಾಗಿ ಹಾಗೂ ಲಾಭದಾಯಕವಾಗಿ ಕಾಯ್ದಿರಿಸುವಂತಿರಬೇಕು; ಮನೆಯಲ್ಲಿ ತೇವಾಂಶ ಮತ್ತು ಶಾಖವನ್ನು ನಿಯಂತ್ರಿಸಲು ಒಳ್ಳೆಯ ಗಾಳಿಕಿಂಡಿ ವ್ಯವಸ್ಥೆ ಇರಬೇಕು.

ಕಾವುಕಾವುಗೆಗಳಲ್ಲಿ ಅನೇಕ ವಿಧಗಳಿವೆ. ಅವುಗಳಲ್ಲಿ ಕೆಲವು ಈ ಕೆಳಕಂಡಂತಿವೆ :

1) ವಿದ್ಯುತ್ ಶಾಖ ಹಾಯಿಸುವ ಮಾದರಿ
2) ವಿದ್ಯುತ್ ಬಲ್ಬು ಮಾದರಿ
3) ಸೀಮೆ ಎಣ್ಣೆ ದೀಪ ಮಾದರಿ
4) ವಿದ್ಯುತ್ ಬಲ್ಬಿರುವ ಬಿದಿರು ಬುಟ್ಟಿಯ ಮಾದರಿ

ಕಾವುಕಾವುಗೆಗಳನ್ನು ಆಯಾ ಪ್ರದೇಶದ ವಾತಾವರಣ ಪರಿಸ್ಥಿತಿಗಳಿಗೆ ತಕ್ಕಂತೆ ಉಪಯೋಗಿಸಿಕೊಳ್ಳಬಹುದು. ಪಾಶ್ಚಾತ್ಯ ದೇಶಗಳಲ್ಲಿ ಅನಿಲ ಮತ್ತು ರಕ್ತವರ್ಣಾತೀತ ಶಾಖದೀಪಗಳುಳ್ಳ ಮಾದರಿಗಳನ್ನು, ಬಿಸಿಗಾಳಿಯ ಮತ್ತು ಬಿಸಿನೀರಿನ ಮಾದರಿಗಳನ್ನು ಉಪಯೋಗಿಸುತ್ತಾರೆ.

ಪ್ರತಿಯೊಂದು ಹಾವರಿನ ಕೆಳಗೂ ಎಷ್ಟು ಮರಿಗಳಿಗೆ ಕಾವಿಗೆ ಆಶ್ರಯ ಕೊಡಬೇಕು ಎಂಬುದು ಉಪಕರಣ ತಯಾರಕರ ಸೂಚನೆಗಳನ್ನು ಅವಲಂಬಿಸಿದೆ. ಸಾಮಾನ್ಯವಾಗಿ ಪ್ರತಿಯೊಂದು ಹಾವರಿನ ಕೆಳಗೂ ಒಂದು ದಿವಸದ ವಯಸ್ಸಿನ ಕೋಳಿಮರಿಗಳನ್ನು 250-300 ರವರೆಗೆ ಬಿಡಬಹುದು. ಮರಿಗಳು ಬೆಳೆದಂತೆ ಅದೇ ಹಾವರಿನ ಕೆಳಗೆ ಅಷ್ಟೊಂದು ಸಂಖ್ಯೆಯ ಕೋಳಿ ಮರಿಗಳಿಗೆ ಸ್ಥಳ ಸಾಕಾಗುವುದಿಲ್ಲ. ಆದ್ದರಿಂದ ಹಾವರಿನ ಕೆಳಗೆ ಬೆಳೆಸುವುದಾದರಲ್ಲಿ ಕೇವಲ 2/3 ರಷ್ಟು ಮರಿಗಳನ್ನು ಇಡಬೇಕು. ಉಪಕರಣ ತಯಾರಕರ ಸೂಚನೆಗಳನ್ನು ಸರಿಯಾಗಿ ಅಳವಡಿಸಿದಲ್ಲಿ ಕಾವುಕಾವುಗೆಗಳನ್ನು ಸಂಪೂರ್ಣವಾಗಿ ಬಳಸಿಕೊಳ್ಳಬಹುದು

ಮೇವುಣಿಕೆಗಳು:

ಪ್ರತಿಯೊಂದು ಕಾವುಕಾವುಗೆ ಸಾಧನದ ಕೆಳಗೂ ಕೋಳಿಮರಿಗಳಿಗೆ ಎಟುಕುವಂತೆ ಮೇವುಣಿಕೆ, ನೀರಿನ ತೊಟ್ಟಿಗಳನ್ನು ಇಡಬೇಕು. ಮೇವುಣಿಕೆಗಳಲ್ಲಿ ಹಲವು ಬಗೆಗಳಿವೆ. ಇವುಗಳಲ್ಲಿ ತುಕ್ಕುರಹಿತ ತಗಡಿನ ಗ್ರಿಲ್(ಕಂಬಿ ಚೌಕಟ್ಟು) ಮಾದರಿ ಮೇವುಣಿಕೆಗಳು ಹಾಗೂ ಮನೆಯಲ್ಲಿ ತಯಾರಿಸಿದ ಮರದ ಮೇವುಣಿಕೆಗಳೂ ಸಾಮಾನ್ಯವಾಗಿ ಬಳಕೆಯಲ್ಲಿವೆ. ಇವುಗಳೆರಡನ್ನೂ ಅಷ್ಟೇ ತೃಪ್ತಿಕರ ರೀತಿಯಲ್ಲಿ ಉಪಯೋಗಿಸಿಕೊಳ್ಳಬಹುದು. ಮಾರುಕಟ್ಟೆಯಲ್ಲಿ ದೊರೆಯುವ ತುಕ್ಕುರಹಿತ ತಗಡಿನ ಮಾದರಿ ಮೇವುಣಿಕೆಗಳು ಹೆಚ್ಚು ಬಾಳಿಕೆ ಬರುತ್ತವೆ. ಇವುಗಳನ್ನು ಸ್ವಚ್ಛ ಮಾಡುವುದೂ ಸುಲಭ. ಇದರಲ್ಲಿ ಮೇವು ಅಷ್ಟಾಗಿ ನಷ್ಟವಾಗುವುದಿಲ್ಲ. ಪ್ರತಿಯೊಂದು ಕೋಳಿಮರಿಗೂ 10-12 ವಾರಗಳ ವಯಸ್ಸಿನವರೆಗೆ ಮೇವು ತಿನ್ನಲು ಮೇವುಣಿಕೆಗಳಲ್ಲಿ ಎರಡಂಗುಲದಷ್ಟು ಉದ್ದ ಜಾಗವಿರಬೇಕು. ಹನ್ನೆರಡು ವಾರಗಳಿಂದ ಅವು ದೊಡ್ಡವಾಗುವವರೆಗೆ, ಎಂದರೆ ಮೊಟ್ಟೆ ಇಡುವ ವಯಸ್ಸಿಗೆ ಬರುವವರೆಗೆ ಮೇವು ತಿನ್ನಲು ಪ್ರತಿಯೊಂದು ಕೋಳಿಗೂ ಮೂರು ಅಂಗುಲದಷ್ಟು ಉದ್ದನೆಯ ಜಾಗವಿರಬೇಕು.

ನೀರುಣಿಕೆಗಳು

ಕೋಳಿಮರಿಗಳಿಗೆ ಇಪ್ಪತ್ನಾಲ್ಕು ಗಂಟೆಗಳ ಕಾಲವೂ ನೀರು ಸಿಗುವಂತಿರಬೇಕು. ದಿನವೂ ಹಳೆಯ ನೀರನ್ನು ತೆಗೆದು ಹೊಸ ತಾಜಾ ತಂಪಾದ ನೀರನ್ನು ಹಾಕಬೇಕು. ಮರಿಗಳಿಗೆ ಎಟುಕುವಂತೆ ನೀರು ಕೊಳ್ಳಗಳು ಅಥವಾ ಪಾತ್ರೆಗಳಲ್ಲಿ ಇಟ್ಟಿರಬೇಕು. ಆರಂಭದಲ್ಲಿ ನೂರು ಮರಿಗಳಿಗೆ ಎರಡು ಲೀಟರು ಹಿಡಿಸುವ ಎರಡು ನೀರುಣಿಕೆಗಳು ಸಾಕು. ಸ್ವಲ್ಪ ದೊಡ್ಡದಾದಮೇಲೆ ನೂರು ಮರಿಗಳಿಗೆ ಒಂದು ಗ್ಯಾಲನ್ನಿನಷ್ಟು ನೀರು ಹಿಡಿಸುವ ಎರಡು ನೀರುಣಿಕೆಗಳು ಬೇಕು. ನೀರುಣಿಕೆಗಳಲ್ಲಿ ಹಲವು ಬಗೆಗಳಿವೆ: ಅರೆಸ್ವಯಂಚಾಲಿತ ನೀರಿನ ಪಾತ್ರೆಗಳೂ ಸ್ವಯಂಚಾಲಿತ ಉದ್ದುದ್ದವಾಗಿರುವ ನೀರಿನ ಚಿಲುಮೆಗಳೂ ಇವೆ. ನೀರಿನ ಪಾತ್ರೆಗಳಿಂದ ನೀರು ಚೆಲ್ಲಿ ಲಿಟ್ಟರು ವಸ್ತುವು ಒದ್ದೆಯಾಗಬಹುದು. ಇದನ್ನು ತಪ್ಪಿಸಲು ಗೋಡೆಗೊಡನೆ ನೀರುಣಿಕೆಗಳ ಕೆಳಗೆ ಮರದ ಹಲಗೆಯನ್ನು ಇಡಬಹುದು. ಪ್ರತಿಸಲ ನೀರುಣಿಕೆಗಳಿಗೆ ನೀರು ತುಂಬಿಸುವಾಗಲೂ ಲಿಟ್ಟರಿನ ಮೇಲೆ ನೀರು ಚೆಲ್ಲದಂತೆ ಜಾಗರೂಕತೆ ವಹಿಸಬೇಕು. ನೀರಿನ ಪಾತ್ರೆ ಅಥವಾ ಚಿಲುಮೆಗಳನ್ನು ಆಗಿಂದಾಗ್ಗೆ ಚೆನ್ನಾಗಿ ಉಜ್ಜಿ ತೊಳೆಯುತ್ತಿರಬೇಕು. ಪ್ರತಿ ದಿನ ನೀರುಣಿಕೆಗಳಲ್ಲಿರುವ ಹಳೆಯ ನೀರನ್ನು ಚೆಲ್ಲಿ ಶುಚಿಯಾದ ಹೊಸ ನೀರನ್ನು ತುಂಬಿಸಬೇಕು.

ಕೋಳಿಮರಿ ಸಾಕಣೆಗೆ ಆರಂಭ ಸಿದ್ಧತೆ

ಕೋಳಿಮರಿಗಳ ಯಶಸ್ವೀ ಸಾಕಣೆಗೆ ಹಲವು ಪೂರ್ವ ಸಿದ್ಧತೆಗಳು ಅವಶ್ಯಕ. ಹೊರಗಡೆಯಿಂದ ಕೋಳಿಮರಿಗಳನ್ನು ತರುವಾಗ, ಅವು ಬರುವ ಮುನ್ನ ಎಲ್ಲ ಏರ್ಪಾಡುಗಳನ್ನು ಮಾಡಿಕೊಂಡಿರಬೇಕು. ಕಾವುಕಾಪ್ಪಿಗೆ ಮನೆ ಮತ್ತು ಇನ್ನಿತರ ಸಾಧನೋಪಕರಣಗಳನ್ನು ಚೆನ್ನಾಗಿ ತೊಳೆದು ಶುಚಿಮಾಡಿಟ್ಟಿರಬೇಕು. ಈ ಕಾರ್ಯವನ್ನು ಸರಿಯಾಗಿ ನಡೆಸದಿದ್ದರೆ ಕೋಳಿಮರಿಗಳು ರೋಗರುಜಿನಗಳಿಗೆ ತುತ್ತಾಗಲು ಎಡೆಮಾಡಿಕೊಟ್ಟಂತಾಗುತ್ತದೆ. ಕೋಳಿಮರಿಗಳು ಸರಿಯಾಗಿ ಬೆಳವಣಿಗೆ ಹೊಂದುವುದಿಲ್ಲ. ಅಲ್ಲದೆ ಅವುಗಳಲ್ಲಿ ಸಾವೂ ಸಂಭವಿಸುತ್ತದೆ. ಕಾವುಕಾಪ್ಪಿಗೆ ಮನೆಗಳನ್ನು ಚೆನ್ನಾಗಿ ಒಣಗಿಸಬೇಕು: ತೇವವಿರಬಾರದು. ಕೋಳಿಮನೆಗಳನ್ನು ಶುಚಿಮಾಡಿದ ನಂತರ ಅವುಗಳನ್ನು ಒಣಗಲು ಬಿಡಬೇಕು. ತಳಕ್ಕೆ ಹೊಸ ಲಿಟ್ಟರು ಹರಡಬೇಕು. ಇದನ್ನು ನೆಲದ ಮೇಲೆ ಸುಮಾರು 2-4 ಅಂಗುಲ ದಪ್ಪ ಹಾಕಬೇಕು. ಕೋಳಿಮನೆಗಳ ತಳಕ್ಕೆ ಬಳಸುವ ಸಾಮಾನ್ಯವಾದ ಲಿಟ್ಟರು ವಸ್ತುಗಳೆಂದರೆ ಮರದ ಪುಡಿ, ಬತ್ತದ ಹೊಟ್ಟು, ಪುಡಿಮಾಡಿದ ಮುಸುಕಿನ ಜೋಳದ ತೆನೆಗಳು ಮುಂತಾದುವು. ಆಯಾ ಪ್ರದೇಶಗಳಲ್ಲಿ ಸುಲಭವಾಗಿ, ಅಗ್ಗವಾಗಿ ದೊರೆಯುವ ಇವುಗಳಲ್ಲಿ ಯಾವುದೇ ವಸ್ತುವನ್ನು ಲಿಟ್ಟರು ವಸ್ತುವಾಗಿ ಬಳಸಬಹುದು. ಆರಂಭದಲ್ಲಿ ಕೆಲವು ದಿನಗಳವರೆಗೆ ಲಿಟ್ಟರಿನ ಮೇಲೆ ಹಳೆಯ ವೃತ್ತ ಪತ್ರಿಕೆಗಳನ್ನು ಹಾಸಬೇಕು. ಏಕೆಂದರೆ ಮೇವ ತಿನ್ನುವ ಬದಲು ಲಿಟ್ಟರು ವಸ್ತುವನ್ನೇ ತಿಂದುಬಿಡುವ ಸಂಭವ ಹೆಚ್ಚು

ಕೋಳಿಮರಿಗಳನ್ನು ಬೇರೆ ಕಡೆಯಿಂದ ಮರಿಮನೆಗಳಿಗೆ ತರಿಸಿಕೊಳ್ಳುವ ಎರಡು ದಿನಗಳ ಮುನ್ನ ಅಥವಾ ಕೋಳಿಮರಿಗಳನ್ನು ಕಾವುಕಾಪುಗೆಗಳಲ್ಲಿ ಬಿಡುವ ಮುನ್ನ ಕಾವುಕಾಪುಗೆಗಳು ಸರಿಯಾಗಿ ಕೆಲಸ ಮಾಡುತ್ತಿವೆಯೋ ಇಲ್ಲವೇ ಎಂಬುದನ್ನು ತಿಳಿಯಲೂ ಶಾಖವನ್ನು ಸರಿಯಾಗಿ ನಿಯಂತ್ರಿಸಿಟ್ಟಿರುತ್ತವೆಯೋ ಇಲ್ಲವೇ ಎಂಬುದನ್ನು ಖಚಿತಪಡಿಸಿಕೊಳ್ಳಲೂ ಒಂದೆರಡು ದಿನಗಳ ಕಾಲ ಬಳಸಿ ನೋಡಬೇಕು.

ಕೋಳಿಮರಿಗಳು ಕಾವುಕಾಪುಗೆಗಳಿಂದ ಹೊರಬಂದುಬಿಡುವುದುಂಟು. ಅದನ್ನು ತಪ್ಪಿಸಿ, ಅವು ಒಳಗೇ ಇರುವಂತೆ ಮಾಡಲು ಸುತ್ತಲೂ ಮರಿ ಕಾವುಕಾಪುತಡೆ (ಬ್ರೂಡರ್ ಗಾರ್ಡ್)ಗಳನ್ನಿಟ್ಟಿರಬೇಕು. ಇದಕ್ಕಾಗಿ ಸುಮಾರು ಹನ್ನೆರಡು ಅಂಗುಲ ಎತ್ತರದ ರಟ್ಟುಗಳನ್ನು ಬಳಸಬೇಕು. ಇವು ಮರಿಗಳು ಕಾವುಕಾಪುಗೆಗಳಿಂದ ಹೊರ ಬರದಂತೆ ಅಡ್ಡವಾಗಿರುವುದರ ಜೊತೆಗೆ ಚಳಿಗಾಲದಲ್ಲಿ ತಂಡಿ, ಚಳಿಗಾಳಿ ಕಾವುಕಾಪುಗೆ ಮನೆಗಳೊಳಕ್ಕೆ ಪ್ರವೇಶಿಸದಂತೆ ತಡೆಯುತ್ತವೆ. ಬೇಸಿಗೆಕಾಲದಲ್ಲಿ ತಂತಿಬಲೆಯನ್ನು ಮರಿತಡೆಗಳಾಗಿ ಬಳಸಬಹುದು. ಈ ಮರಿತಡೆಗಳನ್ನು ಹವಾಗುಣವನ್ನವಲಂಬಿಸಿ ಮರಿಗಳಿಗೆ 8 ರಿಂದ 10 ದಿನಗಳು ತುಂಬುವವರೆಗೆ ಬಳಸಬಹುದು.


ಕೋಳಿಮರಿಗಳನ್ನು ಕಾವುಕಾಪುಗೆಗಳ ಕೆಳಗೆ ಬಿಡುವುದಕ್ಕೆ ಕೆಲವು ಗಂಟೆಗಳು ಮುಂಚಿತವಾಗಿ ನೀರು ಮತ್ತು ಮೇವನ್ನು ಸಿದ್ಧಪಡಿಸಿರಬೇಕು. ಮೇವಿನ ತಟ್ಟೆಗಳನ್ನೂ ನೀರುಚಿಲುಮೆಗಳನ್ನೂ ಕಾವುಕಾಪುಗೆಗಳ ಅಂಚಿನಲ್ಲಿ, ಆದರೆ ಹೆಚ್ಚು ಸಮೀಪವಾಗಿ ಇಟ್ಟಿರಬೇಕು.

ಹೊಸದಾಗಿ ತರಿಸಿದ ಮರಿಗಳ ಆರೈಕೆ


ಕೋಳಿಮರಿಗಳನ್ನು ಬೇರೆಡೆಯಿಂದ ತರಿಸಿಕೊಂಡ ಕೂಡಲೇ ಅವುಗಳನ್ನು ಕಾವುಕಾಪುಗೆಗಳ ಕೆಳಗೆ ಬಿಡಬೇಕು. ಕೋಳಿಮರಿಗಳನ್ನು ಬುಟ್ಟಿಗಳಲ್ಲಿ ಕಾವುಕಾಪುಗೆ ಮನೆಗಳಿಗೆ ಸಾಗಿಸುವಾಗ ಅವುಗಳಿಗೆ ತಂಡಿಯಾಗದಂತೆ ಜಾಗರೂಕತೆ ವಹಿಸಬೇಕು. ಬೆಚ್ಚನೆಯ ವಾತಾವರಣ ಕಲ್ಪಿಸುವ ಹಾವರಿನ ಕೆಳಗೆ ಕೋಳಿಮರಿಗಳನ್ನು ಬಿಟ್ಟೊಡನೆಯೇ ಅವು ಮೇವು ಮತ್ತು ನೀರಿಗಾಗಿ ಮೇವಿನ ತಟ್ಟೆ ಹಾಗೂ ನೀರು ಚಿಲುಮೆಯ ಕಡೆಗೆ ಹೋಗುತ್ತವೆಯೋ ಇಲ್ಲವೇ ಎಂಬುದನ್ನು ಒಂದೆರಡು ನಿಮಿಷಗಳವರೆಗೆ ಗಮನಿಸಬೇಕು. ಕಾವುಕಾಪುಗೆಗಳ ಕೆಳಗೆ ಬಿಟ್ಟ ಕೆಲಕಾಲದವರೆಗೆ ಮರಿಗಳನ್ನು ಹೆಚ್ಚು ಜಾಗರೂಕತೆಯಿಂದ ನೋಡಿಕೊಳ್ಳಬೇಕು. ಈ ಅವಧಿಯಲ್ಲಿ ಅವುಗಳಿಗೆ ವಿಶೇಷ ಗಮನಕೊಟ್ಟು ಸಾಕಿದಲ್ಲಿ ಅವು ಹೆಚ್ಚು ಆರೋಗ್ಯಕರವಾಗಿ ಬೆಳೆದು ಮುಂದೆ ಲಾಭದಾಯಕ ಹೇಂಟೆಗಳಾಗುತ್ತವೆ.

ಕಾವುಕಾಪುಗೆ ಮನೆಗಳ ನಿರ್ವಹಣೆ


ಕಾವುಕಾಪುಗೆ ಮನೆಗಳಲ್ಲಿ ಸರಿಯಾದ ಹಾಗೂ ಅಗತ್ಯ ಶಾಖವಿರಬೇಕು. ಕಾವುಕಾಪುಗೆಗಳು ಅಗತ್ಯ ಶಾಖ ನಿಯಂತ್ರಿಸುವಂತಿರಬೇಕು. ಕೋಳಿಮರಿ ಸಾಕಣೆಯಲ್ಲಿ



ಒಂದು ದಿವಸದ ಕೋಳಿಮರಿ



ಮಾಂಸದ ತಳಿ(ಬ್ರಾಯ್ಲರ್)ಗಳು



ವೈಟ್ ಲೆಗ್‌ಹಾರ್ನ್—ಮೊಟ್ಟೆ ಇಡುವ ತಳಿ



ವೈಟ್‌ರಾಕ್—ಮಾಂಸಕ್ಕಾಗಿ

ಇದು ಬಹು ಮುಖ್ಯವಾದ ಅಂಶ. ಶಾಖನಿಯಂತ್ರಣವು ಋತುಮಾನವನ್ನು ಅವಲಂಬಿಸಿರುತ್ತದೆ. ಏನೇಆದರೂ ಹಾವರಿನ ತಳಭಾಗದಲ್ಲಿ ಅಂದರೆ, ತಳದಿಂದ 2 ಅಂಗುಲ ಮೇಲ್ಗಡೆಯಲ್ಲಿ 90°F. ಶಾಖವನ್ನು ಕಾಯ್ದಿರಿಸಬೇಕು. ಈ ಶಾಖವನ್ನು ಪ್ರತಿ ವಾರಕ್ಕೆ 5°F.ಗಳಂತೆ ಕಡಮೆ ಮಾಡಿಕೊಳ್ಳುತ್ತಾ ಹೋಗಬೇಕು. ಈ ರೀತಿ ಮರಿಗಳಿಗೆ ಕೃತಕ ಶಾಖದ ಅಗತ್ಯವಿಲ್ಲದವರೆಗೆ ಶಾಖ ನಿಯಂತ್ರಣ ಮಾಡುತ್ತಿರಬೇಕು. ಕೋಳಿಮರಿಗಳಿಗೆ ಎಷ್ಟು ಶಾಖ ಬೇಕು ಎಂಬುದು ಕಾವುಕಾವುಗೆಗಳಲ್ಲಿರುವ ಅವುಗಳ ವರ್ತನೆಯಿಂದಲೇ ತಿಳಿದುಕೊಳ್ಳಬಹುದು. ಆದರೂ ಎಳೆಯ ಮರಿಗಳಲ್ಲಿ ಇದು ಅಷ್ಟೊಂದು ನಿಚಿತವಾಗಿ ತಿಳಿದುಬರುವುದಿಲ್ಲ. ಅವುಗಳ ಶಾಖದ ಅಗತ್ಯತೆಯನ್ನು ತಿಳಿಯುವುದೂ ಸ್ವಲ್ಪ ಕಷ್ಟಕರವೇ ಆಗುತ್ತದೆ. ಮೊದಲ ಕೆಲವು ದಿನಗಳು ಮರಿಗಳು ಕಾವುಕಾವುಗೆಗಳಲ್ಲಿ ಆರಾಮವಾಗಿವೆಯೇ ಎಂದು ಗಮನಿಸಬೇಕು. ಏಕೆಂದರೆ, ಮೊದಲ ಒಂದೆರಡು ದಿನಗಳ ವಯಸ್ಸಿನಲ್ಲಿ ಕೋಳಿಮರಿಗಳ ದೈಹಿಕ ಶಾಖವು ಸರಿಯಾದ ಮಟ್ಟಕ್ಕೆ ಬಂದಿರುವುದಿಲ್ಲ. ಮರಿಗಳು 10-12 ದಿನಗಳ ವಯಸ್ಸಿಗೆ ಬಂದಾಗ ಅವುಗಳ ವರ್ತನೆ ಅವುಗಳಿಗೆ ಆರಾಮವಾಗಿರಲು ಎಷ್ಟು ಮಟ್ಟದಲ್ಲಿ ಶಾಖಬೇಕು ಎಂಬುದನ್ನು ನಿಖರವಾಗಿ ಸೂಚಿಸುತ್ತದೆ. ಕಾವುಕಾವುಗೆಗಳ ನಿರ್ವಹಣೆಯಲ್ಲಿ ಗಮನಿಸಬೇಕಾದ ಮತ್ತೊಂದು ಮುಖ್ಯ ಅಂಶವೆಂದರೆ ಶಾಖವನ್ನು 70°-75°F.ನಲ್ಲಿ ಕಾಯ್ದಿರಿಸುವುದು.

ಮರಿಗಳಿಗೆ ಮೇವುಣಿಸುವಿಕೆ

ಕೋಳಿಮರಿಗಳು ಚೆನ್ನಾಗಿ ಬೆಳೆದು ಬೇಗನೆ ಮೊಟ್ಟೆಯಿಡುವ ಹಂತಕ್ಕೆ ಬರಬೇಕಾದರೆ ಅವು ಮರಿಯಿದ್ದಾಗಲೇ ಒಳ್ಳೆಯ ಪೌಷ್ಟಿಕವಾದ ಆಹಾರವನ್ನು ನೀಡಬೇಕು. ಅವುಗಳಿಗೆ ಸಮತೋಲನ ಆಹಾರವನ್ನು ಒದಗಿಸಬೇಕು. ಮರಿಗಳ ಮೇವಿನಲ್ಲಿ ಶೇಕಡಾ 21-22ರಷ್ಟು ಪ್ರೋಟೀನಿರಬೇಕು. ಈ ಆರಂಭ ಮೇವು ಅಥವಾ ಮರಿಮೇವನ್ನು ಮರಿಗಳಿಗೆ 8ವಾರ ತುಂಬುವವರೆಗೂ ಕೊಡಬೇಕು. ಅನಂತರ ಅವು ಮೊಟ್ಟೆ ಇಡುವ ವಯಸ್ಸಿಗೆ ಬರುವತನಕ ಬೆಳವಣಿಗೆ ಮೇವನ್ನು ಒದಗಿಸಬೇಕು. ಇದರಲ್ಲಿ ಶೇಕಡಾ 18-19ರಷ್ಟು ಪ್ರೋಟೀನಿರಬೇಕು.

ಲಸಿಕೆ ಹಾಕುವಿಕೆ

ಕೋಳಿಮರಿಗಳನ್ನು ರೋಗಗಳಿಂದ ರಕ್ಷಿಸುವುದು ಕೋಳಿ ಸಾಕಣೆಯಲ್ಲಿ ಅದ್ಯ ಕರ್ತವ್ಯ. ಕೊಕ್ಕರೆ ರೋಗ, ಕೋಳಿಮೈಲಿ ಮುಂತಾದ ಕೆಲವು ಸಾಮಾನ್ಯ ರೋಗಗಳು ಬರದಂತೆ ಕೋಳಿಮರಿಗಳಿಗೆ ಲಸಿಕೆ ಹಾಕಬೇಕು. ಅವುಗಳಲ್ಲಿ ರೋಗನಿರೋಧಕ ಶಕ್ತಿಯನ್ನುಂಟುಮಾಡಬೇಕು. ಕೊಕ್ಕರೆ ರೋಗ ಮತ್ತು ಕೋಳಿಮೈಲಿಯ ಲಸಿಕೆಗಳು ದೊರೆಯುತ್ತವೆ. ಇವುಗಳನ್ನು ಈ ಮುಂದೆ ತಿಳಿಸಿದ ಪ್ರಕಾರ ಉಪಯೋಗಿಸಬೇಕು:

4 ದಿನದ ಮರಿಗಳಿಗೆ	'F'	ರಾಣಿಕೇತ್ ಲಸಿಕೆ (ಕೊಕ್ಕರೆ ರೋಗದ್ದು)
6ನೆಯ ವಾರದಲ್ಲಿ	'F'	ರಾಣಿಕೇತ್ ಲಸಿಕೆ (ಕೊಕ್ಕರೆ ರೋಗದ್ದು)
5-8ನೆಯ ವಾರದಲ್ಲಿ		ಕೋಳಿಪ್ಯೈಲಿ
12ನೆಯ ವಾರದಲ್ಲಿ	R_2B	(ಕೊಕ್ಕರೆ ರೋಗದ) ಚುಚ್ಚು ಮದ್ದು

ಅಧ್ಯಾಯ 8

ಗರಿಕಳಚಿಕೆ ಮತ್ತು ಗರಿಬೆಳವಣಿಗೆ

ಗರಿಕಳಚಿಕೆ ಕೋಳಿಗಳ ಒಂದು ಶರೀರಕ್ರಿಯಾ ಪ್ರಕ್ರಿಯೆ. ಈ ಪ್ರಕ್ರಿಯೆಯಲ್ಲಿ ಕೋಳಿಗಳು ತಮ್ಮ ಮೈಮೇಲಿನ ಹಳೆಯ ಗರಿಗಳನ್ನು ಕಳಚಿಕೊಳ್ಳುತ್ತವೆ. ಅದೇ ವೇಳೆಗೆ ಹೊಸ ಗರಿಗಳು ಹುಟ್ಟಿಕೊಳ್ಳುತ್ತವೆ. ಇದು ನಿರಂತರವಾಗಿ ಸಾಗುತ್ತಿರುವ ಒಂದು ಪ್ರಕ್ರಿಯೆ. ಒಂದು ನಿರ್ದಿಷ್ಟ ಅವಧಿಯಲ್ಲಿ ಕೋಳಿಗಳ ಜೀವಮಾನದಲ್ಲಿ ಹಲವಾರು ಬಾರಿ ನಡೆಯುತ್ತಿರುವ ಇದು ಒಂದು ಆನುವಂಶಿಕ ಪ್ರಕ್ರಿಯೆ. ಕೋಳಿಯು ಒಂದು ದಿನದ ವಯಸ್ಸಿನ ಮರಿಯಿಂದ ಆರಂಭಿಸಿ ಅದು ಬೆಳೆದು ದೊಡ್ಡದಾಗುವುದ ರೊಳಗೆ ಹಲವಾರು ಬಾರಿ ಗರಿಕಳಚಿಕೊಂಡು ಹೊಸಗರಿಗಳನ್ನು ಪಡೆಯುತ್ತಿರುತ್ತದೆ. ಮರಿಯು ಮೊಟ್ಟೆ ಒಡೆದು ಹೊರಬಂದಾಗಲೇ, ಅಂದರೆ ದಿನದ ಮರಿಗಳ ಮೈ ಮೇಲೆಯೇ ಸೂಕ್ಷ್ಮ ಹಾಗೂ ನವಿರಾದ, ಮೃದುವಾದ ಗರಿಗಳಿರುತ್ತವೆ. ಇವೇ **ಮರಿ ತುಪ್ಪಳು ಅಥವಾ ಎಳೆಸು ಗರಿಗಳು.** ಅನಂತರ ಮರಿಗಳು ಮೂರು-ನಾಲ್ಕು ವಾರಗಳ ವಯಸ್ಸಿಗೆ ಬಂದಾಗ ಮರಿತುಪ್ಪಳು ಕಳಚಿಬಿದ್ದು **ಎಳೆ ಗರಿಗಳು** ಬೆಳೆಯ ತೊಡಗುತ್ತವೆ. ಬೇಗ ಗರಿ ಹುಟ್ಟುವ ಕೋಳಿತಳಿಗಳಲ್ಲಿ ಮರಿ ಹುಟ್ಟಿದ ಸರಿಯಾಗಿ 18ನೆಯ ದಿನಕ್ಕೆ ಮರಿ ತುಪ್ಪಳು ಉದುರಿಬೀಳತೊಡಗಿ ಹೊಸ ಎಳೆಗರಿಗಳು ಬೆಳೆಯ ತೊಡಗುತ್ತವೆ. ಮರಿಗಳು 8-10 ವಾರ ವಯಸ್ಸಿಗೆ ಬಂದಾಗ ಎಳೆಗರಿಗಳು ಬಿದ್ದು ಅವುಗಳಿಗೆ ಬದಲು **ಸಣ್ಣಗರಿಗಳು** ಬೆಳೆಯತೊಡಗುತ್ತವೆ. 13-14 ವಾರಗಳಲ್ಲಿ ಅಂದರೆ ನಾಲ್ಕನೆಯ ತಿಂಗಳಲ್ಲಿ ಸಣ್ಣಗರಿಗಳು ಕಳಚಿಬಿದ್ದು ಅವುಗಳ ಸ್ಥಳಗಳಲ್ಲಿ **ದೊಡ್ಡ**ಗರಿಗಳು ಹುಟ್ಟಿಕೊಳ್ಳುತ್ತವೆ. 5-6 ತಿಂಗಳೊಳಗೆ (ಕೆಲವು ಕೋಳಿಗಳಲ್ಲಿ 7 ತಿಂಗಳಲ್ಲಿ) ದೊಡ್ಡಗರಿಗಳು ಸಂಪೂರ್ಣವಾಗಿ ಕಳಚಿಬಿದ್ದು ಹೊಸ ದೊಡ್ಡಗರಿಗಳು ಹುಟ್ಟುತ್ತವೆ. ಕೆಲವುವೇಳೆ ಕೋಳಿಗಳು ಪ್ರಾಯಕ್ಕೆ ಬರುವ ಮುನ್ನ ಒಮ್ಮೆ ಗರಿ ಕಳಚಿ ಹೊಸ ಗರಿ ಬರುವುದುಂಟು. ಇದನ್ನೇ **ಪ್ರಾಯಪೂರ್ವ ಗರಿಕಳಚಿಕೆ** ಎಂದು ಕರೆಯುತ್ತಾರೆ. ಅನಂತರ ಒಂದು ವರ್ಷ ಮುಗಿಯುವವರೆಗೆ ಗರಿಗಳಲ್ಲಿ ಯಾವ ಬದಲಾವಣೆಯೂ ಇರುವುದಿಲ್ಲ. ಒಂದು ವರ್ಷದನಂತರ ಕೋಳಿಗಳು ಗರಿಕಳಚಿ ಕೊಂಡು ಹೊಸಗರಿಗಳು ಪಡೆಯುತ್ತವೆ. ಇದು ಮೊದಲ **ವಾರ್ಷಿಕ ಗರಿಕಳಚಿಕೆ.**

ಗರಿಕಳಚಿಕೆಯಿಂದ ಕೋಳಿಯ ಮೊಟ್ಟೆ ಉತ್ಪಾದನಾ ಸಾಮರ್ಥ್ಯವನ್ನು ಅಳೆಯ ಬಹುದು. ಅದಕ್ಕಾಗಿ ಗರಿಕಳಚುವ ಕಾಲ ಮತ್ತು ಅವಧಿಯನ್ನು ಗಣನೆಗೆ ತೆಗೆದು ಕೊಳ್ಳಬೇಕು. ಬೇಗ ಗರಿಕಳಚುವ ಕೋಳಿಗಳು ಸಾಮಾನ್ಯವಾಗಿ ಬಹಳ ಕಡಮೆ

ಮೊಟ್ಟೆ ಇಡುವ ಕೋಳಿಗಳಾಗಿರುತ್ತವೆ. ಸಾಮಾನ್ಯವಾಗಿ, ಕೋಳಿಗಳು ಮೊಟ್ಟೆ ಇಡುವ ವರ್ಷಾಕಾಲದಲ್ಲಿ, ಬೇಸಗೆ ಮತ್ತು ಆರಂಭ ಮಳೆಗಾಲಗಳಲ್ಲಿ ಗರಿಕಳಚುತ್ತವೆ. ಕಡಮೆ ಮೊಟ್ಟೆ ಇಡುವ ಕೋಳಿಗಳು ಸಾಮಾನ್ಯವಾಗಿ ಜೂನ್ ಮತ್ತು ಜುಲೈ ತಿಂಗಳಲ್ಲಿ ಮೊಟ್ಟೆ ಇಡುವುದನ್ನು ನಿಲ್ಲಿಸಿ, ಗರಿ ಕಳಚಲು ಆರಂಭಿಸುತ್ತವೆ. ಇವು ಸಾಮಾನ್ಯವಾಗಿ ಗರಿಕಳಚಲು ಹೆಚ್ಚು ಅವಧಿ ತೆಗೆದುಕೊಳ್ಳುತ್ತವೆ. ನಿಯಮಪ್ರಕಾರ ಈ ಕಾಲದಲ್ಲಿ ಕೋಳಿಗಳು ಮೊಟ್ಟೆ ಇಡುವುದಿಲ್ಲ. ತಡವಾಗಿ ಗರಿಕಳಚುವ ಕೋಳಿಗಳು ಕೇವಲ ಒಂದೂವರೆ ತಿಂಗಳು ವಿರಾಮ ಪಡೆದು ಡಿಸೆಂಬರ್. ಜನವರಿ ತಿಂಗಳಲ್ಲಿ ಮೊಟ್ಟೆ ಇಡಲು ಆರಂಭಿಸುತ್ತವೆ. ಕಡಮೆ ಮೊಟ್ಟೆ ಉತ್ಪಾದಕ ಹಾಗೂ ಅಧಿಕ ಮೊಟ್ಟೆ ಉತ್ಪಾದಕ ಕೋಳಿಗಳಲ್ಲಿ ಹೊಸಗರಿಗಳು ಬೆಳೆಯಲು ಹೆಚ್ಚು ಕಡಮೆ ಆರು ವಾರಗಳು ಹಿಡಿಯುತ್ತವೆ. ಅಧಿಕ ಮೊಟ್ಟೆ ಉತ್ಪಾದಕ ಹೇಂಟೆಗಳಲ್ಲಿ ಒಂದೊಂದು ಸಲಕ್ಕೆ ಹೆಚ್ಚು ಹೆಚ್ಚು ಗರಿಗಳು ಬೆಳೆದು ಕಡಮೆ ಉತ್ಪಾದಕ ಹೇಂಟೆಗಳಿಗಿಂತ ಮುಂಚೆಯೇ ಗರಿಬೆಳವಣಿಗೆಯ ಕಾರ್ಯ ಪೂರೈಸುತ್ತವೆ. ಅಪರೂಪಕ್ಕೆ ಕೆಲವು ಚೆನ್ನಾಗಿ ಮೊಟ್ಟೆಯಿಡುವ ಕೋಳಿಗಳು ಗರಿಕಳಚಿ. ಹೊಸಗರಿಗಳು ಬೆಳೆಯುತ್ತಿರುವಾಗಲೂ ಮೊಟ್ಟೆ ಇಡುತ್ತಲೇ ಇರುತ್ತವೆ.

ಗರಿಕಳಚಿಕೆ ಆರಂಭವಾದಾಗ ಕಳಚಿ ಬೀಳುವ ಗರಿಗಳನ್ನು ಒಂದೊಂದಾಗಿ ಎಣಿಸಿಕೊಳ್ಳುವುದರ ಮೂಲಕ ಗರಿಗಳನ್ನು ಲೆಕ್ಕಹಾಕಬಹುದು. ಬಹುಬೇಗನೆ ಆರಂಭಿಸಿ ನಿಧಾನವಾಗಿ ಗರಿಕಳಚುವ ಕೋಳಿಗಳು ಸಾಮಾನ್ಯವಾಗಿ ಸಲಕ್ಕೆ ಒಂದು ಅಥವಾ ಎರಡು ಗರಿಗಳನ್ನು ಕಳಚಿಕೊಳ್ಳುತ್ತಿರುತ್ತವೆ. ತಡವಾಗಿ ಆರಂಭಿಸಿ ಬೇಗ ಬೇಗನೆ ಗರಿಕಳಚುವ ಕೋಳಿಗಳು ಸಲಕ್ಕೆ ಮೂರು ಅಥವಾ ಅದಕ್ಕಿಂತಲೂ ಹೆಚ್ಚಿನ ಗರಿಗಳನ್ನು ಕಳಚಿಕೊಳ್ಳುತ್ತವೆ. ಹೊಸ ಗರಿಗಳು ಬೆಳೆಯಲು ಸುಮಾರು ಆರು ವಾರಗಳು ಹಿಡಿಯುತ್ತವೆ ಹಾಗೂ ಮೊದಲ ಮೂರುವಾರಗಳಲ್ಲಿ 2/3 ರಷ್ಟು ಗರಿಗಳು ಬೆಳೆಯುತ್ತವೆ. ಆದ್ದರಿಂದ ಹೊಸ ಗರಿಗಳ ಸಂಖ್ಯೆ ಹಾಗೂ ಅವುಗಳ ಉದ್ದ ಗಮನಿಸಿ ರೆಕ್ಕೆ ಗರಿಕಳಚಿಕೆಯ ಕಾಲವನ್ನು ಲೆಕ್ಕ ಹಾಕಬಹುದು. ಹೊಸ ಗರಿಗಳು ನಿರ್ಮಲವಾಗಿಯೂ ಪ್ರಕಾಶಮಾನವಾಗಿಯೂ ಇರುತ್ತವೆ. ಗರಿಕಡ್ಡಿ ಮೃದುವಾಗಿರುತ್ತದೆ. ಗರಿಗಳ ಸುತ್ತಂಚುಗಳು ಅಗಲವಾಗಿರುತ್ತವೆ. ಹೊಸ ಗರಿಕಡ್ಡಿಗಳಲ್ಲಿ ನೀಲಿ ಬಣ್ಣದ ಕಾಂಡವು ಗೋಚರವಾಗುತ್ತದೆ. ಹಳೆಗರಿಗಳು ಮಾಸಿದಂತಿರುತ್ತವೆ. ಮಣ್ಣು ತುಂಬಿ ಗಲೀಜಾಗಿರುತ್ತವೆ: ಸವೆದುಹೋಗಿರುತ್ತವೆ ಮತ್ತು ಚೂಪಾಗಿರುತ್ತವೆ: ಹೊಳೆಯುತ್ತಿರುವುದಿಲ್ಲ. ಹಳೆಯ ಗರಿಕಡ್ಡಿ ಕಾಂಡವು ಬಿಳುಪಾಗಿರುತ್ತದೆ. ಕಾಂಡಕಿರುಳು ಇರುವುದಿಲ್ಲ: ಟೊಳ್ಳಾಗಿರುತ್ತದೆ.

ಗರಿಕಳಚಿಕೆಯನ್ನು ಪ್ರಭಾವಿಸುವ ಅಂಶಗಳು

ಹೇಂಟೆಗಳ ತೂಕ ಹಾಗೂ ಅವುಗಳ ಆರೋಗ್ಯ ಗರಿಕಳಚಿಕೆಯ ಕಾಲ ಮತ್ತು ಗರಿಕಳಚಿ ಬೀಳುವ ವೇಗದ ಮೇಲೆ ಬಹುಮಟ್ಟಿನ ಪ್ರಭಾವ ಬೀರುತ್ತವೆ. ಪರಿಸರದ

ಸ್ಥಿತಿಗಳೂ ಅಂದರೆ, ಕೋಳಿಗಳಿಗೆ ನೀಡುವ ಆಹಾರ ನೀಡಿಕೆಯ ಕ್ರಮ ಮತ್ತು ನಿರ್ವಹಣೆ ಇವೂ ಸಹ ಗರಿಕಳಚಿಕೆಯ ಕಾಲ ಮತ್ತು ವೇಗದ ಮೇಲೆ ಪ್ರಭಾವ ಬೀರುತ್ತವೆ. ಕೋಳಿಗಳಿಗೆ ನೀಡುವ ಆಹಾರದಲ್ಲಿ ಬಹಳಷ್ಟು ಬದಲಾವಣೆ ಮಾಡುವುದರಿಂದ, ಅಗತ್ಯ ಅಮೈನೋ ಆಮ್ಲಗಳು ಕಡಮೆ ಇರುವ ಆಹಾರವನ್ನು ನೀಡುವುದರಿಂದ ಹಾಗೂ ಕೋಳಿಗಳ ಹೊರಗೂ ಒಳಗೂ ಪರೋಪಜೀವಿಗಳಿದ್ದಲ್ಲಿ ಅವು ಒಳ್ಳೆಯ ಹೇಂಟೆಯೂ ಸಹ ಪ್ರಾಯಕ್ಕೆ ಬರುವ ಮುನ್ನವೇ ಗರಿಕಳಚಿಕೊಳ್ಳುವಂತೆ ಮಾಡುತ್ತವೆ. ಆರಂಭದಲ್ಲೇ ಇದನ್ನು ಗಮನಿಸಿ, ಅದಕ್ಕೆ ಕಾರಣವೇನೆಂದು ಕಂಡುಕೊಂಡು ಅದನ್ನು ಸರಿಪಡಿಸಿದರೆ ಗರಿಕಳಚಿ ಬೀಳುವುದನ್ನು ತಡೆಗಟ್ಟಬಹುದು ಹಾಗೂ ಹೇಂಟೆ ಮೊಟ್ಟೆ ಇಡಲು ಪ್ರಾರಂಭಿಸುವಂತೆ ಮಾಡಬಹುದು.

ಗರಿಕಳಚಿಕೆಯ ವರ್ಗೀಕರಣ

1) ಕಾಲದ ಆಧಾರದ ಮೇಲೆ — ಬಹುಬೇಗ ಮತ್ತು ತಡವಾಗಿ

2) ಗರಿಕಳಚಿ ಬೀಳುವ ವೇಗದ ಆಧಾರದ ಮೇಲೆ — ಶೀಘ್ರ ಮತ್ತು ನಿಧಾನವಾಗಿ

3) ಮೊಟ್ಟೆ ಇಡುವ ಸ್ಥಿತಿಯ ಆಧಾರದ ಮೇಲೆ —
   1. ಕೋಳಿ ಮೊಟ್ಟೆ ಇಡುವ ಕಾಲದಲ್ಲಿ
   2. ಕೋಳಿ ಮೊಟ್ಟೆ ಇಡದ ಕಾಲದಲ್ಲಿ

4) ಗರಿಕಳಚಿಕೆಯ ಸ್ವಭಾವದ ಆಧಾರದ ಮೇಲೆ —
   1. ಸಂಪೂರ್ಣ ಗರಿಕಳಚಿಕೆ
   2. ತೆರಪು ತೆರಪು ಗರಿಕಳಚಿಕೆ
   3. ಪುನರಾವೃತ್ತಿ ಗರಿಕಳಚಿಕೆ
   4. ಮುಂದುವರಿಕೆ ಗರಿಕಳಚಿಕೆ

ಗರಿಕಳಚಿಕೆಯ ಕ್ರಮ

ಕೋಳಿಗಳಲ್ಲಿ ಗರಿಕಳಚಿಕೆಯು ಒಂದು ನಿರ್ದಿಷ್ಟಕ್ರಮದಲ್ಲಿ ನಡೆಯುತ್ತಿರುತ್ತದೆ. ಈ ಕ್ರಮದಲ್ಲಿ ಬದಲಾವಣೆ ಕಂಡುಬರುವುದು ಅಪರೂಪ. ಕೋಳಿಯ ಬೇರೆ ಬೇರೆ ಭಾಗಗಳಿಂದ ಬೇರೆ ಬೇರೆ ಕ್ರಮದಲ್ಲಿ ಗರಿಗಳು ಕಳಚಿ ಬೀಳುತ್ತಿರುತ್ತವೆ. ಕೋಳಿಯ ವಿವಿಧ ಭಾಗಗಳಿಂದ ಗರಿಕಳಚಿ ಬೀಳುವ ಕ್ರಮವು ತಲೆ, ಕತ್ತು, ದೇಹ, ರೆಕ್ಕೆ, ಬಾಲ, ಈ ಅನುಕ್ರಮದಲ್ಲಿರುತ್ತದೆ:

ಗರಿಕಳಚಿ ಬೀಳುವ ಕಾಲದಲ್ಲಿ ಅನುಸರಿಸಬೇಕಾದ ಮುಂಜಾಗ್ರತ ಕ್ರಮಗಳು

1) ಕೋಳಿಗಳು ಗರಿಕಳಚಿಕೊಳ್ಳುವುದಕ್ಕೆ ಒಂದು ತಿಂಗಳು ಮುಂಚೆಯೇ ಅವುಗಳಿಗೆ ಜಂತು ಹುಳುಗಳ ಔಷಧಿ ಕೊಡಬೇಕು.

2) ತಮ್ಮ ಕೊಕ್ಕುಗಳಿಂದ ತಮ್ಮ ಇಲ್ಲವೇ ಇತರ ಕೋಳಿಗಳ ಹೊಸದಾಗಿ ಬೆಳೆದ ಗರಿಗಳನ್ನು ಕಿತ್ತುಹಾಕುತ್ತಿವೆಯೋ ಎಂಬುವುದನ್ನು ಪರೀಕ್ಷಿಸಬೇಕು. ಅಂಥ ಕೋಳಿ

ಗಳನ್ನು ಗುಂಪಿನಿಂದ ಬೇರ್ಪಡಿಸಿ ತೆಗೆಯಬೇಕು.

3) ಕೋಳಿಗಳ ಮೈಮೇಲಿನ ಹೊರ ಪರೋಪಜೀವಿಗಳನ್ನು ನಿಯಂತ್ರಿಸಲು ಕೋಳಿಗಳ ಮೈಮೇಲೆ ಕೀಟನಾಶಕ ಔಷಧಿ ಅಥವಾ ಪುಡಿಯನ್ನು ಚಿಮುಕಿಸಬೇಕು.

4) ಕೋಳಿಗಳು ತಮ್ಮ ಮೈತೂಕವನ್ನು ಕಳೆದುಕೊಳ್ಳದಂತೆ ಒಳ್ಳೆಯ ಹಾಗೂ ಸಮತೋಲನ ಆಹಾರ ಕೊಡಬೇಕು.

5) ಗುಂಪಿನಿಂದ ಹುಂಜವನ್ನು ತೆಗೆಯಬೇಕು. ಆ ಕಾಲದಲ್ಲಿ ಹುಂಜವನ್ನು ಹೇಂಟೆಗಳೊಂದಿಗೆ ಕೂಡಲು ಬಿಡಬಾರದು.

ಅಧ್ಯಾಯ 9

ಮನುಷ್ಯರ ಆಹಾರದಲ್ಲಿ ಮೊಟ್ಟೆಗಳ ಮಹತ್ವ

ಭಾರತ ಕೃಷಿ ಪ್ರಧಾನ ದೇಶ. ನಮ್ಮ ದೇಶದಲ್ಲಿ ಅಧಿಕ ಸಂಖ್ಯೆಯಲ್ಲಿ ವಿವಿಧ ಬಗೆಯ ಜಾನುವಾರುಗಳೂ, ಕೋಳಿಗಳೂ ಇವೆ. ಇಷ್ಟಿದ್ದರೂ ಭಾರತೀಯರಿಗೆ ಇವುಗಳಿಂದ ದೊರೆಯುತ್ತಿರುವ ಪ್ರಾಣಿಜನ್ಯ ಪ್ರೋಟೀನು ತೀರ ಅಲ್ಪ. ಭಾರತೀಯರಲ್ಲಿ ಸಸ್ಯಾಹಾರಿಗಳು ಹೆಚ್ಚು ಸಂಖ್ಯೆಯವರು. ಮಾಂಸಾಹಾರಿಗಳು ಕೆಲವು ಮಂದಿ. ಈ ಮಾಂಸಾಹಾರಿಗಳಿಗೂ ಸಾಕಷ್ಟು ಪ್ರಾಣಿಜನ್ಯ ಪ್ರೋಟೀನು ಆಹಾರದಲ್ಲಿ ಸಿಗುತ್ತಿಲ್ಲ. ಮೊಟ್ಟೆ, ಮಾಂಸಾಹಾರಿಗಳಿಗಷ್ಟೇ ಅಲ್ಲದೆ ಬಹುಮಟ್ಟಿನ ಸಸ್ಯಾಹಾರಿಗಳೂ ಸೇವಿಸುವ ಪ್ರಾಣಿಜನ್ಯ ಆಹಾರ. ಪ್ರಸ್ತುತ. ನಮ್ಮ ದೇಶದಲ್ಲಿ ಒಂದು ವರ್ಷಕ್ಕೆ. ಪ್ರತಿಯೊಬ್ಬನಿಗೆ ಲಭ್ಯವಾಗುತ್ತಿರುವ ಮೊಟ್ಟೆಗಳು ಕೇವಲ ಹನ್ನೆರಡು. ಆದರೆ ಭಾರತೀಯ ಮಾನಕ ಸಂಸ್ಥೆ ಮತ್ತು ಐ. ಸಿ. ಎಂ. ಆರ್. ಜಂಟಿ ಮಂಡಳಿಯು ಸೂಚಿಸಿರುವುದು 180.

ಮೊಟ್ಟೆ ಒಂದು ಪೌಷ್ಟಿಕ ಆಹಾರ. ಒಳ್ಳೆಯ ಪ್ರೋಟೀನುಯುಕ್ತ ಆಹಾರ. ಇದರಲ್ಲಿರುವ ಪ್ರೋಟೀನಿನ ಮಟ್ಟ ಬಹಳ ಉತ್ಕೃಷ್ಟ ಮಟ್ಟದ್ದು. ಆಹಾರ ತಜ್ಞರು ಮೊಟ್ಟೆಯನ್ನೇ ಅಳತೆಗೋಲಾಗಿಟ್ಟುಕೊಂಡು ಇದರ ಆಧಾರದ ಮೇಲೆ ಇತರ ಪ್ರೋಟೀನುಗಳ ಮಟ್ಟವನ್ನು ಅಳೆಯುತ್ತಾರೆ. ಮೊಟ್ಟೆಯಿಂದ ಲಭ್ಯವಾಗುವ ಪೌಷ್ಟಿಕಾಂಶಗಳನ್ನು ಕೋಷ್ಟಕ 3 ಮತ್ತು 4 ರಲ್ಲಿ ಕೊಟ್ಟಿದೆ.

ಮೊಟ್ಟೆಯಲ್ಲಿ ಬಹುಮಟ್ಟಿಗೆ ಸಂಪೂರ್ಣವಾಗಿ ಶರ್ಕರ ಪಿಷ್ಟಾದಿಗಳು ಇಲ್ಲದಿರುವುದರಿಂದ ಮೈಕಟ್ಟು ತೆಳ್ಳಗಾಗಲು ಆಹಾರವಾಗಿ ಬಳಸುತ್ತಾರೆ. ಮೊಟ್ಟೆಯಲ್ಲಿರುವ ಮೇದಸ್ಸು ಸೂಕ್ಷ್ಮ ಕಣಗಳ ರೂಪದಲ್ಲಿ ಹಾಲಿನಂತೆ ಹಳದಿ ಲೋಳೆಯಲ್ಲಿ ಕೇಂದ್ರೀಕೃತವಾಗಿರುತ್ತದೆ. ಆದ್ದರಿಂದ ಇದರ ಜೀರ್ಣವೂ ಬಹಳ ಸುಲಭ.

ಜೀವಸತ್ವ - ಸಿ ಒಂದನ್ನು ಬಿಟ್ಟು ಬಹುಮಟ್ಟಿಗೆ ಎಲ್ಲಾ ಜೀವಸತ್ವಗಳೂ ಇದರಲ್ಲಿ ಸಮೃದ್ಧವಾಗಿರುತ್ತವೆ. ಜೀವಸತ್ವ - 'ಎ' ಒಳ್ಳೆಯ ಕಣ್ಣುದೃಷ್ಟಿಗೆ ಅಗತ್ಯ. ಜೊತೆಗೆ ಎ ಜೀವಸತ್ವವು ದೇಹದೊಳಗಿನ ಲೋಳ್ಪರೆಗಳಿಗೆ ರೋಗನಿರೋಧಕ ಶಕ್ತಿಯನ್ನು ತುಂಬುತ್ತದೆ. ಎ - ಜೀವಸತ್ವವು ಮೊಟ್ಟೆಯಲ್ಲಿ ಸಾಕಷ್ಟು ಪ್ರಮಾಣದಲ್ಲಿರುತ್ತದೆ, ದೇಹದ ಬೆಳವಣಿಗೆಗೆ ಬಿ$_2$- ಜೀವಸತ್ವ ಹಾಗೂ

ಕೋಷ್ಟಕ 3 : ಹಸಿ ಮತ್ತು ಬೇಯಿಸಿದ ಮೊಟ್ಟೆಗಳಲ್ಲಿರುವ ಅಂಶಗಳು (ಮೊಟ್ಟೆಚಿಪ್ಪು ಬಿಟ್ಟು)

ಕ್ರ.ಸಂ.	ಮೊಟ್ಟೆ	ನೀರು (ಶೇಕಡಾ)	ಶಕ್ತಿ (ಗ್ರಾಮ್)	ಪ್ರೋಟೀನು (ಗ್ರಾಮ್)	ಮೇದಸ್ಸು (ಮಿಲಿ ಗ್ರಾಮ್)	ಕ್ಯಾಲ್ಸಿಯಂ (ಮಿಲಿ ಗ್ರಾಮ್)	ರಂಜಕ (ಮಿಲಿ ಗ್ರಾಮ್)	ಕಬ್ಬಿಣ (ಮಿಲಿ ಗ್ರಾಮ್)	ಜೀವಸತ್ವ-ಎ (I.U. ಗಳಲ್ಲಿ)	ಬಿ1 (ಮಿಲಿ ಗ್ರಾಮ್)	ಬಿ2 (ಮಿಲಿ ಗ್ರಾಮ್)
1.	ಹಸಿ	73.7	163	12.9	11.5	54	205	2.3	1180	0.11	0.30
2.	ಹುರಿದ ಮೊಟ್ಟೆ	67.7	216	13.8	17.2	60	222	2.4	1120	0.10	0.30
3.	ಆಮ್ಲೆಟ್	72.1	173	11.2	12.9	80	189	1.7	1080	0.08	0.28
4.	ಸ್ಕ್ರಾಂಬಲ್ಡ್ (ಅರೆಬೇಯಿಸಿ ಕೊಚ್ಚಿದ್ದು)	72.1	173	11.2	12.9	80	189	1.7	1080	0.08	0.28

ಕೋಷ್ಟಕ 4: ಮನುಷ್ಯನ ದೈನಂದಿನ ಆಹಾರದಲ್ಲಿ ಮೊಟ್ಟೆಯ ಪಾತ್ರ

ಕ್ರ. ಸಂ.	ಪೌಷ್ಟಿಕಾಂಶಗಳು	ಒಬ್ಬ ವ್ಯಕ್ತಿಗೆ ಸೂಚಿಸಿರುವ ಪ್ರಮಾಣ	ಎರಡು ಮೊಟ್ಟೆಗಳಿಂದ ದೊರೆಯುವ ಅಗತ್ಯತೆಗಳ ಶೇಕಡಾ
1.	ಶಕ್ತಿ (ಕ್ಯಾಲೊರಿ)	3000.0	6
2.	ಪ್ರೋಟೀನು (ಗ್ರಾಮ್)	70.0	20
3.	ಮೇದಸ್ಸು (ಗ್ರಾಮ್)	50.0	22
4.	ಶರ್ಕರಪಿಷ್ಟ (ಗ್ರಾಮ್)	570.0	–
5.	ಕ್ಯಾಲ್ಸಿಯಂ (ಗ್ರಾಮ್)	0.8	8
6.	ರಂಜಕ (ಗ್ರಾಮ್)	0.9	30
7.	ಕಬ್ಬಿಣ (ಮಿಲಿಗ್ರಾಮ್)	12.0	26
8.	ಅಯೋಡಿನ್ (ಮಿಲಿಗ್ರಾಮ್)	0.1	10
9.	ಜೀವಸತ್ವ - ಎ (I. U)	5000.0	15
10.	ಜೀವಸತ್ವ - ಡಿ (I. U.)	400.0	24
11.	ಜೀವಸತ್ವ - ಸಿ (ಮಿಲಿಗ್ರಾಮ್)	75.0	-
12.	ಜೀವಸತ್ವ - $ಬಿ_1$ (ಮಿಲಿಗ್ರಾಮ್)	1.5	8
13.	ಜೀವಸತ್ವ - $ಬಿ_2$ (ಮಿಲಿಗ್ರಾಮ್)	2.0	17
14.	ನಿಯಸಿನ್ (ಮಿಲಿಗ್ರಾಮ್)	20.0	6

ತಿಂದ ಆಹಾರದಿಂದ ದೊರೆಯುವ ಶಕ್ತಿಯನ್ನು ಬಳಸಿಕೊಳ್ಳಲು ದೇಹಕ್ಕೆ $ಬಿ_2$-ಜೀವಸತ್ವದ ನೆರವು ಅಗತ್ಯ. $ಬಿ_2$ ಜೀವಸತ್ವವೂ ಮೊಟ್ಟೆಯಲ್ಲಿದೆ. 'ಡಿ' -ಜೀವಸತ್ವವು ಮೂಳೆಯ ಕ್ಯಾಲ್ಸೀಕರಣಕ್ಕೆ ಹಾಗೂ ಗಟ್ಟಿಯಾದ ಹಲ್ಲುಗಳ ಬೆಳವಣಿಗೆಗೆ ಅಗತ್ಯ. ಇದೂ ಮೊಟ್ಟೆಯಲ್ಲಿ ಸಾಕಷ್ಟಿರುತ್ತದೆ.

ರಕ್ತ, ಮೂಳೆ ಮತ್ತು ಮೃದು ಊತಕಗಳ ತಯಾರಿಕೆಗೆ ಅಗತ್ಯವಾದ ಖನಿಜಾಂಶಗಳೆಲ್ಲವೂ ಮೊಟ್ಟೆಯಲ್ಲಿರುತ್ತವೆ. ಮೊಟ್ಟೆಯಲ್ಲಿ ಖನಿಜಾಂಶಗಳ ಪೈಕಿ ಕಬ್ಬಿಣಾಂಶವು ಹೆಚ್ಚು ಪ್ರಮಾಣದಲ್ಲಿರುತ್ತದೆ. ಮೊಟ್ಟೆಯ ಹಳದಿ ಲೋಳೆಯಲ್ಲಿರುವ ಕಬ್ಬಿಣಾಂಶವು ಸುಲಭವಾಗಿ ಜೀರ್ಣವಾಗಿ ರಕ್ತಗತವಾಗುತ್ತದೆ ಮತ್ತು ಅದು ಸಂಪೂರ್ಣವಾಗಿ ಹಿಮೋಗ್ಲೋಬಿನ್ ತಯಾರಿಕೆಗೆ ಲಭ್ಯವಾಗುತ್ತದೆ.

ಮೊಟ್ಟೆ ಮತ್ತು ಕೊಲೆಸ್ಟಿರಾಲ್

ಕೊಲೆಸ್ಟಿರಾಲ್ ಎಂಬ ವಸ್ತು 'ಧಮನಿ ಪೆಡಸಣೆ' ಎಂಬ ಸ್ಥಿತಿಯನ್ನು

ಉಂಟುಮಾಡುತ್ತದೆ. ಇದರಿಂದಾಗಿ ರಕ್ತ ಧಮನಿ(ನಾಳ)ಗಳು ಗಟ್ಟಿಯಾಗುತ್ತವೆ. ತತ್ಫಲವಾಗಿ ಕೆಲವರಲ್ಲಿ ಹೃದಯಾಘಾತವುಂಟಾಗುತ್ತದೆ. ಮೊಟ್ಟೆಯಲ್ಲಿ 200 ರಿಂದ 300 ಮಿಲಿಗ್ರಾಮ್‌ಗಳಷ್ಟು ಕೊಲೆಸ್ಟಿರಾಲ್ ಅಂಶವಿರಬಹುದು. ಆದರೆ ಮೊಟ್ಟೆ ಸೇವಿಸುವುದರಿಂದ ರಕ್ತದಲ್ಲಿಯ ಕೊಲೆಸ್ಟಿರಾಲ್ ಏರುವುದಿಲ್ಲ. ಏಕೆಂದರೆ, ಸಾಧಾರಣ ಮನುಷ್ಯನ ದೇಹವೇ ಅದರ ಅಗತ್ಯತೆಗಾಗಿ ದಿನಕ್ಕೆ 2000 ಮಿಲಿಗ್ರಾಮ್‌ಗಳವರೆಗೆ ಕೊಲೆಸ್ಟಿರಾಲನ್ನು ತಯಾರಿಸುತ್ತಲೇ ಇರುತ್ತದೆ. ಶರೀರದ ಜೀವಕೋಶದ ಒಂದು ಘಟಕಾಂಶವಾಗಿ ರಕ್ತ. ನರಕೋಶ, ಮತ್ತು ಶರೀರದ ಇತರ ಅಂಗಾಂಗಗಳಲ್ಲಿ ಇದ್ದೇ ಇರುತ್ತದೆ. ಇದರ ಜೊತೆಗೆ ಮೊಟ್ಟೆಯಲ್ಲಿ ಅತೃಪ್ತ ಕೊಬ್ಬು ಹೆಚ್ಚಿನ ಪ್ರಮಾಣದಲ್ಲಿರುತ್ತದೆ. ಇದು ಒಳ್ಳೆಯದು. ಏಕೆಂದರೆ, ಇತ್ತೀಚಿನ ವೈಜ್ಞಾನಿಕ ಅಧ್ಯಯನಗಳ ಪ್ರಕಾರ ತೃಪ್ತ ಕೊಬ್ಬುಗಳು ರಕ್ತದಲ್ಲಿ ಕೊಲೆಸ್ಟಿರಾಲಿನ ಮಟ್ಟವನ್ನು ಹೆಚ್ಚಿಸುತ್ತವೆ. ಆದರೆ ಅಸಂಪೂರ್ಣ ಕೊಬ್ಬು ರಕ್ತದಲ್ಲಿ ಕೊಲೆಸ್ಟಿರಾಲಿನ ಮಟ್ಟವನ್ನು ಕಡಿಮೆ ಮಾಡುತ್ತದೆ.

ಎಲ್ಲ ವಯಸ್ಸಿನವರಿಗೂ ಮೊಟ್ಟೆ ಒಳ್ಳೆಯ ಆಹಾರ. ಗರ್ಭಿಣಿ ಹೆಂಗಸರಿಗೆ, ಮೊಲೆಯೂಡಿಸುವ ತಾಯಂದಿರಿಗೆ, ಚಿಕ್ಕಮಕ್ಕಳಿಗೆ, ಬೆಳೆಯುವ ಮಕ್ಕಳಿಗೆ ಮತ್ತು ಮುದುಕರಿಗೆ ಇವರಿಗೆಲ್ಲಾ ಇದು ಬಹಳ ಒಳ್ಳೆಯದು. ಏಕೆಂದರೆ, ಇದರಲ್ಲಿ ಪ್ರೋಟೀನು ಮತ್ತು ಖನಿಜಾಂಶಗಳು ಅಧಿಕ ಪ್ರಮಾಣದಲ್ಲಿರುವುದಲ್ಲದೆ ಸುಲಭವಾಗಿ ಜೀರ್ಣವಾಗುತ್ತದೆ.

ಕೆಲವು ಮಂದಿ ಸಸ್ಯಾಹಾರಿಗಳು ಮೊಟ್ಟೆಯನ್ನು ತಿನ್ನುವುದಿಲ್ಲ. ಕಾರಣ, ಅದರಲ್ಲಿ ಜೀವವಿದೆ ಎಂದು ಅವರ ನಂಬಿಕೆ. ಹೇಂಟೆಯು ಹುಂಜನ ಸಂಪರ್ಕದಿಂದ ಇಡುವ ಮೊಟ್ಟೆ ಫಲೀಕೃತ ಮೊಟ್ಟೆಯಾಗಿರುತ್ತದೆ; ಅದರಲ್ಲಿ ಜೀವವಿರುತ್ತದೆ. ಹುಂಜನ ಸಂಪರ್ಕವಿಲ್ಲದೆ ಹೇಂಟೆ ಇಡುವ ಮೊಟ್ಟೆಗಳು ಫಲೀಕೃತ ಮೊಟ್ಟೆಗಳಲ್ಲ. ಅವುಗಳಲ್ಲಿ ಜೀವವಿರುವುದಿಲ್ಲ. ಅವುಗಳಿಂದ ಮರಿಗಳಾಗುವುದಿಲ್ಲ. ಇವನ್ನೇ ಸಸ್ಯಾಹಾರಿ ಮೊಟ್ಟೆಗಳೆಂದು ಕರೆಯುತ್ತಾರೆ.

ಹಸಿ(ಕಚ್ಚಾ) ಮೊಟ್ಟೆಗಳನ್ನು ತಿನ್ನಬಾರದು. ಏಕೆಂದರೆ, ಹಸಿಮೊಟ್ಟೆಗಳಲ್ಲಿ 'ಅವಿಡಿನ್' ಎಂಬ ವಸ್ತುವಿರುತ್ತದೆ. ಇದು ಬಯೋಟಿನ್ ಎಂಬ ವಸ್ತುವಿನೊಡನೆ ಕೂಡಿ ದೇಹಕ್ಕೆ ಬಯೋಟಿನ್ ದೊರೆಯದಂತೆ ಮಾಡುತ್ತದೆ. ಅದೂ ಅಲ್ಲದೆ, ಹಸಿ ಮೊಟ್ಟೆಗಳಲ್ಲಿ ಇನ್ನೂ ಎರಡು 'ಉಡುಗಿಕ' ವಸ್ತುಗಳಿರುತ್ತವೆ; ಓವೊಮ್ಯೂಕಾಯ್ಡ್ ಮತ್ತು ಓವೊ ಇನ್‌ಹಿಬಿಟಾರ್ - ಇವೇ ಆ ಎರಡು ವಸ್ತುಗಳು. ಇವು ಟ್ರಿಪ್ಸಿನ್‌ನ ಕಾರ್ಯವನ್ನು ಉಡುಗಿಸುತ್ತವೆ. ಅಲ್ಲದೆ, ಹಸಿಮೊಟ್ಟೆಯನ್ನು ತಿನ್ನುವುದರಿಂದ ಮೊಟ್ಟೆಯ ಅಲ್ಬುಮಿನ್(ಬಿಳೀ ಭಾಗ) ಜೀರ್ಣನಾಳವನ್ನು ಪ್ರವೇಶಿಸಿ ಉದ್ದಕ್ಕೂ ಲೋಳ್ಪರೆಯ ಮೇಲೆ ಲೇಪನಗೊಳ್ಳುತ್ತದೆ. ಇದರಿಂದ

ಆಹಾರ ಜೀರ್ಣವಾಗುವುದಕ್ಕೂ ರಕ್ತಗತವಾಗುವುದಕ್ಕೂ ಅಡ್ಡಿಯಾಗುತ್ತದೆ. ಪುನಃ ಕಿಣ್ವಗಳ ಕ್ರಿಯೆಯಿಂದ ಪ್ರಕ್ಷೇಪಗೊಂಡಾಗಲೇ ಅದಕ್ಕೆ ಮುಕ್ತಿ. ಮೊಟ್ಟೆಯನ್ನು ಬೇಯಿಸುವುದರಿಂದ ಆಲ್ಬ್ಯುಮಿನ್ ಪ್ರಕ್ಷೇಪಗೊಂಡು ಸುಲಭವಾಗಿ ಜೀರ್ಣವಾಗುತ್ತದೆ.

ಕೋಷ್ಟಕ 5. ಮನುಷ್ಯನಿಗೆ ಬೇಕಾಗಿರುವ ಅಮೈನೋ ಆಮ್ಲಗಳ ಕನಿಷ್ಠ ಪ್ರಮಾಣ ಮತ್ತು ಎರಡು ಮೊಟ್ಟೆಗಳಿಂದ ಲಭ್ಯವಾಗುವ ಅಮೈನೋ ಆಮ್ಲಗಳ ಪ್ರಮಾಣ

ಅಮೈನೋ ಆಮ್ಲ	ಅಗತ್ಯತೆ	ಎರಡು ಮೊಟ್ಟೆಗಳಲ್ಲಿ ಪ್ರಮಾಣ (ಮಿಲಿಗ್ರಾಮ್)	ಎರಡು ಮೊಟ್ಟೆಗಳಿಂದ ದೊರೆಯುವ ಅವುಗಳ ಶೇಕಡಾ
ಆರ್ಜಿನೀನ್	-	756	-
ಹಿಸ್ಟಿಡೀನ್	-	260	-
ಥ್ರಿಯೋನೀನ್	500	605	121
ವ್ಯಾಲೀನ್	800	853	107
ಲ್ಯೂಸೀನ್	1100	1096	99
ಐಸೋಲ್ಯೂಸೀನ್	700	756	108
ಲೈಸೀನ್	800	745	93
ಮೆಥಿಯೋನೈನ್	1100	390	35
ಫೀನೈಲ್ ಅಲನೀನ್	1100	690	63
ಟ್ರಿಪ್ಟೋಫೇನ್	250	140	56

ಮೊಟ್ಟೆಯ ರಚನೆ

ಮೊಟ್ಟೆಯ ಮುಖ್ಯಭಾಗಗಳು

1) ಜೀವಾಂಕುರ ಕೇಂದ್ರ
2) ಹಳದಿ ಲೋಳೆ
3) ಮೊಟ್ಟೆಯ ಬಿಳಿಯ ಲೋಳೆ (ಆಲ್ಬ್ಯುಮಿನ್)
4) ಚಿಪ್ಪಿನ ಪೊರೆ
5) ಚಿಪ್ಪು

1. **ಜೀವಾಂಕುರ ಕೇಂದ್ರ:** ಜೀವಾಂಕುರ ಕೇಂದ್ರವು ಮೊಟ್ಟೆ ಹಳದಿ ಲೋಳೆಯ ಮೇಲ್ಭಾಗದಲ್ಲಿ ಒಂದು ಸಣ್ಣ ಬಿಳಿಯ ಚುಕ್ಕೆಯಾಗಿ ಗೋಚರವಾಗುತ್ತದೆ. ಇದನ್ನೇ ಅಫಲೀಕೃತ ಮೊಟ್ಟೆಗಳಲ್ಲಿ 'ಜೀವಾಂಕುರ ಬಿಲ್ಲೆ' ಅಥವಾ 'ಎಳೆಕಣಗುಳಿ' ಎಂದು

ಕರೆಯುತ್ತಾರೆ. ಫಲೀಕೃತ ಮೊಟ್ಟೆಗಳಲ್ಲಾದರೆ 'ನಸೆ(ಎಳೆ)ಜರ್ಮ್' ಎಂದು ಕರೆಯುತ್ತಾರೆ. ನಸೆಜರ್ಮ್‌ದಿಂದ ಭ್ರೂಣ ಹುಟ್ಟುತ್ತದೆ. ಅದೇ ಮುಂದೆ ಮರಿಯಾಗಿ ಬೆಳೆಯುತ್ತದೆ.

2. ಹಳದಿ ಲೋಳೆ : ಹಳದಿ ಲೋಳೆ ಅಥವಾ ಅಂಡಾಣು ಮೊಟ್ಟೆಯೊಳಗೆ ಮಧ್ಯದಲ್ಲಿರುತ್ತದೆ. ಅದನ್ನು ಪಾರದರ್ಶಕ ಪರೆಯು ಆವರಿಸಿರುತ್ತದೆ. ಅದನ್ನೇ ಬಂಡಾರ ಪರೆ ಎಂದು ಕರೆಯುತ್ತಾರೆ. ಈ ಬಂಡಾರವು ಸ್ತ್ರೀ ಬೀಜಕೋಶ ಮತ್ತು ಆಹಾರ ಪದಾರ್ಥಗಳ ಸಂಪದ್ಭರಿತ ಉಗ್ರಾಣ.

3. ಮೊಟ್ಟೆಯ ಬಿಳಿಯ ಲೋಳೆ (ಆಲ್ಬ್ಯುಮಿನ್): ಮೊಟ್ಟೆ ಬಿಳಿಯಲ್ಲಿ ನಾಲ್ಕು ಪದರಗಳಿರುತ್ತವೆ. ಬಿಳಿಯ ಲೋಳೆಯ ಕಾರ್ಯಗಳು ಎರಡು. ಒಂದು ಆಘಾತ ಹೀರುಕವಾಗಿ ವರ್ತಿಸಿ ಭ್ರೂಣ ಮತ್ತು ಬಂಡಾರವನ್ನು ರಕ್ಷಿಸುವುದು ಮತ್ತು ಭ್ರೂಣಕ್ಕೆ ಆಹಾರದ ಮೂಲವಾಗಿ ವರ್ತಿಸುವಿಕೆ.

4. ಚಿಪ್ಪಿನ ಪೊರೆ : ಇದರಲ್ಲಿ ಎರಡು ತೆಳುವಾದ ಪದರಗಳಿರುತ್ತವೆ. ಒಂದು ಮೊಟ್ಟೆಯ ಬಿಳಿಯ ಲೋಳೆಗೆ ಅಂಟಿಕೊಂಡಂತೆ ಸುತ್ತುವರಿದಿರುವ ಒಳಪೊರೆ. ಮತ್ತೊಂದು ಮೊಟ್ಟೆ ಚಿಪ್ಪಿನ ಒಳಭಾಗಕ್ಕೆ ಸುತ್ತುವರಿದಿರುವ ಹೊರಪೊರೆ.

5. ಚಿಪ್ಪು : ಮೊಟ್ಟೆ ಚಿಪ್ಪು ಮೊಟ್ಟೆಯೊಳಗಿನ ವಸ್ತುಗಳನ್ನು ಮುಚ್ಚಿರುತ್ತದೆ. ಇದು ಕ್ಯಾಲ್ಸಿಯಂ ಕಾರ್ಬೊನೇಟಿನಿಂದ ರೂಪುಗೊಂಡಿರುತ್ತದೆ. ಇದು ಶೇಕಡಾ 93-98ರಷ್ಟಿರುತ್ತದೆ. ಅನೇಕ ಸಣ್ಣ ಸಣ್ಣ ರಂಧ್ರಗಳಿಂದ ಕೂಡಿರುತ್ತದೆ: ಇವು ಸುಮಾರು 800ರವರೆಗೆ ಇರುತ್ತವೆ. ಇವುಗಳ ಮೂಲಕ ಅನಿಲಗಳ ವಿನಿಮಯ ಸಾಗುತ್ತದೆ. ಆಗತಾನೇ ಇಟ್ಟ ಮೊಟ್ಟೆಯ ಚಿಪ್ಪಿನ ಮೇಲೆ ಲೋಳೆಯು ಲೇಪನಗೊಂಡಿರುತ್ತದೆ. ಇದು ಕೂಡಲೇ ಒಣಗಿ, ಚಿಕ್ಕ ಪೊರೆಯಂತಾಗಿ, ಚಿಪ್ಪನ್ನು ಮುಚ್ಚಿರುತ್ತದೆ.

ಮೊಟ್ಟೆಯ ಘಟಕಾಂಶಗಳು

ಮೊಟ್ಟೆಯ ವಿವಿಧ ಭಾಗಗಳಲ್ಲಿರುವ ರಾಸಾಯನಿಕ ಘಟಕಾಂಶಗಳನ್ನು ಕೋಷ್ಟಕ 6ರಲ್ಲಿ ಕೊಟ್ಟಿದೆ.

ಮೊಟ್ಟೆ ಮತ್ತು ಅದರ ಉತ್ಪನ್ನಗಳ ಉಪಯೋಗಗಳು

ಮೊಟ್ಟೆ ಮತ್ತು ಮೊಟ್ಟೆಯ ಉತ್ಪನ್ನಗಳನ್ನು ಬೇರೆ ಬೇರೆ ಉದ್ದೇಶಗಳಿಗೆ ಬಳಸಲಾಗುತ್ತದೆ. ಹಾಗೆ ವಿವಿಧ ಉದ್ದೇಶಗಳಿಗೆ ಬಳಕೆಯಾಗುವ ಮೊಟ್ಟೆಗಳ ಪ್ರಮಾಣ ಈ ಮುಂದಿನಂತಿರುತ್ತದೆ :

ಕೋಷ್ಟಕ 6 : ಮೊಟ್ಟೆಯ ವಿವಿಧ ಭಾಗಗಳಲ್ಲಿರುವ ರಾಸಾಯನಿಕ ಘಟಕಗಳು

ಮೊಟ್ಟೆ ಭಾಗಗಳು	ಶೇಕಡಾವಾರು	ನೀರು	ಪ್ರೋಟೀನು	ಮೇದಸ್ಸು	ಖನಿಜಾಂಶ
ಮೊಟ್ಟೆ (ಪೂರ್ಣ)	100	66	12	11	11
ಬಿಳಿಯ ಲೋಳೆ ಭಾಗ	58	88	11	0.2	0.8
ಹಳದಿ ಭಾಗ	31	38	17.5	32.5	2.0
ಚಿಪ್ಪು	11	-	-	-	100

1) ಮೊಟ್ಟೆಗಳನ್ನು ಹಾಗೆಯೇ ತಿನ್ನಲು ಶೇಕಡಾ 70
2) ಘನೀಕರಿಸಿ, ಪುಡಿಮಾಡಿ, ಶೇಖರಿಸಿಡಲು ಶೇಕಡಾ 5
3) ಮರಿಮಾಡಲು ಶೇಕಡಾ 20
4) ಇತರ ಉಪಯೋಗಗಳಲ್ಲಿ ಶೇಕಡಾ 5
(ಕೈಗಾರಿಕೋದ್ಯಮಗಳಲ್ಲಿ ಸೇರಿದಂತೆ)

ಕೈಗಾರಿಕೋದ್ಯಮಗಳಲ್ಲಿ

ವೈದ್ಯಕೀಯ ಕ್ಷೇತ್ರದಲ್ಲಿ

1) ಔಷಧ ರೂಪ ಅಥವಾ ತಯಾರಿಕೆ
2) ಏಕಾಣುಜೀವಿ ಮತ್ತು ವಿಷಾಣುಜೀವಿಗಳ ಅಧ್ಯಯನ
3) ಊತಕ ರಚನಾ ಶಾಸ್ತ್ರದ ಅಧ್ಯಯನ
4) ಕೃತಕ ಗರ್ಭಧಾರಣಾ ಕಾರ್ಯ

ಆಹಾರ ತಯಾರಿಕೋದ್ಯಮದಲ್ಲಿ

1) ಬೇಕರಿ ಪದಾರ್ಥಗಳ ತಯಾರಿಕೆ
2) ಮ್ಯಾಕರೋನಿ(ಬಿಸ್ಕತು) ಮತ್ತು ನೂಡಲ್ ತಯಾರಿಕೆ
3) ಐಸ್‌ಕ್ರೀಂ, ಕಡುಬು, ಪಾಯಸ (ಮೊಟ್ಟೆಯ ಲೋಳೆಯನ್ನು ಹಾಲಿನೊಡನೆ ಕಡೆದು ಸಿಹಿ ಸೇರಿಸಿ ಬೇಯಿಸಿ ಮಾಡಿದ ಭಕ್ಷ್ಯ ಮುಂತಾದವುಗಳ ತಯಾರಿಕೆ)
4) ತಯಾರಿಸಿದ ಪದಾರ್ಥಗಳಲ್ಲಿ ಬೆರೆಸುವ ಬೆರಕೆ ವಸ್ತುವಾಗಿ
5) ಪ್ರಾಣಿ ಆಹಾರ ತಯಾರಿಕೆಯಲ್ಲಿ
6) ಇತರೆ

ಆಹಾರೇತರ ವಸ್ತು ತಯಾರಿಕೋದ್ಯಮದಲ್ಲಿ

1) ಹದಚರ್ಮ ತಯಾರಿಕೆ
2) ಬಣ್ಣಗಳ ತಯಾರಿಕೆ
3) ಫೋಟೋಗ್ರಫಿ ಮತ್ತು ಪ್ರಿಂಟಿಂಗ್
4) ಕಾಂತಿವರ್ಧಕ(ಅಂಗರಾಗ)ಗಳ ತಯಾರಿಕೆ
5) ಸಂಯೋಜನಾ ವಸ್ತುಗಳ ತಯಾರಿಕೆ
6) ಗೊಬ್ಬರಗಳ ತಯಾರಿಕೆ

ಮೊಟ್ಟೆ ಕೇಕ್‌ಗಳು

ಮೊಟ್ಟೆಗಳಿಂದ ಕೇಕ್‌ಗಳನ್ನು ತಯಾರಿಸುತ್ತಾರೆ. ಇವುಗಳಲ್ಲಿ ಮುಖ್ಯವಾಗಿ ಮೂರು ವಿಧಗಳು. ಏಂಜಲ್‌ಕೇಕ್‌ಗಳು, ಗೋಲ್ಡ್ ಕೇಕ್ ಮತ್ತು ಪೌಂಡ್ ಕೇಕ್.

ಮೊಟ್ಟೆಕೇಕ್‌ಗಳು	ಬಿಳಿಯ ಲೋಳೆ	ಹಳದಿ	ಪೂರ್ಣಮೊಟ್ಟೆ
ಏಂಜಲ್ ಕೇಕ್	ಶೇಕಡಾ 41.3	—	—
ಗೋಲ್ಡ್ ಕೇಕ್	—	ಶೇಕಡಾ17.7	—
ಪೌಂಡ್‌ಕೇಕ್	—	—	ಶೇಕಡಾ24.8

ಅಧ್ಯಾಯ 10

ಕೋಳಿಗಳ ರೋಗಗಳು ಹಾಗೂ ಅವುಗಳ ನಿಯಂತ್ರಣ

ಕೋಳಿಗಳಿಗೆ ಬರುವ ರೋಗಗಳು ಹಲವು. ಇವು ಕೋಳಿ ಸಾಕಣೆಯ ಅಭಿವೃದ್ಧಿಗೊಂದು ಬಲವಾದ ಪೆಟ್ಟು. ಕೋಳಿಸಾಕಣೆಗಾರರ ಲಾಭಕ್ಕೆ ಒಂದು ಮುಗ್ಗಟ್ಟು. ಅಧಿಕ ಉತ್ಪಾದನೆಯೇ ಮುಖ್ಯ ಉದ್ದೇಶವಾದ ಇಂದಿನ ಆಧುನಿಕ ಕೋಳಿಸಾಕಣೆಯಲ್ಲಿ ಇದು ಹೆಚ್ಚು ಗಮನಾರ್ಹ. ನಮ್ಮ ದೇಶದಲ್ಲಿ ಪ್ರತಿವರ್ಷ ಶೇಕಡಾ 50ರಷ್ಟು ಕೋಳಿಗಳು ವಿವಿಧ ರೋಗಗಳಿಂದ ಹಾಗೂ ಇತರ ಕಾರಣಗಳಿಂದ ಸಾಯುತ್ತವೆ ಎಂದು ಅಂದಾಜುಮಾಡಲಾಗಿದೆ. ಕೋಳಿ ಸಾಕಣೆಯಲ್ಲಿ ಉಂಟಾದ ನಷ್ಟಗಳಿಂದಾಗಿ, ಕೆಲವರು ಈ ಉದ್ಯಮಕ್ಕೆ ಕೈಹಾಕಿದರೂ ಬೇಸರ ಹೊಂದಿ, ಮಧ್ಯದಲ್ಲಿಯೇ ಕೈಬಿಟ್ಟಿರುವುದುಂಟು. ಕೋಳಿ ಸಾಕಣೆಯ ರೀತಿ, ನಿಯಮ, ಕೋಳಿಗಳಿಗೆ ಬರುವ ರೋಗಗಳು ಹಾಗೂ ಅವುಗಳನ್ನು ತಡೆಗಟ್ಟುವ ವಿಧಾನ, ಈ ವಿಷಯಗಳ ಬಗ್ಗೆ ಅವರಿಗೆ ಸರಿಯಾದ ಜ್ಞಾನ ಇಲ್ಲದಿರುವುದೇ ಮುಖ್ಯ ಕಾರಣ.

ಹಲವಾರು ಅಂಶಗಳು ಹಾಗೂ ಮಾಧ್ಯಮಗಳು ರೋಗಗಳ ಹರಡಿಕೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಸೋಂಕು ಕಲುಷಿತ ಮಣ್ಣು, ಗಾಳಿ, ಮೇವು, ನೀರು, ರೋಗಪ್ರಸಾರಕ್ಕೆ ನೆರವಾಗುತ್ತವೆ. ಕೋಳಿಯಿಂದ ಕೋಳಿಗೆ ನೇರವಾಗಿಯೂ ರೋಗಪ್ರಸಾರವಾಗುತ್ತದೆ. ಹೀಗೆ ಒಂದು ಕೋಳಿ ಮನೆಗೆ ರೋಗ ಪ್ರವೇಶಿಸಲು ಹಾಗೂ ಕೋಳಿಗಳಲ್ಲಿ ರೋಗ ಮುಂದುವರಿಯಲು ಹಲವಾರು ಮಾರ್ಗಗಳು. ಹೀಗಾಗಿ ಕೋಳಿಗಳಲ್ಲಿ ಆರೋಗ್ಯವನ್ನು ಕಾಪಾಡಲು ಅತಿ ಉತ್ತಮ ಮಟ್ಟದ ನಿರ್ವಹಣಾ ವಿಧಾನಗಳು, ನೈರ್ಮಲತೆ ಮತ್ತು ರೋಗನಿಯಂತ್ರಣಾ ಕ್ರಮಗಳನ್ನು ಅನುಸರಿಸಬೇಕು.

ರೋಗದಿಂದ ನರಳುತ್ತಿರುವ ಕೋಳಿಯ ಚಿಕಿತ್ಸೆ ಹೆಚ್ಚು ವೆಚ್ಚದಾಯಕ. ಕಾರಣ ಔಷಧಗಳ ಬೆಲೆ ಹೆಚ್ಚು. ಗುಂಪಿನಲ್ಲಿ ರೋಗ ತಲೆದೋರಿದಮೇಲೆ ಚಿಕಿತ್ಸೆಗೆ ಕೈಹಾಕಿದರೂ ಕೋಳಿಗಳನ್ನು ಉಳಿಸಿಕೊಳ್ಳುವುದು ಕಷ್ಟ. ಒಂದೇ ಕೋಳಿಯ ಚಿಕಿತ್ಸೆಯೂ ಕೂಡಾ ಆಗದ ಮಾತು. ಕೋಳಿಗಳು ಬಹಳಷ್ಟು ಸಾಯುತ್ತವೆ. ಅಲ್ಲದೆ, ಬೇರ್ಪಡಿಸಿದ ರೋಗಗ್ರಸ್ತ ಕೋಳಿಗಳಿಂದ ನಷ್ಟ ಬೇರೆ: ಕೋಳಿಗಳ ಬೆಳವಣಿಗೆ ಕುಗ್ಗುತ್ತದೆ: ಮೊಟ್ಟೆ ಉತ್ಪಾದನೆ ಇಳಿಯುತ್ತದೆ. ಆದ್ದರಿಂದ, ರೋಗಗ್ರಸ್ತ ಕೋಳಿಗಳ ಚಿಕಿತ್ಸೆಗಿಂತಲೂ ಕೋಳಿಗಳಿಗೆ ರೋಗಗಳು ಬಾರದಂತೆ ಮುಂಜಾಗ್ರತೆ ವಹಿಸುವುದೇ ಉತ್ತಮೋಪಾಯ.

ಕೋಳಿಗಳಿಗೆ ಬರುವ ರೋಗಗಳನ್ನು ಮುಖ್ಯವಾಗಿ ಈ ಕೆಳಗಿನ ಮೂರು ವಿಭಾಗಗಳಲ್ಲಿ ವಿಂಗಡಿಸಬಹುದು:

1) ಸೋಂಕು ರೋಗಗಳು
2) ಪರಾವಲಂಬಿಜೀವಿ ರೋಗಗಳು
3) ಪೌಷ್ಟಿಕಾಂಶಗಳ ಕೊರತೆಯಿಂದ ಬರುವ ರೋಗಗಳು


ಸೋಂಕು ರೋಗಗಳು

ಕೋಳಿಗಳಿಗೆ ಬರುವ ಸೋಂಕು ರೋಗಗಳು ಹಲವಾರು. ಇವಕ್ಕೆ ಬಗೆಬಗೆಯ ರೋಗಾಣುಗಳು ಕಾರಣ. ಈ ರೋಗಗಳಲ್ಲಿ ಕೆಲವು ಅತಿ ಸಾಂಕ್ರಾಮಿಕವೂ ಹೌದು. ಇವು ಮೇವು, ನೀರು, ಗಾಳಿ ಮುಂತಾದುವುಗಳ ಮೂಲಕ ಕೋಳಿಯಿಂದ ಕೋಳಿಗೆ ಮತ್ತು ಒಂದು ಕೋಳಿಮನೆಯಿಂದ ಮತ್ತೊಂದು ಕೋಳಿಮನೆಗೆ ಹರಡಿ ಕೋಳಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸಾಯುವ ಸಂಭವವಿರುತ್ತದೆ. ಸೋಂಕು ರೋಗದ ಕೋಳಿಗಳ ಚಿಕಿತ್ಸೆ ನಿಷ್ಪ್ರಯೋಜಕ, ನಷ್ಟದಾಯಕ. ಆದ್ದರಿಂದ 'ಚಿಕಿತ್ಸೆಗಿಂತ ಮುಂಜಾಗ್ರತೆಯೇ ಮೇಲು' ಎನ್ನುವಂತೆ ಕೋಳಿಗಳಿಗೆ ಸೋಂಕು ರೋಗಗಳು ಬಾರದಂತೆ ಮುಂಜಾಗ್ರತೆ ವಹಿಸುವುದೊಂದೇ ಉಳಿದಿರುವ ಉತ್ತಮ ಮಾರ್ಗ. ಸೋಂಕು ರೋಗಗಳು ಬಗೆ ಬಗೆಯ ವಿಷಾಣುಗಳು, ಏಕಾಣು ಜೀವಿಗಳು ಮತ್ತು ಶಿಲೀಂಧ್ರಗಳಿಂದ ಬರುತ್ತವೆ. ಕೊಕ್ಕರೆ ರೋಗ, ಮ್ಯಾರಕ್ಸ್ ರೋಗ, ದಪ್ಪ ಕಾಲಿರೋಗ, ಕೋಳಿಸಿಡುಬು, ಶ್ವಾಸನಾಳ ಸೋಂಕು, ಧ್ವನಿನಾಳ ಸೋಂಕು ಇವೇ ಮುಂತಾದುವು ವಿಷಾಣುಗಳಿಂದ ಬರುವ ರೋಗಗಳು. ಪುಲ್ಲೋರಂ ರೋಗ, ಕೋಳಿ ಕಾಲರಾ, ರಕ್ತನಂಜು ಮತ್ತು ಭೇದಿ ಸೋಂಕು ಇವೇ ಮುಂತಾದುವು ಏಕಾಣುಜೀವಿಗಳಿಂದ ಬರುವ ರೋಗಗಳು.

ಕೊಕ್ಕರೆ ರೋಗ

ಕೋಳಿಗಳ ಕೊಕ್ಕರೆ ರೋಗ ಸಾಮಾನ್ಯವಾಗಿ ಎಲ್ಲ ಕೋಳಿ ಸಾಕಣೆಗಾರರಿಗೂ ಚಿರಪರಿಚಿತ. ಇದನ್ನು ನ್ಯೂಕ್ಯಾಸಲ್ ರೋಗ, ರಾಣಿಕೇತ್ ರೋಗ ಎಂತಲೂ ಕರೆಯುತ್ತಾರೆ. ಇದು ಅತಿ ಸೂಕ್ಷ್ಮ ವಿಷಾಣುಗಳಿಂದ ಬರುವ ಒಂದು ಅತಿ ಸಾಂಕ್ರಾಮಿಕ ಸೋಂಕು ರೋಗ. ರೋಗದ ಕೋಳಿಗಳ ಮೂಗಿನಿಂದ ಸುರಿಯುತ್ತಿರುವ ನೀರಿನಲ್ಲಿ ವಿಷಾಣುಗಳು ತುಂಬಿಕೊಂಡಿರುತ್ತವೆ. ವಿಷಾಣುಗಳಿಂದ ಕಲುಷಿತವಾದ ನೀರು, ಮೇವು ಮುಂತಾದುವುಗಳ ಮೂಲಕ ಈ ರೋಗವು ಕೋಳಿಯಿಂದ ಕೋಳಿಗೆ ಹರಡುತ್ತದೆ. ದೊಡ್ಡ ಕೋಳಿಗಿಂತಲೂ ಮರಿಗಳಲ್ಲಿ ಸಾವು ಹೆಚ್ಚು. ಮರಿಗಳು ಸುಮಾರು ನೂರಕ್ಕೆ ತೊಂಬತ್ತರಷ್ಟು ಸಾಯುತ್ತವೆ.

ರೋಗದ ಚಿಹ್ನೆಗಳು: ಕೋಳಿಗಳು ಚಟುವಟಿಕೆಯಾಗಿರುವುದಿಲ್ಲ. ಅವು ಒಂದು ಮೂಲೆಯಲ್ಲಿ ರೆಕ್ಕೆ ಮುದುರಿಕೊಂಡು, ಗುಂಪುಗುಂಪಾಗಿ ತೂಕಡಿಸುತ್ತಾ ಕುಳಿತಿರುತ್ತವೆ. ಭೇದಿ ಹಸುರು, ಉಸಿರಾಟ ಕಷ್ಟ, ಉಸಿರಾಡುವಾಗ ಕೊರ್ ಕೊರ್ ಶಬ್ದ ಬೇರೆ.



ಮಾದರಿ ಕೋಳಿ ಮನೆ



ಪಂಜರದ ಕೋಳಿ ಮನೆ



ಮರಿ ಸಾಕಾಣಿಕೆ

ಸೀನುವುದು ಸಾಮಾನ್ಯ. ಪಾರ್ಶ್ವವಾಯುವಿನಿಂದ ಅವುಗಳ ತಲೆ ಜೋತು ಬಿದ್ದಿರುತ್ತದೆ. ರೆಕ್ಕೆಗಳೂ ಕಾಲುಗಳೂ ಸ್ವಾಧೀನವಿರುವುದಿಲ್ಲ. ಕ್ರಮೇಣ ಒಂದೊಂದಾಗಿ ಸಾಯುತ್ತವೆ. ಇವು ಸಾಮಾನ್ಯವಾಗಿ ಮರಿಗಳಲ್ಲಿ ಕಂಡುಬರುವ ರೋಗಲಕ್ಷಣಗಳು. ದೊಡ್ಡ ಕೋಳಿಗಳಲ್ಲಿ ಅವು ಅನೇಕವೇಳೆ ಆರೋಗ್ಯದಿಂದಿರುವಂತೆಯೇ ಕಂಡುಬರುತ್ತವೆ: ಅಷ್ಟೊಂದು ಸಾವಿರುವುದಿಲ್ಲ. ಮೊಟ್ಟೆಯಿಡುವ ಕೋಳಿಗಳಲ್ಲಿ ಮೊಟ್ಟೆ ಉತ್ಪಾದನೆ ಕಡಮೆಯಾಗುತ್ತದೆ. ಮೊಟ್ಟೆಚಿಪ್ಪಿನ ಮಟ್ಟವೂ ಕನಿಷ್ಠ ದರ್ಜೆಯದಾಗಿರುತ್ತದೆ.

ನಿಯಂತ್ರಣ : ಕೊಕ್ಕರೆ ರೋಗಕ್ಕೆ ಯಾವ ಚಿಕಿತ್ಸೆಯೂ ಇಲ್ಲ. ಔಷಧವೂ ಇಲ್ಲ. ಕೋಳಿಗಳಿಗೆ ಕೊಕ್ಕರೆ ರೋಗ ಬಾರದಂತೆ ಮುಂಜಾಗ್ರತೆಗಾಗಿ ಲಸಿಕೆ (ವ್ಯಾಕ್ಸಿನೇಷನ್) ಹಾಕಿಸಬೇಕು. ಕೊಕ್ಕರೆ ರೋಗದ ಲಸಿಕೆಯಲ್ಲಿ ಎರಡು ಬಗೆಗಳಿವೆ. ಒಂದು ಮರಿಗಳ ಲಸಿಕೆ. ಮತ್ತೊಂದು ದೊಡ್ಡ ಕೋಳಿಗಳ ಲಸಿಕೆ. ಮರಿಗಳಿಗೆ ಹಾಕುವ ಲಸಿಕೆಯ ಹೆಸರು 'ಎಫ್'(F) ವ್ಯಾಕ್ಸೀನು. ಇದನ್ನು 4–10 ದಿನಗಳ ವಯಸ್ಸಿನ ಮರಿಗಳಿಗೆ ಹಾಕಲಾಗುತ್ತದೆ. ಒಂದು ಆಂಪ್ಯೂಲ್(ಗಾಜುನಳಿ) ಔಷಧಿಯನ್ನು 10–15 ಮಿಲಿ ಲೀಟರ್ ಬಟ್ಟಿಯಿಳಿಸಿದ ನೀರಿನಲ್ಲಿ ಕರಗಿಸಿ, ಒಂದೊಂದು ತೊಟ್ಟು ಕಣ್ಣು ಮತ್ತುಮೂಗಿನ ಹೊಳ್ಳೆಯೊಳಕ್ಕೆ ಬಿಡಬೇಕು. ಕೊಕ್ಕರೆ ರೋಗದ ಲಸಿಕೆ ಔಷಧ ತುಂಬಿಸಿ ಸಿದ್ಧಪಡಿಸಿದ ಗಾಜುನಳಿ ಬೆಂಗಳೂರಿನಲ್ಲಿರುವ ಪ್ರಾಣಿ ಆರೋಗ್ಯ ಮತ್ತು ಪಶುವೈದ್ಯಕೀಯ ಜೈವಿಕ ವಸ್ತು ತಯಾರಿಕಾ ಕೇಂದ್ರದಲ್ಲಿ ದೊರೆಯುತ್ತದೆ.

ಎರಡನೆಯ ಬಗೆಯ ಲಸಿಕೆಯನ್ನು 8–9 ವಾರ ವಯಸ್ಸಿನ ಕೋಳಿಗಳಿಗೆ ಹಾಕಬೇಕು. ಇದರ ಹೆಸರು ಆರ್$_2$ಬಿ (R_2 ವ್ಯಾಕ್ಸೀನು. ಒಂದು ಗಾಜುನಳಿ ಔಷಧವನ್ನು 100 ಮಿಲಿಲೀಟರು ಬಟ್ಟಿಯಿಳಿಸಿದ ನೀರಿನಲ್ಲಿ ಕರಗಿಸಿ ಪ್ರತಿ ಕೋಳಿಗೂ ತಳಚರ್ಮದ ಮೂಲಕ ಕೊಡಬೇಕು.

ಮ್ಯಾರೆಕ್ಸ್ ರೋಗ

ಇದು ವಿಷಾಣುಗಳಿಂದ ಬರುವ, ಕೋಳಿಗಳ ಒಂದು ಅತಿ ಸಾಂಕ್ರಾಮಿಕ ಸೋಂಕು ರೋಗ. ಕೋಳಿಯಿಂದ ಕೋಳಿಗೆ ಅತಿ ಶೀಘ್ರವಾಗಿ ಹರಡುತ್ತದೆ. ವಿಷಾಣುಗಳಿಂದ ಕಲುಷಿತವಾದ ನೀರು, ಗಾಳಿ, ಮೇವು, ಲಿಟ್ಟರು, ಪಾತ್ರೆ, ಸಾಮಗ್ರಿಗಳು ಇವೇ ಮುಂತಾದುವು ರೋಗವನ್ನು ಹರಡುವ ಮಾಧ್ಯಮಗಳು. ಈ ರೋಗವು ಮರಿಗಳಲ್ಲೂ, ಎಳೆಯ ವಯಸ್ಸಿನ ಕೋಳಿಗಳಲ್ಲೂ ಹೆಚ್ಚು. 6–24 ವಾರಗಳ ಕೋಳಿಗಳಲ್ಲಿ ಇದು ವಿಪರೀತ.

ರೋಗದ ಚಿಹ್ನೆಗಳು: ನರಗಳ ದೌರ್ಬಲ್ಯ, ಪಾರ್ಶ್ವವಾಯು ಇವು ಮ್ಯಾರೆಕ್ಸ್ ರೋಗದ ಕೋಳಿಗಳಲ್ಲಿ ಕಂಡುಬರುವ ಮುಖ್ಯ ಲಕ್ಷಣಗಳು : ಎರಡು ಕಾಲುಗಳೂ

ಸ್ವಾಧೀನವಿಲ್ಲದೆ ಕೋಳಿಗಳು ಒಂದು ಕಾಲು ಹಿಂದಕ್ಕೂ, ಮತ್ತೊಂದು ಕಾಲು ಮುಂದಕ್ಕೂ ಚಾಚಿ ಕುಳಿತಿರುತ್ತವೆ. ನಡೆಯಲಾಗುವುದಿಲ್ಲ. ಗರಿಗಳು ಉದುರ ತೊಡಗುತ್ತವೆ. ಕಣ್ಣಿಗೂ ರೋಗ ಬಂದು ಕಣ್ಣು ಬೂದುಬಣ್ಣಕ್ಕೆ ತಿರುಗುತ್ತದೆ. ಇದನ್ನೇ ಬೂದು ಕಣ್ಣು, ಮುತ್ತಿನ ಕಣ್ಣು ಎಂತಲೂ ಕರೆಯುವುದುಂಟು. ಸತ್ತ ಕೋಳಿಗಳನ್ನು ಕೊಯ್ದು ಪರೀಕ್ಷಿಸಿದಾಗ ತೊಡೆ ಹಾಗೂ ರೆಕ್ಕೆಗಳ ಭಾಗದಲ್ಲಿರುವ ನರಗಳು ದಪ್ಪಗಿದ್ದು ತಮ್ಮ ಮಾಮೂಲು ಸ್ಥಿತಿ ಹಾಗೂ ಬಣ್ಣವನ್ನು ಕಳೆದುಕೊಂಡಿರುತ್ತವೆ.

ಮುಂಜಾಗ್ರತಾ ಕ್ರಮಗಳು : ಈ ರೋಗದ ಚಿಕಿತ್ಸೆಗೆ ಯಾವ ಔಷಧವೂ ಇಲ್ಲ. ಆದ್ದರಿಂದ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸುವುದು ಅವಶ್ಯಕ. ಅನುವಂಶಿಕವಾಗಿ ರೋಗ ನಿರೋಧಕ ಶಕ್ತಿಯುಳ್ಳ ಕೋಳಿಗಳನ್ನೇ ಆಯ್ಕೆಮಾಡಿಕೊಳ್ಳಬೇಕು. ನೈರ್ಮಲ್ಯತೆ ಅಗತ್ಯ. ಕೋಳಿಗಳಿಗೆ ಮ್ಯಾರೆಕ್ಸ್ ರೋಗದ ವಿರುದ್ಧ ಲಸಿಕೆ ಹಾಕಿಸಬೇಕು. ದಿನದ ವಯಸ್ಸಿನ ಮರಿಗಳಿಗೆ 0.2 ಮಿಲಿಲೀಟರಿನಷ್ಟು ಲಸಿಕೆಯನ್ನು ಹೊಟ್ಟೆ ಅಥವಾ ತೊಡೆಭಾಗದಲ್ಲಿ ಚುಚ್ಚಿ ವ್ಯಾಕ್ಸೀನ್ ಮಾಡಬೇಕು.

ದಪ್ಪ ಈಲಿ ರೋಗ

ಈ ರೋಗಕ್ಕೆ ಇಂಗ್ಲಿಷ್‌ನಲ್ಲಿ 'ಲಿಂಫಾಯ್ಡ್ ಲ್ಯೂಕೋಸಿಸ್' ಎಂದು ಹೆಸರು. ಇದು ವಿಷಾಣುಗಳಿಂದ ಬರುವ ಒಂದು ಸೋಂಕು ರೋಗ. ಇದು ಮೊಟ್ಟೆಗಳ ಮೂಲಕ ಮರಿಗಳಿಗೆ ಬರುತ್ತದೆ. ಮೊಟ್ಟೆಯಿಡುವ ಕೋಳಿಗಳಲ್ಲೇ ಹೆಚ್ಚು, 6–9 ತಿಂಗಳ ವಯಸ್ಸಿನ ಕೋಳಿಗಳಲ್ಲಿ ಸಾಮಾನ್ಯ.

ರೋಗದ ಚಿಹ್ನೆಗಳು: ರೋಗದ ಆರಂಭದಲ್ಲಿ ಕೋಳಿಗಳು ಆರೋಗ್ಯದಿಂದಿರುವಂತೆಯೇ ಕಂಡುಬರುತ್ತವೆ. ಯಾವುದೇ ರೋಗಲಕ್ಷಣಗಳನ್ನು ತೋರಿಸುವುದಿಲ್ಲ. ಕ್ರಮೇಣ ಕೆಲವು ಕೋಳಿಗಳಲ್ಲಿ ಗಂತಿಗಳು ಕಂಡುಬರುತ್ತವೆ. ಪ್ರತಿದಿನ ಸಾಯುವ ಕೋಳಿಗಳ ಸಂಖ್ಯೆ ಕಡಮೆಯೇ ಇದ್ದರೂ ಪ್ರತಿದಿನವೂ ಇದ್ದೇ ಇರುತ್ತದೆ. ಇವು ರೋಗದಿಂದ ಚೇತರಿಸಿಕೊಳ್ಳುವುದಿಲ್ಲ. ರೋಗದಿಂದ ಸತ್ತ ಕೋಳಿಗಳನ್ನು ಕೊಯ್ದು ಪರೀಕ್ಷಿಸಿದಾಗ ಹೊಟ್ಟೆಯೊಳಗಿನ ಈಲಿ ಅಂಗವು ಎರಡರಿಂದ ನಾಲ್ಕು ಪಟ್ಟು ಹೆಚ್ಚು ದಪ್ಪವಾಗಿರುತ್ತದೆ. ಆದ್ದರಿಂದಲೇ ಇದಕ್ಕೆ 'ದಪ್ಪ ಈಲಿ ರೋಗ' ಎಂದು ಹೆಸರು. ಈ ಸೋಂಕು ಮೂಳೆಗಳಿಗೂ ತಗಲುತ್ತದೆ. ಇದರಿಂದಾಗಿ ಕಾಲಿನ ಮೂಳೆಗಳು ದಂತದಂತೆ ಗಟ್ಟಿಯಾಗಿ ಕಾಲುಗಳು ದಪ್ಪವಾಗುತ್ತವೆ; ನಡೆಯಲು ಆಗುವುದಿಲ್ಲ.

ಮುಂಜಾಗ್ರತಾ ಕ್ರಮ : ದಪ್ಪ ಈಲಿ ರೋಗಕ್ಕೆ ಯಾವ ಔಷಧವೂ ಇಲ್ಲ. ಕಾಯಿಲೆ ಕೋಳಿಗಳನ್ನು ಆರೋಗ್ಯಕರ ಕೋಳಿಗುಂಪಿನಿಂದ ತೆಗೆಯುವುದೊಂದೇ ಮಾರ್ಗ.

ಕೋಳಿ ಸಿಡುಬು

ಇದು ಸಿಡುಬಿನ ವಿಷಾಣುಗಳಿಂದ ಬರುವ ಒಂದು ಸಾಂಕ್ರಾಮಿಕ ಸೋಂಕು ರೋಗ. ಕೋಳಿಯಿಂದ ಕೋಳಿಗೆ ಸುಲಭವಾಗಿ ಹರಡುತ್ತದೆ. ಇದು ಎಲ್ಲ ವಯಸ್ಸಿನ ಕೋಳಿಗಳಲ್ಲೂ ಕಾಣಿಸಿಕೊಳ್ಳುತ್ತದೆ. ಆದರೆ ಎಳೆಯ ವಯಸ್ಸಿನ ಕೋಳಿಗಳಲ್ಲಿ ಹೆಚ್ಚು ಸಾಮಾನ್ಯ. ಇದು ಮುಖ್ಯವಾಗಿ ಎರಡು ರೂಪಗಳಲ್ಲಿ ಕಾಣಿಸಿಕೊಳ್ಳುತ್ತದೆ. 1) ಚರ್ಮದ ರೂಪ 2) ಬಾಯಿಗಂಟಲು ರೂಪ.

ರೋಗದ ಚಿಹ್ನೆಗಳು : ಕೋಳಿಗಳು ಒಂದು ಕಡೆ ರೆಕ್ಕೆ ಮುದುರಿಕೊಂಡು ತೂಕಡಿಸುತ್ತಾ ಕುಳಿತಿರುತ್ತವೆ. ಚರ್ಮ ರೂಪದ ಸಿಡುಬಿನಲ್ಲಿ ಕೋಳಿಗಳ ತಲೆ, ಕಣ್ಣಿನ ಸುತ್ತಲೂ, ಗಡ್ಡ ಮತ್ತು ಜುಟ್ಟಿನ ಮೇಲೆ ಸಣ್ಣ ಸಣ್ಣ ಗಂಟುಗಳು ಕಾಣಿಸಿಕೊಳ್ಳುತ್ತವೆ. ಕ್ರಮೇಣ ಇವು ಒಟ್ಟಾಗಿ ದೊಡ್ಡದಾಗುತ್ತವೆ. ಇದು ಒಣ ಸಿಡುಬು; ಬಾಯಿ ಮತ್ತು ಗಂಟಲು ರೂಪದ ಸಿಡುಬಿನಲ್ಲಿ ಕೋಳಿಗಳ ಬಾಯಿ, ಗಂಟಲಿನಲ್ಲಿ ಹಳದಿ ಬಣ್ಣದ ಸಣ್ಣ ಸಣ್ಣ ಗಂಟುಗಳು ಬೆಳೆಯುತ್ತವೆ. ಇದು ಡಿಫ್ತೀರಿಯ ಮಾದರಿಯ ಸಿಡುಬು. ಈ ಗುಳ್ಳೆಗಳ ಕಾರಣದಿಂದಾಗಿ ಕೋಳಿಗಳಿಗೆ ಉಸಿರಾಡಲು ಕಷ್ಟವಾಗುತ್ತದೆ. ಗಂಟಲು ಕಟ್ಟಿ ಸಾಯಬಹುದು.

ಮುಂಜಾಗ್ರತಾ ಕ್ರಮಗಳು : ಕೋಳಿ ಸಿಡುಬಿಗೆ ಚಿಕಿತ್ಸೆಯಿಲ್ಲ. ಕೋಳಿಗಳಿಗೆ ಸಿಡುಬು ಬಾರದಂತೆ ಮುಂಜಾಗ್ರತೆಯಾಗಿ ಲಸಿಕೆ ಹಾಕಬೇಕು. ಕೋಳಿ ಸಿಡುಬಿಗೆ ಎರಡು ರೀತಿಯ ಲಸಿಕೆ ಇವೆ. ಒಂದು ಪಾರಿವಾಳ ಸಿಡುಬು ವಿಷಾಣುಗಳಿಂದ ತಯಾರಿಸಲಾಗಿರುತ್ತದೆ. ಮತ್ತೊಂದನ್ನು ಕೋಳಿ ಸಿಡುಬು ವಿಷಾಣುಗಳಿಂದ ತಯಾರಿಸಲಾಗಿರುತ್ತದೆ. ಮೊದಲನೆಯದನ್ನು 4 ದಿನದ ಮರಿಗಳಿಗೆ ಹಾಕಬೇಕು. ಎರಡನೆಯದನ್ನು 8ನೆಯ ವಾರದ ಮರಿಗಳಿಗೆ ಹಾಕಿಸಬೇಕು.

ನೆಗಡಿ ಸೋಂಕು

ಇದನ್ನು ಇಂಗ್ಲೀಷ್‌ನಲ್ಲಿ ಕೊರೈಜ ಎಂದು ಕರೆಯುತ್ತಾರೆ. ಸೂಕ್ಷ್ಮಾಣು ಜೀವಿಗಳಿಂದ ಬರುವ ಇದು ಒಂದು ಸಾಂಕ್ರಾಮಿಕ ರೋಗ. ಇದು ಹಿಮೋಫಿಲಸ್ ಗ್ಯಾಲಿನೇರಂ ಎಂಬ ರೋಗಾಣುವಿನಿಂದ ಬರುತ್ತದೆ. ಎಲ್ಲ ವಯಸ್ಸಿನ ಕೋಳಿಗಳಲ್ಲೂ ಕಾಣಿಸಿಕೊಳ್ಳುವುದುಂಟು, ಆದರೆ ಮರಿಗಳಲ್ಲಿ ಹೆಚ್ಚು. ಅವುಗಳಲ್ಲಿ ಸಾವೂ ಕೂಡಾ ಅಧಿಕ. ಸಾಮಾನ್ಯವಾಗಿ ನಾಲ್ಕು ತಿಂಗಳ ಒಳಗಿನ ಎಲ್ಲ ಕೋಳಿಗಳೂ ಈ ರೋಗಕ್ಕೆ ಒಳಗಾಗುತ್ತವೆ. ಮೊಟ್ಟೆಯಿಡುವ ಕೋಳಿಗಳಲ್ಲಿ ಮೊಟ್ಟೆ ಉತ್ಪಾದನೆ ಕಡಿಮೆಯಾಗುತ್ತದೆ. ಮಳೆಗಾಲ, ಜೌಗುಪ್ರದೇಶ, ತೇವದ ಭೂಮಿ ಹಾಗೂ ಗಲೀಜಿನ ವಾತಾವರಣದಲ್ಲಿ ಕೋಳಿಗಳಲ್ಲಿ ನೆಗಡಿ ಸೋಂಕಿನ ಸಂಭವ ಹಾಗೂ ಹರಡಿಕೆ ಸಾಮಾನ್ಯ.

ರೋಗದ ಚಿಹ್ನೆಗಳು : ರೋಗದ ಆರಂಭದಲ್ಲಿ ಕೋಳಿಗಳ ಮೂಗು ಹಾಗೂ ಕಣ್ಣುಗಳಿಂದ ಒಂದೇ ಸಮನೆ ನೀರು ಸುರಿಯತೊಡಗುತ್ತದೆ. ಅನಂತರ ಬರಬರುತ್ತಾ ಆ ನೀರು ನೀರಾದ ಸುರಿಕೆಯೋ ಕೀವು ತೆರನಾಗುತ್ತದೆ. ಉಸಿರಾಟ ಕಷ್ಟ. ಕೋಳಿಗಳು ಕುರುಡೂ ಆಗುವುದುಂಟು. ಮೇವು ತಿನ್ನಲಾರವು. ಕೊನೆಗೆ ಸಾವಿನೊಂದಿಗೆ ಅಂತ್ಯ.

ಚಿಕಿತ್ಸೆ : ಆರಿಯೋಮೈಸಿನ್, ಟೆರಾಮೈಸಿನ್, ಸ್ಟೈಕ್ಲಿನ್ ಮುಂತಾದ ಪ್ರತಿಜೈವಿಕ ಔಷಧಿಗಳನ್ನು ನೀರಿನಲ್ಲಿ ಬೆರೆಸಿಕೊಡಬಹುದು. ಆರೋಫ್ಯಾಕ್–2 ಎ ಅಥವಾ ಟಿ.ಎಮ್–5 ಆಹಾರದಲ್ಲಿ ಬೆರೆಸಿಕೊಡಬಹುದು ಇಲ್ಲವೇ ಅವಿಸಾಲ್, ಸಲ್ಮೆಟ್ ಮುಂತಾದುವನ್ನು ಕುಡಿಯುವ ನೀರಿಗೆ ಸೇರಿಸಿಕೊಡಬಹುದು(ಅನುಬಂಧ 1 ನೋಡಿ)

ಕೋಳಿ ಕಾಲರಾ

ಇದು ಏಕಾಣುಜೀವಿಗಳಿಂದ ಬರುವ ಕೋಳಿಗಳ ಒಂದು ಸೋಂಕುರೋಗ. ಪಾಶ್ಚುರೆಲ್ಲಾ ಮಲ್ಟೋಸಿಡಾ ಎಂಬ ರೋಗಾಣು ಇದಕ್ಕೆ ಕಾರಣ. ಬೆಳೆಯುವ ಹಾಗೂ ದೊಡ್ಡ ಕೋಳಿಗಳಲ್ಲಿ ಹೆಚ್ಚು ಸಾಮಾನ್ಯ. ಇದು ಮೇವು, ನೀರು, ಇಲಿ ಹಾಗೂ ಸಂಪರ್ಕಕರ ಮೂಲಕ ಕೋಳಿಯಿಂದ ಕೋಳಿಗೆ, ಒಂದು ಕಡೆಯಿಂದ ಮತ್ತೊಂದು ಕಡೆಗೆ ಹರಡುತ್ತದೆ.

ರೋಗದ ಚಿಹ್ನೆಗಳು : ರೋಗಗ್ರಸ್ತ ಕೋಳಿಗಳಲ್ಲಿ ಬೇಧಿ ಒಂದು ಮುಖ್ಯ ರೋಗ ಲಕ್ಷಣ. ಬೇಧಿ ಆರಂಭದಲ್ಲಿ ಹಳದಿ ಇರುತ್ತದೆ. ಬರಬರುತ್ತಾ ಕಂದು ಅಥವಾ ಹಸುರು ಬಣ್ಣಕ್ಕೆ ತಿರುಗುತ್ತದೆ; ಕೆಲವೊಮ್ಮೆ ಕೋಳಿಗಳು ಯಾವ ರೋಗ ಲಕ್ಷಣವನ್ನೂ ತೋರಿಸದೆ ಒಂದೊಂದಾಗಿ ಸಾಯತೊಡಗುತ್ತವೆ. ಇನ್ನು ಕೆಲವುವೇಳೆ ಕೆಳಜುಟ್ಟು, ಕಿವಿಗಚ್ಚು, ಕೀಲು, ಮುಖ ಊದಿಕೊಂಡು ಸಾಯುತ್ತವೆ.

ಚಿಕಿತ್ಸೆ : ಮುಂಜಾಗ್ರತೆ, ನೈರ್ಮಲ್ಯತೆ ಅವಶ್ಯಕ. ಆರಿಯೋಮೈಸಿನ್, ಟೆರಾಮೈಸಿನ್, ಸ್ಟೈಕ್ಲಿನ್ ಮುಂತಾದ ಪ್ರತಿಜೈವಿಕ ಔಷಧಿಗಳನ್ನು ನೀರಿನಲ್ಲಿ ಬೆರೆಸಿ ಕೋಳಿಗಳಿಗೆ ಕೊಡಬಹುದು ಇಲ್ಲವೇ ಆರೋಫ್ಯಾಕ್–2 ಎ. ಅಥವಾ ಟಿ. ಎಮ್–5 ಆಹಾರದಲ್ಲಿ ಬೆರೆಸಿ ಕೊಡಬಹುದು ಇಲ್ಲವೇ ಅವಿಸಾಲ್, ಸಲ್ಮೆಟ್ ಮುಂತಾದುವನ್ನು ಕುಡಿಯುವ ನೀರಿಗೆ ಸೇರಿಸಿ ಕೊಡಬಹುದು.

ಕೋಳಿ ಟೈಫಾಯಿಡ್

ಕೋಳಿಗಳ ಈ ಕಾಯಿಲೆಯನ್ನು ಇಂಗ್ಲಿಷ್‌ನಲ್ಲಿ ಫುಲ್ಲೋರಂ ರೋಗ ಎಂತಲೂ ಸ್ಯಾಲ್ಮೊನೆಲ್ಲೋಸಿಸ್ ಎಂತಲೂ ಕರೆಯುತ್ತಾರೆ. ಇದು ಏಕಾಣುಜೀವಿಗಳಿಂದ ಬರುವ ಕೋಳಿಗಳ ಒಂದು ಸೋಂಕು ರೋಗ. ಸ್ಯಾಲ್ಮೊನೆಲ್ಲಾ ಫುಲ್ಲೋರಂ

ಎಂಬ ಏಕಾಣುಜೀವಿಗಳಿಂದ ಬರುತ್ತದೆ. ಸಾಮಾನ್ಯವಾಗಿ ಮೊಟ್ಟೆಗಳಿಂದ ಮರಿಗಳಿಗೆ ಬರುತ್ತದೆ; ಮೊಟ್ಟೆಯಿಂದ ಮರಿ ಹೊರಬಂದ ಎರಡು ಅಥವಾ ಮೂರನೇ ದಿನವೇ ತಲೆದೋರುತ್ತದೆ, ಅನಂತರ ಮರಿಗಳು ಮೂರು ವಾರ ವಯಸ್ಸಿಗೆ ಬರುವವರೆಗೂ ಇದ್ದೇ ಇರುತ್ತದೆ. ಮರಿಗಳಲ್ಲಿ ರೋಗದ ಸಂಭವ ಹೆಚ್ಚು. ಮರಿಗಳಲ್ಲಿ ಸಾವು ಉಂಟಾಗುತ್ತದೆ. ದೊಡ್ಡ ಕೋಳಿಗಳಲ್ಲಿ ಸಾವು ಕಡಮೆ. ಈ ಸೋಂಕು ಸೋಂಕು ಕಲುಷಿತನೀರು, ಮೇವು ಹಾಗೂ ಇನ್‌ಕ್ಯುಬೇಟರ್ (ಕಾವುಯಂತ್ರ)ಗಳ ಮೂಲಕವೂ ಹರಡುತ್ತದೆ.

ರೋಗದ ಚಿಹ್ನೆಗಳು : ರೋಗಗ್ರಸ್ತ ಕೋಳಿಗಳು ಗುಂಪು ಕೂಡಿಕೊಂಡು ರೆಕ್ಕೆ ಮುದುರಿಕೊಂಡು ಒಂದು ಕಡೆ ತೂಕಡಿಸುತ್ತಾ ಕುಳಿತಿರುತ್ತವೆ. ಬಿಳಿ ಅಥವಾ ತಿಳಿ ಹಳದಿ ಬೇಧಿಯಾಗುತ್ತಿರುತ್ತದೆ; ಕೊನೆಗೆ ಸಾಯುತ್ತವೆ. ಬೇಧಿ ಬಿಳಿ ಸಾಮಾನ್ಯವಾದ ರೋಗ ಲಕ್ಷಣ. ಕೋಳಿಯ ಹಿಂಭಾಗವೆಲ್ಲಾ ಮಲದಿಂದ ಗಲೀಜಾಗಿರುತ್ತದೆ. ನಷ್ಟ ಶೇಕಡಾ 30–40 ರ ವರೆಗಿರುತ್ತದೆ. ಸಂತಾನೋತ್ಪತ್ತಿಯ ಮತ್ತು ಜನನಾಂಗಗಳಿಗೂ ಸೋಂಕು ತಗಲುತ್ತದೆ. ಪರಿಣಾಮವಾಗಿ ಮೊಟ್ಟೆಯಲ್ಲೂ ರೋಗಾಣುಗಳು ಬೆಳೆಯುತ್ತವೆ.

ಚಿಕಿತ್ಸೆ : ನೆಫ್‌ಟಿನ್, ಫ್ಯೂರಾಸೋಲ್ ಮುಂತಾದ ಔಷಧಗಳನ್ನು ಕೊಡಬಹುದು (ಅನುಬಂಧ 1 ನೋಡಿ).

ನಿಯಂತ್ರಣ : ಕೋಳಿಗಳ ರಕ್ತಪರೀಕ್ಷೆ ಮಾಡಿಸಬೇಕು. ರಕ್ತಪರೀಕ್ಷೆಯಿಂದ ರೋಗದ ಸೂಚನೆ ತೋರಿಸಿದ ಕೋಳಿಗಳನ್ನು ಗುಂಪಿನಿಂದ ಹೊರತೆಗೆಯಬೇಕು. ಕಾವುಯಂತ್ರವನ್ನು ಫಾರ್ಮಾಲ್ಡಿಹೈಡ್ ಅನಿಲದಿಂದ ಧೂಪಿಸಬೇಕು.

ಕಾಕ್ಸಿಡಿಯಾಸಿಸ್

ಇದು ಸೂಕ್ಷ್ಮ ಐಮಿರಿಯಾ ಏಕಾಣುಜೀವಿಗಳಿಂದ ಬರುವ ಒಂದು ಸೋಂಕು ರೋಗ. ಇದು 'ರಕ್ತಬೇಧಿ' ಎಂತಲೂ ಪ್ರಸಿದ್ಧ. ಕೋಳಿಗಳಲ್ಲಿ ಅತಿ ಸಾಮಾನ್ಯವಾದ ಹಾಗೂ ಎಲ್ಲ ಕೋಳಿ ಸಾಕಣೆಗಾರರಿಗೂ ಪರಿಚಿತವಾದ ರೋಗ. ಈ ರೋಗದಿಂದಾಗಿ ಕೋಳಿಸಾಕಣೆಗಾರರಿಗೆ ಉಂಟಾಗುವ ನಷ್ಟ ಅಪಾರ. ಇದು ಎಲ್ಲ ವಯಸ್ಸಿನ ಕೋಳಿಗಳಿಗೂ ಬರುತ್ತದೆ, ಆದರೆ ಎಳೆಯ ವಯಸ್ಸಿನ ಕೋಳಿಗಳು ಮತ್ತು ಮರಿಗಳಲ್ಲಿ ಹೆಚ್ಚು. ಅವುಗಳಲ್ಲಿ ಸಾವು ನೂರಕ್ಕೆ ನೂರರಷ್ಟಿರುತ್ತದೆ. ಇದು ಕೋಳಿಗಳ 'ಕರುಳಿನ ರೋಗ'. ಹೆಚ್ಚಾಗಿ ಮೂರರಿಂದ ಒಂಬತ್ತು ವಾರಗಳ ವಯಸ್ಸಿನೊಳಗಿನ ಕೋಳಿಗಳಲ್ಲಿ ಸಾಮಾನ್ಯ. ಕಾಯಿಲೆಯು ಹೆಚ್ಚಾಗಿ ಸೆಕೆ ಹಾಗೂ ತೇವಾಂಶವಿರುವ ಗಾಳಿಯ (ಆರ್ದ್ರತೆ) ಹವಾಮಾನಗಳಲ್ಲಿ ತಲೆದೋರುತ್ತದೆ.

ಸುಮಾರು ಒಂಬತ್ತು ಐಮೀರಿಯಾ ಏಕಾಣು ಸೂಕ್ಷ್ಮಜೀವಿಗಳು ಕೋಳಿಗಳಲ್ಲಿ ರಕ್ತಬೇಧಿಯನ್ನುಂಟುಮಾಡುತ್ತವೆ. ಇವು ಕರುಳಿನ ಒಳಭಾಗವನ್ನು ಕೊರೆದು ತೂತುಮಾಡುತ್ತವೆ; ಕರುಳಿನಲ್ಲಿ ವಿಪರೀತ ರಕ್ತಸ್ರಾವವಾಗುತ್ತದೆ, ರಕ್ತ ಹೆಪ್ಪುಗಟ್ಟಿ ನೀಲಿ ಬಣ್ಣಕ್ಕೆ ತಿರುಗುತ್ತದೆ. ಇದರಿಂದಾಗಿ ಕರುಳಿನ ಆ ಭಾಗ ನೀಲಿ ಬಣ್ಣವಿರುತ್ತದೆ. ಕರುಳು ದಪ್ಪವಾಗಿ ಊದಿಕೊಳ್ಳುತ್ತದೆ. ಕೋಳಿಗಳ ಮುಖ, ಕಾಲುಗಳು ಬಿಳಿಚಿಕೊಳ್ಳುತ್ತವೆ. ಸೋಂಕು ಕಲುಷಿತ ಹಿಕ್ಕೆ, ನೀರು, ಮೇವು ಲಿಟ್ಟರು ಮುಂತಾದವುಗಳ ಮೂಲಕ ರಕ್ತಬೇಧಿ ರೋಗವು ಕೋಳಿಯಿಂದ ಕೋಳಿಗೆ ಹರಡುತ್ತದೆ.

ರೋಗದ ಚಿಹ್ನೆಗಳು : ಕೋಳಿಗಳು ರೆಕ್ಕೆ ಮುದುಡಿಕೊಂಡು ಒಂದು ಕಡೆ ತೂಕಡಿಸುತ್ತಾ ಕುಳಿತಿರುತ್ತವೆ. ರಕ್ತಮಿಶ್ರಿತ ಬೇಧಿ ಮಾಡಿಕೊಳ್ಳುತ್ತಿರುತ್ತವೆ; ಮೇವು ತಿನ್ನುವುದಿಲ್ಲ, ನೀರು ಕುಡಿಯುವುದಿಲ್ಲ, ಬಡಕಲಾಗುತ್ತವೆ, ಸಾಯುತ್ತವೆ.

ಚಿಕಿತ್ಸೆ : ಅಂಪ್ರಾಲ್‌ಸೋಲ್ - 30 ಗ್ರಾಮಿನಷ್ಟು ಪುಡಿಯನ್ನು 25 ಲೀಟರು ನೀರಿನಲ್ಲಿ ಬೆರೆಸಿ 5-7 ದಿನಗಳವರೆಗೆ ಕೋಳಿಗಳಿಗೆ ಕುಡಿಯಲು ಕೊಡಬೇಕು ಅಥವಾ ಒಂದು ಟ್ರೈಪ್ಯುರಾನ್ ಮಾತ್ರೆಯನ್ನು ಒಂದು ಲೀಟರು ನೀರಿನಲ್ಲಿ ಕರಗಿಸಿ 5-7 ದಿನಗಳವರೆಗೆ ಕೋಳಿಗಳಿಗೆ ಕುಡಿಯಲು ಕೊಡಬೇಕು.

ಮುಂಜಾಗ್ರತಾ ಕ್ರಮ : ಕಾಕ್ಸಿಡಿಯಾ ರೋಗವನ್ನು ತಡೆಗಟ್ಟುವ ಔಷಧಗಳು (ಕಾಕ್ಸಿಡಿಯೋಸ್ಟ್ಯಾಟ್ಸ್) ಆಹಾರದಲ್ಲಿ ಬೆರೆಸಿ ಮುಂಜಾಗ್ರತಾ ಕ್ರಮವಾಗಿ ಕೋಳಿಗಳಿಗೆ ಕೊಡಬೇಕು. ಅಂಪ್ರಾಲ್, ಟ್ರೈಫ್ಯುರಾನ್, ಎಂಬಜಿನ್ ಪ್ರಿಮಿಕ್ಸ್‌ಗಳನ್ನು ಬಳಸಬಹುದು. ಇವುಗಳಲ್ಲಿ ಯಾವುದಾದರೂ ಒಂದನ್ನು ಪ್ರತಿ 100 ಕಿಲೋಗ್ರಾಮ್ ಮರಿ ಮೇವಿನ ಆಹಾರದಲ್ಲಿ 50 ಗ್ರಾಮಿನಷ್ಟು ಮತ್ತು ಬೆಳವಣಿಗೆ ಆಹಾರದಲ್ಲಿ 100 ಕಿಲೋಗ್ರಾಮಿಗೆ 25 ಗ್ರಾಮಿನಷ್ಟು ಸೇರಿಸಿ ಕೊಡಬೇಕು.

ಕೋಳಿಗಳ ಉಸ್ತುವಾರಿ ಸರಿಯಾಗಿರಬೇಕು. ಕೋಳಿಮನೆಯಲ್ಲಿರುವ ಲಿಟ್ಟರು ತೇವವಾಗದಂತೆ ನೋಡಿಕೊಳ್ಳಬೇಕು. ಲಿಟ್ಟರಿನ ಮೇಲೆ ನೀರು ಚೆಲ್ಲಿದರೆ ಆ ಲಿಟ್ಟರು ವಸ್ತುವನ್ನು ತೆಗೆಯಬೇಕು. ಕೋಳಿಗಳನ್ನು ಇಕ್ಕಟ್ಟಾದ ಜಾಗದಲ್ಲಿ ಅಧಿಕ ಸಂಖ್ಯೆಯಲ್ಲಿ ಸಾಕಬಾರದು.

ಪರಾವಲಂಬಿ ಜೀವಿ ರೋಗಗಳು

ಕೋಳಿಗಳನ್ನು ಕಾಡುವ ಪರಾವಲಂಬಿ ಜೀವಿಗಳಲ್ಲಿ ಒಳ ಪರಾವಲಂಬಿ ಜೀವಿಗಳು ಮತ್ತು ಹೊರ ಪರಾವಲಂಬಿ ಜೀವಿಗಳು ಎಂದು ಎರಡು ವಿಧ.

ಶರೀರದೊಳಗಿನ ಹುಳುಗಳೇ ಒಳ ಪರಾವಲಂಬಿ ಜೀವಿಗಳು. ಮೈಮೇಲೆ

ರುವವು ಹೊರ ಪರಾವಲಂಬಿ ಜೀವಿಗಳು. ಈ ಎರಡು ಬಗೆಯ ಜೀವಿಗಳೂ ಕೋಳಿಗಳ ಮೈಯಿಂದ ರಕ್ತ ಮತ್ತು ಪೌಷ್ಟಿಕಾಂಶಗಳನ್ನು ಹೀರುತ್ತಾ, ಅನೇಕ ರೀತಿಯಲ್ಲಿ ಹಾನಿಕರವಾಗಿರುತ್ತವೆ.

ಒಳ ಪರಾವಲಂಬಿ ಜೀವಿಗಳು

ಕೋಳಿಗಳ ಹಿಕ್ಕೆಯಲ್ಲಿ ಹುಳುಗಳು ಬೀಳುತ್ತಿರುವುದನ್ನು ಎಲ್ಲರೂ ಕಂಡಿರಬಹುದು. ಕೋಳಿಗಳಲ್ಲಿ ದುಂಡು ಹುಳು, ಜಂತು ಹುಳು, ಲಾಡಿಹುಳು ಮುಂತಾದ ವಿವಿಧ ರೀತಿಯ ಹುಳುಗಳು ಬೀಳುತ್ತವೆ. ಇವುಗಳ ವಾಸಸ್ಥಾನ ಕರುಳು. ಇವು ಕರುಳಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮೊಟ್ಟೆಗಳನ್ನಿಡುತ್ತವೆ. ಅನಂತರ ಈ ಮೊಟ್ಟೆಗಳು ಕಾಯಿಲೆ ಕೋಳಿಗಳ ಹಿಕ್ಕೆಯಲ್ಲಿ ಹೊರಬರುತ್ತಿರುತ್ತವೆ. ಇವುಗಳನ್ನು ತಿಂದ ಆರೋಗ್ಯಕರ ಕೋಳಿಗಳೂ ರೋಗವನ್ನು ಪಡೆಯುತ್ತವೆ. ಹುಳುಗಳು ಕರುಳಿನ ಒಳಗೋಡೆಗಳಿಗೆ ಅಂಟಿಕೊಂಡು ರಕ್ತವನ್ನು ಹೀರುತ್ತವೆ, ಕೊರೆದು ಗಾಯ ಗೊಳಿಸುತ್ತವೆ ಇಲ್ಲವೇ ಕರುಳಿನಲ್ಲಿ ಅಡ್ಡವಾಗಿ ತುಂಬಿಕೊಂಡು ತೊಂದರೆಯನ್ನುಂಟುಮಾಡುತ್ತವೆ. ಕರುಳಿನಲ್ಲಿ ಸಣ್ಣ ಸಣ್ಣ ಗಂಟುಗಳು ಏಳುತ್ತವೆ. ಕೆಲವು ವೇಳೆ ಹುಳುಗಳು ಕರುಳನ್ನು ಕೊರೆದು ಒಳಗಡೆಗೆ ಹೋಗುವುದೂ ಉಂಟು. ಹುಳುಗಳಲ್ಲಿ ಕೆಲವು ಸಣ್ಣವು, ಕೆಲವು ದೊಡ್ಡವು. ಕೆಲವು ಸಣ್ಣ ಕರುಳಿನಲ್ಲಿ ವಾಸಿಸುತ್ತವೆ, ಮತ್ತೆ ಕೆಲವು ದೊಡ್ಡ ಕರುಳಿನಲ್ಲಿ ವಾಸಿಸುತ್ತವೆ. ಲಾಡಿಹುಳುಗಳದು ಗೆಣ್ಣುಗಳ ಮೈ. ಕಾಯಿಲೆ ಕೋಳಿಗಳ ಹಿಕ್ಕೆಯಲ್ಲಿ ಬೀಳುವ ಗೆಣ್ಣು (ಮೊಟ್ಟೆ) ಗಳನ್ನು ಮಧ್ಯವರ್ತಿಗಳಾದ ಎರೆಹುಳು, ಬಸವನ ಹುಳು, ಮಿಡತೆ, ಇರುವೆ, ನೊಣ ಮುಂತಾದುವುಗಳು ತಿನ್ನುತ್ತವೆ. ಆಗ ಅವುಗಳ ಶರೀರದಲ್ಲಿ ಬೆಳೆದು ಹುಳುಗಳಾಗುತ್ತವೆ. ಕೋಳಿಗಳು ಈ ಮಧ್ಯವರ್ತಿಗಳನ್ನು ತಿಂದಾಗ ರೋಗವನ್ನು ಪಡೆಯುತ್ತವೆ.

ಹೊಟ್ಟೆಯಲ್ಲಿ ಹುಳುಗಳಿರುವವರೆಗೂ ಕೋಳಿಗಳು ಏಳಿಗೆಯಾಗುವುದಿಲ್ಲ. ಕ್ಷೀಣಿಸುತ್ತಾ ಹೋಗುತ್ತವೆ. ಎಷ್ಟು ತಿಂದರೂ ಬರೀ ಮೂಳೆಯ ಮೈಯಾಗಿರುತ್ತವೆ. ಕೋಳಿಗಳು ತೂಕಡಿಸುತ್ತಾ ಕುಳಿತಿರುತ್ತವೆ. ರಕ್ತಮಯವಾದ ಭೇದಿ ಆಗುತ್ತಿರುತ್ತದೆ. ರಕ್ತಹೀನತೆಯಿಂದ ಮೈ ಬಿಳಿಚಿಕೊಂಡಿರುತ್ತದೆ. ಮೊಟ್ಟೆ ಉತ್ಪಾದನೆ ಕಡಿಮೆಯಾಗುತ್ತದೆ. ಕೋಳಿಗಳು ಸಾಯುತ್ತವೆ.

ಮುಂಜಾಗ್ರತಾ ಕ್ರಮ : ಕೋಳಿಗಳಿಗೆ ತಿಂಗಳಿಗೊಮ್ಮೆಯಾದರೂ ಜಂತು ನಾಶಕ ಔಷಧಿಗಳನ್ನು ನೀರಿನಲ್ಲಿ ಬೆರೆಸಿಕೊಡುತ್ತಿರಬೇಕು. ವೈದ್ಯರಿಗೆ ತೋರಿಸಬೇಕು. ಪೈಪರಿಜೀನ್ ಔಷಧಿಗಳಾದ ವರ್ಮೆಕ್ಸ್, ಸಾಪರ್‌ಸಾಲ್ ಮುಂತಾದ ಔಷಧಗಳನ್ನು ಕೊಡಬೇಕು(ಅನುಬಂಧ 1 ನೋಡಿ) . ಜೊತೆಗೆ ಉತ್ತಮ ರೀತಿಯ ಕೋಳಿಸಾಕಣೆ ಕ್ರಮ, ಉಸ್ತುವಾರಿ, ಮತ್ತು ನೈರ್ಮಲ್ಯತೆಗಳೂ ಅಗತ್ಯ.

ಹೊರ ಪರಾವಲಂಬಿ ಜೀವಿಗಳು

ಹೇನು, ಕೂರೆ, ಉಣ್ಣೆ, ನೊಣ, ಸೊಳ್ಳೆ, ಚಿಗಟ ಇವು ಕೋಳಿಗಳ ಮೈಮೇಲಿರುವ ಹೊರ ಪರಾವಲಂಬಿ ಜೀವಿಗಳು. ಇವುಗಳಿಂದಾಗಿ ಕೋಳಿಗಾಗುವ ಕಿರುಕುಳ ಹೆಚ್ಚು; ಹಾನಿ ಬಹಳ; ನಷ್ಟ ಅಧಿಕ. ಕೆಲವು, ಕೋಳಿಗಳ ಮೈಗೆ ಪುಕ್ಕಗಳ ಅಡಿಯಲ್ಲಿ ಅಂಟಿಕೊಂಡು ರಕ್ತ ಹೀರುತ್ತವೆ. ಕೆಲವು, ಚರ್ಮದ ಮೇಲ್ಪದರಗಳನ್ನು ಕಿತ್ತು ತಿನ್ನುತ್ತವೆ. ಕೆಲವು, ಕೋಳಿಯಿಂದ ಕೋಳಿಗೆ ರೋಗಾಣುಗಳನ್ನು ಹರಡುತ್ತವೆ. ಈ ಪೀಡೆಗಳಿಂದಾಗಿ ಕೋಳಿಗಳಿಗೆ ಆರಾಮವಿರುವುದಿಲ್ಲ. ಕೋಳಿಗಳು ಕೆರೆದುಕೊಳ್ಳುತ್ತಿರುತ್ತವೆ. ಅವು ಮೇವು ತಿನ್ನುವುದು ಕಡಮೆಯಾಗುತ್ತದೆ. ಮೊಟ್ಟೆ ಉತ್ಪಾದನೆ ಕಡಮೆಯಾಗುತ್ತದೆ.

ಕೋಳಿಗಳ ಮೈಮೇಲಿನ ಧೂಳನ್ನು ಕೊಡವಿ, ಶೇಕಡಾ 0.25 ಬಿ. ಎಚ್. ಸಿ: ಶೇಕಡಾ 1-2 ಮೆಲಾಥಿಯಾನ್ ಅಥವಾ ಸುಮಥಿಯಾನ್ ದ್ರಾವಣವನ್ನು ಕೋಳಿಗಳ ಮೈಮೇಲೆ ಚಿಮುಕಿಸಬೇಕು. ಇಲ್ಲವೇ ಇದೇ ದ್ರಾವಣದಲ್ಲಿ ಕೋಳಿಗಳ ತಲೆಯನ್ನು ಮುಳುಗಿಸದೆ ಮೈಯನ್ನು ಮಾತ್ರ ಮುಳುಗಿಸಿ ತೆಗೆಯಬೇಕು. ಕೋಳಿಗಳ ಮನೆಯಲ್ಲಿ ಕೋಳಿಗಳನ್ನು ಬಿಡುವ ಮುನ್ನ ಕ್ರಿಮಿಕೀಟ ನಾಶಕಗಳಿಗೆ ಔಷಧಗಳನ್ನು ಸಿಂಪಡಿಸಬೇಕು. ವೈದ್ಯರ ಸಲಹೆ ಪಡೆಯಬೇಕು(ಅನುಬಂಧ 1 ನೋಡಿ).

ಪೌಷ್ಟಿಕಾಂಶಗಳ ಕೊರತೆಯಿಂದ ಬರುವ ರೋಗಗಳು

ಕೋಳಿಗಳು ಆರೋಗ್ಯದಿಂದಿರಲು ಅವುಗಳಿಗೆ ಸರಿಯಾದ ಪ್ರಮಾಣದಲ್ಲಿ ಎಲ್ಲ ಪೌಷ್ಟಿಕಾಂಶಗಳನ್ನು ಒಳಗೊಂಡಿರುವ ಆಹಾರವನ್ನು ಒದಗಿಸಬೇಕು. ಆಹಾರದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಜೀವಸತ್ವಗಳೂ ಖನಿಜಾಂಶಗಳೂ ಇರಬೇಕು. ಇವು ಕೊರತೆ ಇದ್ದಲ್ಲಿ ಅದಕ್ಕೆ ಸಂಬಂಧಿಸಿದ ರೋಗಗಳು ಬರುತ್ತವೆ. ಉದಾಹರಣೆಗೆ, 'ಎ' ಜೀವಸತ್ವದ ಕೊರತೆಯ ಕಾಯಿಲೆ, 'ಡಿ' ಜೀವಸತ್ವ, ಕ್ಯಾಲ್ಸಿಯಂ, ಫಾಸ್ಫರಸ್(ರಂಜಕ)ಗಳ ಕೊರತೆಯ ಕಾಯಿಲೆ ಮುಂತಾದುವು.

' ಎ ' ಜೀವಸತ್ವದ ಕೊರತೆ

ಕೋಳಿಗಳಿಗೆ ನೀಡುವ ಮೇವಿನಲ್ಲಿ 'ಎ' ಜೀವಸತ್ವ ಕಡಮೆಯಾದಲ್ಲಿ ಈ ಕಾಯಿಲೆ ಬರುತ್ತದೆ. ಇದು ಎಲ್ಲ ವಯಸ್ಸಿನ ಕೋಳಿಗಳಲ್ಲೂ ಬರುತ್ತದೆ. ಇಂತಹ ಕೋಳಿಗಳಲ್ಲಿ ಕಣ್ಣು ಹಾಗೂ ಮೂಗಿನಿಂದ ನೀರು ಸೋರುವಿಕೆ. ಕಣ್ಣುಗಳ ಕೆಳಗೆ ಊದಿಕೊಳ್ಳುವಿಕೆ, ಕುಂಟುತನ ಮುಂತಾದ ಲಕ್ಷಣಗಳು ಕಂಡುಬರುತ್ತವೆ

'ಎ' ಜೀವಸತ್ವವು ಹಸುರುಮೇವಿನಲ್ಲಿ ಹೆಚ್ಚಾಗಿರುತ್ತದೆ. ಕೋಳಿಗಳಿಗೆ ಹಸುರು ಮೇವನ್ನು ಒದಗಿಸುವುದರಿಂದ ಈ ಪರಿಸ್ಥಿತಿಯನ್ನು ನಿವಾರಿಸಬಹುದು. 'ಎ' ಜೀವಸತ್ವವನ್ನು ಸಾಕಷ್ಟು ಪ್ರಮಾಣದಲ್ಲಿ ಸೇರಿಸಿ ತಯಾರಿಸಿರುವ ಮೇವನ್ನು

ಕೋಳಿಗಳಿಗೆ ನೀಡಬೇಕು. ಇದಕ್ಕೆ ಆಹಾರ ತಯಾರಕರ ವಿಳಾಸಗಳನ್ನು (ಅನುಬಂಧ2) ನೋಡಿ. ಜೀವಸತ್ವ ಕೊರತೆ ಬಿದ್ದಲ್ಲಿ ಜೀವಸತ್ವಪೂರಿತ ಮೇವಿನೌಷಧಿಗಳಿಗೆ ಅನುಬಂಧ 1 ನೋಡಿ.

ಎಲುಮುರುಟು (ರಿಕೆಟ್ಸ್)

'ಡಿ' ಜೀವಸತ್ವ ಕೊರತೆ ಹಾಗೂ ಕ್ಯಾಲ್ಸಿಯಮ್, ರಂಜಕ, ಖನಿಜಾಂಶಗಳ ಕೊರತೆ ಕೋಳಿಗಳ ಈ ಸ್ಥಿತಿಗೆ ಕಾರಣ. ಇದು ಮೂಳೆಗಳಿಗೆ ಸಂಬಂಧಿಸಿದ ರೋಗ. ಕೀಲುಗಳೂ ಕಾಲುಗಳ ಮೂಳೆಗಳೂ ದಪ್ಪವಾಗುತ್ತವೆ. ಕೋಳಿಗಳು ಕುಂಟುತ್ತವೆ ಈ ಆಹಾರಾಂಶಗಳನ್ನು ಮೇವಿನಲ್ಲಿ ಸೇರಿಸಿಕೊಡುವುದರ ಮೂಲಕ ಕೋಳಿಗಳಲ್ಲಿ ಈ ರೋಗವನ್ನು ತಡೆಗಟ್ಟಬಹುದು. ಸೂರ್ಯನ ರಶ್ಮಿ 'ಡಿ' ಜೀವಸತ್ವವನ್ನು ಒದಗಿಸುತ್ತದೆ. ಮೂಳೆಪುಡಿ, ಚಿಪ್ಪಿನ ಪುಡಿಯನ್ನು ಮೇವಿನಲ್ಲಿ ಸೇರಿಸಿಕೊಡುವುದರ ಮೂಲಕ ಖನಿಜಾಂಶಗಳನ್ನು ಒದಗಿಸಬಹುದು.

ವಕ್ರಕಾಲು (ಜೋಲುಕಾಲು)

ಈ ರೋಗಕ್ಕೆ ಇಂಗ್ಲಿಷ್‌ನಲ್ಲಿ ಪೆರೋಸಿಸ್ ಎಂದು ಹೆಸರು. ಇದು ಮೆಗ್ನೀಸಿಯಮ್ ಖನಿಜಾಂಶದ ಕೊರತೆಯಿಂದ ಬರುವ ರೋಗ. ಬೆಳೆಯುವ ಕೋಳಿಗಳಲ್ಲಿ ಸಾಮಾನ್ಯ. ಬಾಗಿದ ಮೂಳೆ, ಉಬ್ಬಿದ ಕೀಲು, ಜೋತುಬಿದ್ದ ಕಾಲು ಇವು ಸಾಮಾನ್ಯವಾಗಿ ಕಂಡುಬರುವ ರೋಗಲಕ್ಷಣಗಳು. ಕೋಳಿಗಳ ಮೇವಿನಲ್ಲಿ ಅಕ್ಕಿತೌಡನ್ನು ಸೇರಿಸಿ ಕೊಡುವುದರಿಂದ ಈ ದುಸ್ಥಿತಿಯನ್ನು ತಪ್ಪಿಸಬಹುದು. ಅಕ್ಕಿತೌಡಿನಲ್ಲಿ ಮೆಗ್ನೀಸಿಯಮ್ ಖನಿಜಾಂಶ ಅಧಿಕ ಪ್ರಮಾಣದಲ್ಲಿರುತ್ತದೆ. ಮೆಗ್ನೀಸಿಯಮ್ ಸೇರಿಸಿರುವ ಮೇವಿನ ಮಿಶ್ರಣವನ್ನೂ ಸಹ ಕೊಡಬಹುದು.

ಕೋಳಿಗಳ ರೋಗಗಳನ್ನು ತಡೆಗಟ್ಟಲು ಅನುಸರಿಸಬೇಕಾದ ಕೆಲವು ಸಾಮಾನ್ಯ ಮುಂಜಾಗ್ರತಾ ಕ್ರಮಗಳು

1) ಆರೋಗ್ಯಕರ ಹಾಗೂ ಉತ್ತಮ ರೋಗ ನಿರೋಧಕ ಶಕ್ತಿಯುಳ್ಳ ಕೋಳಿಗಳನ್ನೇ ಸಾಕಣೆಗೆ ಆರಿಸಿಕೊಳ್ಳಬೇಕು.

2) ಮರಿಗಳಿಗೂ ದೊಡ್ಡ ಕೋಳಿಗಳಿಗೂ ಕಾಲಕಾಲಕ್ಕೆ ತಪ್ಪದೆ ರೋಗಗಳು ಬಾರದಂತೆ ಲಸಿಕೆ ಹಾಕುತ್ತಿರಬೇಕು.

3) ಮರಿಗಳನ್ನೂ ದೊಡ್ಡ ಕೋಳಿಗಳನ್ನೂ ಬೇರೆಬೇರೆಯಾಗಿ ಇಟ್ಟಿರಬೇಕು.

4) ಸಂದರ್ಶಕರನ್ನು ಕೋಳಿಮನೆಯೊಳಕ್ಕೆ ಹೋಗಲು ಬಿಡಬಾರದು.

5) ಕೋಳಿಮನೆಗಳಲ್ಲಿ ಲಿಟ್ಟರಿನ ಮೇಲೆ ನೀರು ಚೆಲ್ಲಿ ನೆನೆಯದಂತೆ ಜಾಗರೂಕತೆ ವಹಿಸಬೇಕು.

6) ಕೋಳಿಮನೆಗಳ ಆವರಣವನ್ನು ಕ್ರಿಮಿನಾಶಕ ಔಷಧಗಳನ್ನು ಸಿಂಪಡಿಸಿ ಶುಚಿ ಮಾಡಬೇಕು.

7) ಕೋಳಿಗಳಲ್ಲೂ ಮರಿಗಳಲ್ಲೂ ಯಾವುದೇ ರೀತಿಯ ರೋಗ ಲಕ್ಷಣಗಳು ಕಾಣಿಸಿಕೊಂಡರೂ ಅಥವಾ ಅವು ಸತ್ತರೂ ಕೂಡಲೇ ಅವನ್ನು ಅಲ್ಲಿಂದ ಬೇರ್ಪಡಿಸಿ ಪಶುವೈದ್ಯರಿಗೆ ತೋರಿಸಿ ಅವರ ಸಲಹೆ ಪಡೆಯಬೇಕು.

8) ಕೋಳಿಗಳಿಗೆ ಸಮತೋಲನ ಆಹಾರವನ್ನು ಒದಗಿಸಬೇಕು. ಕೋಳಿಮನೆಗಳಲ್ಲಿ ಸದಾ ಶುಚಿಯಾದ ನೀರಿಟ್ಟಿರಬೇಕು. ನೀರನ್ನು ದಿನಾ ಬದಲಿಸುತ್ತಿರಬೇಕು.

9) ಪ್ರತಿ ಸಲ ಕೋಳಿಸಾಕಣೆ ಆರಂಭಿಸುವಾಗಲೂ ಮನೆ ಮತ್ತು ಮನೆಯೊಳಗಿನ ಸಲಕರಣೆಗಳನ್ನು ಚೊಕ್ಕಟಮಾಡಬೇಕು.

10) ಪ್ರತಿ ಕೋಳಿಮನೆಯ ಬಾಗಿಲ ಮುಂದೆ, ಹೊಸಿಲಾಚೆ ಸೋಂಕುನಾಶಕ ಔಷಧಿನೀರು ತುಂಬಿದ ತೊಟ್ಟಿ ಇಟ್ಟಿರಬೇಕು. ಕೋಳಿಮನೆಯೊಳಕ್ಕೆ ಪ್ರವೇಶ ಮಾಡುವಾಗ ತೊಟ್ಟಿಯಲ್ಲಿ ಕಾಲುಗಳನ್ನು ಅದ್ದಿ ಅನಂತರವೇ ಒಳಕ್ಕೆ ನಡೆಯಬೇಕು.

11) ಕೋಳಿಗಳಿಗೆ ಸದಾ ಹೊಸದಾದ ಹಾಗೂ ಒಳ್ಳೆಯ ಮೇವನ್ನು ಕೊಡಬೇಕು. ಬೂಷ್ಟು ಹಿಡಿದ ಇಲ್ಲವೇ ಕೆಟ್ಟವಾಸನೆ ಇರುವ ಮೇವನ್ನು ಕೊಡಬಾರದು.

ಅಧ್ಯಾಯ 11

ಉತ್ಪನ್ನಗಳ ಶೇಖರಣೆ ಮತ್ತು ಮಾರಾಟ

ಕೋಳಿಗಳ ಮೊಟ್ಟೆಗಳಿಗೆ, ಮಾಂಸಕ್ಕೆ ಒಳ್ಳೆಯ ಮಾರುಕಟ್ಟೆ ಇದ್ದರೆ ಮಾತ್ರ ಕೋಳಿಸಾಕಣೆ ಲಾಭದಾಯಕ. ಕೋಳಿಸಾಕಣೆಯನ್ನು ಆರಂಭಿಸುವಾಗ ಕೋಳಿಗಳ ಉತ್ಪನ್ನಗಳಿಗೆ ಆ ಪ್ರದೇಶದಲ್ಲಿ ಬೇಡಿಕೆ ಹೇಗಿದೆ, ಅವುಗಳ ಮಾರಾಟ ಹೇಗೆ ಎಂಬುದನ್ನು ಗಮನಿಸಬೇಕಾದುದು ಅವಶ್ಯಕ. ಸದ್ಯ ನಮ್ಮ ದೇಶದಲ್ಲಿ ಕೋಳಿಸಾಕಣೆ ಬಹುಮಟ್ಟಿಗೆ ಹಳ್ಳಿಗಳಿಗೆ ಸೀಮಿತವಾಗಿದೆ; ನಗರಗಳಲ್ಲಿ ಹಾಗೂ ದೊಡ್ಡ ಪಟ್ಟಣಗಳಲ್ಲಿ ಈಗೀಗ ಆರಂಭವಾಗುತ್ತಿದೆ. ವ್ಯಾಪಾರದ ದೃಷ್ಟಿಯಿಂದ ಕೋಳಿಸಾಕಣೆಯನ್ನು ಒಂದು ದೊಡ್ಡ ಉದ್ಯಮವಾಗಿಟ್ಟುಕೊಂಡಿರುವವರು ಹಲವರು ಮಾತ್ರ. ಹಳ್ಳಿಗಳಲ್ಲಿ ಹಾಗೂ ಪಟ್ಟಣಗಳಲ್ಲಿ ಅಲ್ಪ ಪ್ರಮಾಣದಲ್ಲಿ ಉತ್ಪಾದನೆಯಾಗುವ ಮೊಟ್ಟೆಗಳನ್ನು ಅಲ್ಲಲ್ಲೇ ಮಾರುತ್ತಾರೆ. ಆದರೆ ಹೆಚ್ಚಿನ ಪ್ರಮಾಣದಲ್ಲಿ ಕೋಳಿಗಳು ಮತ್ತು ಮೊಟ್ಟೆಗಳು ಮಾರಾಟವಾಗಬೇಕಾದರೆ ಅವುಗಳನ್ನು ತಿನ್ನುವ, ಕೊಳ್ಳುವ ಮಂದಿ ಸುತ್ತಮುತ್ತಲಿರಬೇಕು; ಮಾಂಸಾಹಾರಿ ಹೋಟೆಲುಗಳಿರಬೇಕು; ಆಸ್ಪತ್ರೆಗಳು ಕಾರ್ಖಾನೆಗಳು ಸಮೀಪವಿರಬೇಕು.

ಮೊಟ್ಟೆಗಳನ್ನು ಕೋಳಿಸಾಕಣೆಗಾರರು ತಾವೇ ನೇರವಾಗಿ ಗಿರಾಕಿಗಳಿಗೆ ಮಾರಬಹುದು ಇಲ್ಲವೇ ಮೊಟ್ಟೆ ಮಾರಾಟಗಾರರಿಗೆ ಮಾರಾಟಮಾಡಬಹುದು ಇಲ್ಲವೆ, ಸಹಕಾರ ಸಂಘಗಳಿಗೆ ಪೂರೈಸಬಹುದು. ಮೊಟ್ಟೆಗಳ ಮಾರಾಟ ಕಾರ್ಯಕ್ಕೆ ಈ ಕೆಳಗಿನ ನಾಲ್ಕು ಅಂಶಗಳು ಬಹುಮುಖ್ಯ:

1) ಮೊಟ್ಟೆಗಳ ಸಂಗ್ರಹಣೆ
2) ಶೇಖರಣೆ
3) ಸಾರಿಗೆ ಸೌಲಭ್ಯ
4) ಪ್ರಚಾರಕಾರ್ಯ

ಮೊಟ್ಟೆಗಳ ಸಂಗ್ರಹಣೆ

ಕೋಳಿಮೊಟ್ಟೆಗಳು ಉತ್ತಮ ದರ್ಜೆಯವುಗಳಾಗಿದ್ದರೆ ಅವುಗಳಿಗೆ ಬೇಡಿಕೆಯೂ ಹೆಚ್ಚು, ಬೆಲೆಯೂ ಹೆಚ್ಚು, ಮಾರಾಟವೂ ಸುಲಭ. ಆದ್ದರಿಂದ ಕೋಳಿಸಾಕಣೆಗಾರರು ಶುಚಿಯಾದ ಹಾಗೂ ಆಗ ತಾನೇ ಸಂಗ್ರಹಿಸಿದ ಶ್ರೇಷ್ಠಮಟ್ಟದ ಮೊಟ್ಟೆ

ಗಳನ್ನು ಗಿರಾಕಿಗಳಿಗೆ ಮಾರಬೇಕು; ದಿನಕ್ಕೆ ಮೂರು ನಾಲ್ಕು ಬಾರಿ ಕೋಳಿ ಮನೆಗಳಿಂದ ಮೊಟ್ಟೆಗಳನ್ನು ಸಂಗ್ರಹಿಸಬೇಕು. ಅವುಗಳನ್ನು ತಂಪಾದ ಸ್ಥಳಗಳಲ್ಲಿ ಶೇಖರಿಸಿಡಬೇಕು. ಯಾವಾಗಲೂ ಅವುಗಳ ತುದಿ ಕೆಳಗೆ ಬರುವಂತೆ ಜೋಡಿಸಿಡ ಬೇಕು. ಮೊಟ್ಟೆಗಳಿಗೆ ಕೊಳೆ ಅಂಟಿಕೊಂಡಿದ್ದರೆ ತೇವದ ಬಟ್ಟೆಯಿಂದ ಶುಚಿಮಾಡ ಬೇಕು. ಒಡೆದ, ಸೀಳಿದ, ಕೆಟ್ಟುಹೋದ ಮೊಟ್ಟೆಗಳನ್ನು ಬೇರೆ ತೆಗೆಯಬೇಕು. ಗಾತ್ರ ಹಾಗೂ ಉತ್ತಮ ಒಳ ಗುಣಮಟ್ಟದ ಮೇಲೆ ಮೊಟ್ಟೆಗಳನ್ನು ಬೇರೆ ಬೇರೆಯಾಗಿ ವಿಂಗಡಿಸಬೇಕು.

ಮೊಟ್ಟೆಗಳು ಒಡೆಯುವುದು, ಕೆಡುವುದು, ಇವೇ ಮುಂತಾದ ಕಾರಣ ಗಳಿಂದಾಗಿ ಕೋಳಿಸಾಕಣೆಗಾರರಿಗೂ ಮಾರಾಟಗಾರರಿಗೂ ಆಗುವ ನಷ್ಟ ಬಹಳ. ಆದ್ದರಿಂದ ಮೊಟ್ಟೆಗಳನ್ನು ಇಡುವಾಗ, ಸಾಗಿಸುವಾಗ ಅವು ಒಡೆದುಹೋಗದಂತೆ ಜಾಗರೂಕತೆ ವಹಿಸಬೇಕು. ದೂರ ಪ್ರದೇಶಗಳಿಗೆ ಮೊಟ್ಟೆಗಳನ್ನು ಸಾಗಿಸುವಾಗ ಅವುಗಳನ್ನು ಸರಿಯಾದ ರೀತಿಯಲ್ಲಿ ಜೋಪಾನಮಾಡಿ ಕಳುಹಿಸಬೇಕು. ಇದಕ್ಕಾ ಗಿಯೇ ವಿಶೇಷ ರೀತಿಯ ಪೆಟ್ಟಿಗೆಗಳು ದೊರೆಯುತ್ತವೆ. ಮೊಟ್ಟೆಗಳು ಒಂದ ಕ್ಕೊಂದು ತಗುಲಿ ಒಡೆದುಹೋಗದಂತೆ ಮೊಟ್ಟೆಯಾಕಾರದ ಗುಣಿಗಳಿರುವ ರಟ್ಟಿನ ಅಥವಾ ಪ್ಲಾಸ್ಟಿಕ್ ಹಲಗೆಗಳನ್ನು ಉಪಯೋಗಿಸಬಹುದು. ಮೊಟ್ಟೆಗಳನ್ನು ಚೆನ್ನಾಗಿ ಪ್ಯಾಕ್ ಮಾಡಿಯಾದ ಮೇಲೆ ಅದಕ್ಕೆ ಗುರುತಿನ ಚೀಟಿ ಅಂಟಿಸಬೇಕು.

ಶೇಖರಣೆ

ಮೊಟ್ಟೆಗಳನ್ನು ಹೆಚ್ಚು ಕಾಲ ಕೆಡದಂತೆ ಇಡುವುದು ಕಷ್ಟ. ಮೊಟ್ಟೆಗಳನ್ನು ಚಳಿಗಾಲದಲ್ಲಿ 10–15 ದಿನಗಳವರೆಗೂ, ಬೇಸಿಗೆ ಕಾಲದಲ್ಲಿ ಒಂದು ವಾರದವರೆಗೂ ಇಡಬಹುದಷ್ಟೇ. ಅದಕ್ಕಿಂತಲೂ ಹೆಚ್ಚು ಕಾಲ ಇಟ್ಟರೆ ಮೊಟ್ಟೆಗಳು ಕೆಡುತ್ತವೆ. ಕೆಲವುವೇಳೆ ಅಂದರೆ, ಮೊಟ್ಟೆ ಉತ್ಪಾದನೆ ಹೆಚ್ಚಾಗಿರುವಾಗ, ಮೊಟ್ಟೆಗಳು ಮಾರಾಟ ವಾಗದಿದ್ದಾಗ, ಕೋಳಿಸಾಕಣೆಗಾರರೂ ಮೊಟ್ಟೆ ಮಾರಾಟಗಾರರೂ ತಾತ್ಕಾಲಿಕವಾಗಿ ಮೊಟ್ಟೆಗಳನ್ನು ಕೆಡದಂತೆ ಸಂರಕ್ಷಿಸಿ ಇಡಬೇಕಾಗುತ್ತದೆ. ಅದೇ ರೀತಿ ಬಳಕೆದಾರರೂ ಸಹ ಮೊಟ್ಟೆಗಳ ಬೆಲೆ ಇಳಿದಿರುವಾಗ ಹಾಗೂ ಮೊಟ್ಟೆಗಳ ಅಭಾವವಿರುವಾಗ ಅವುಗಳನ್ನು ಕೊಂಡುತಂದು ಸ್ವಲ್ಪ ಹೆಚ್ಚು ಕಾಲ ಕೆಡದಂತೆ ಶೇಖರಿಸಿಡಬೇಕಾಗುತ್ತದೆ. ಮೊಟ್ಟೆಗಳು ಕೆಡದಂತೆ ಶೇಖರಿಸಿಡಲು ಹಲವಾರು ವೈಜ್ಞಾನಿಕ ವಿಧಾನಗಳಿವೆ. ಈ ವಿಧಾನಗಳಿಂದ ಮೊಟ್ಟೆಗಳನ್ನು ಹೆಚ್ಚುಕಾಲ ಇಡಲು ಸಾಧ್ಯ. ಅವು ಯಾವುವೆಂದರೆ: 1) ಸೋಡಿಯಂ ಸಿಲಿಕೇಟ್ ವಿಧಾನ, 2) ಸುಣ್ಣದ ನೀರಿನ ವಿಧಾನ, 3) ಎಣ್ಣೆ ಲೇಪನ ವಿಧಾನ, 4) ಕಾಗದ ಸುತ್ತುವಿಕೆ, 5) ಶೈತ್ಯಾಗಾರ.

1. ಸೋಡಿಯಂ ಸಿಲಿಕೇಟ್ ವಿಧಾನ: ಇದು ಒಂದು ರೀತಿಯ ಹಳೆಯ ವಿಧಾನ. ಇಲ್ಲಿ ಮನೆಗಳಲ್ಲೇ ಮೊಟ್ಟೆಗಳನ್ನು ಕೆಡದಂತೆ ಇಡಬಹುದು. ಈ

ವಿಧಾನದಲ್ಲಿ ಸ್ವಲ್ಪ ಸಂಖ್ಯೆಯಲ್ಲಿ ಮಾತ್ರ ಮೊಟ್ಟೆಗಳನ್ನು ಶೇಖರಿಸಿಡಬಹುದು. ಇದಕ್ಕಾಗಿ ಶೇಕಡಾ 10ರ ಸೋಡಿಯಂ ಸಿಲಿಕೇಟ್ ದ್ರಾವಣ ಬಳಸಲಾಗುತ್ತದೆ. ದ್ರಾವಣವನ್ನು ಚೆನ್ನಾಗಿ ಕಲಕಿ ಕೂಡಲೇ ಅದರಲ್ಲಿ ತಿನ್ನುವ(ಅಫಲೀಕೃತ) ಮೊಟ್ಟೆಗಳನ್ನು ಮುಳುಗಿಸಿಡಬೇಕು

2. ಸುಣ್ಣದ ನೀರಿನ ವಿಧಾನ : ಮೊಟ್ಟೆಗಳನ್ನು ಶೇಖರಿಸಿಡಲು ಸುಣ್ಣದ ನೀರು ಒಂದು ಉತ್ತಮ ವಸ್ತು. ಒಂದು ಕಿಲೋಗ್ರಾಂ ಸುಣ್ಣಕಲ್ಲಿಗೆ ಸುಮಾರು ನಾಲ್ಕು ಕಿಲೋಗ್ರಾಂನಷ್ಟು ನೀರನ್ನು ಸೇರಿಸಿ ಒಂದು ರಾತ್ರಿಯೆಲ್ಲಾ ಇಡಬೇಕು. ಮಾರು ದಿನ ಅದರಿಂದ ತಿಳಿನೀರನ್ನು ಒಂದು ಪಾತ್ರೆಗೆ ಬಗ್ಗಿಸಿಕೊಂಡು ಆ ನೀರಿನಲ್ಲಿ ಮೊಟ್ಟೆಗಳನ್ನು 18 ಗಂಟೆಗಳ ಕಾಲ ಇಡಬೇಕು. ಈ ವಿಧಾನದಲ್ಲಿ ಕ್ಯಾಲ್ಸಿಯಂ ಆಕ್ಸೈಡ್ ಮೊಟ್ಟೆಗಳ ಚಿಪ್ಪಿನ ಮೇಲೆ ಲೇಪನವಾಗುತ್ತದೆ.

3. ಎಣ್ಣೆಲೇಪನ ವಿಧಾನ : ಇದು ಒಂದು ಮಳಿಗೆ ಹಾಗೂ ಮನೆಯಲ್ಲಿ ಅನುಸರಿಸಲು ಸಾಧ್ಯವಾಗುವ ವಿಧಾನ. ಈ ವಿಧಾನದಿಂದ ಮೊಟ್ಟೆಗಳನ್ನು ಹೆಚ್ಚು ಕಾಲ ಉತ್ತಮ ಸ್ಥಿತಿಯಲ್ಲಿ ಇಡಬಹುದು. ಇದಕ್ಕಾಗಿ ಖನಿಜದೆಣ್ಣೆಯನ್ನು ಬಳಸಬೇಕು. ಇದು ಬಣ್ಣರಹಿತ, ವಾಸನೆರಹಿತ, ರುಚಿರಹಿತ ಎಣ್ಣೆ. ಈ ಎಣ್ಣೆಯನ್ನು ಮೊಟ್ಟೆಗಳ ಮೇಲೆ ಲೇಪಿಸಬಹುದು ಅಥವಾ ಚಿಮುಕಿಸಬಹುದು. ಮೊಟ್ಟೆಗಳಿಗೆ ಲೇಪಿಸುವ ಎಣ್ಣೆ ಮೊಟ್ಟೆಯಿಂದ ಇಂಗಾಲಾಮ್ಲ ಹಾಗೂ ತೇವಾಂಶ ಹೊರಬರದಂತೆ ತಡೆಯುತ್ತದೆ. ಮೊಟ್ಟೆ ಚಿಪ್ಪಿನ ಸೂಕ್ಷ್ಮರಂಧ್ರಗಳ ಮೂಲಕ ಹೊರಗಿನಿಂದ ಒಳಗೆ ಏಕಾಣುಜೀವಿಗಳು. ಇತರ ವಾಸನೆಗಳು ಹೋಗದಂತೆ ತಡೆಯುತ್ತದೆ. ಎಣ್ಣೆ ಮೊಟ್ಟೆಗಳ ಆಂತರಿಕ ಗುಣಮಟ್ಟವನ್ನು ಕಾಪಾಡುತ್ತದೆ.

4. ಕಾಗದ ಸುತ್ತುವಿಕೆ : ಸೂಕ್ಷ್ಮವಾದ, ತೆಳುವಾದ, ಪಾರದರ್ಶಕವಾದ.

ಸಾಕಷ್ಟು ಗಟ್ಟಿಯಾದ ಮತ್ತು ಅನಿಲಗಳು ಹಾಗೂ ತೇವಾಂಶವನ್ನು ತಡೆಯುವ ಕಾಗದಗಳಿಂದ ಮೊಟ್ಟೆಗಳನ್ನು ಸುತ್ತಿಡುವುದರಿಂದ ಅವು ಹೆಚ್ಚು ಕಾಲ ಕೆಡದ ಹಾಗೆ ಶೇಖರಿಸಿಡಬಹುದು. ಪಾಲಿಥೀನ್, ಸೆಲೋಫೇನ್ ಇವೇ ಮುಂತಾದುವು ಅಂತಹ ಕಾಗದಗಳು.

5. ಶೈತ್ಯಾಗಾರ : ಈ ವಿಧಾನದಲ್ಲಿ ಮೊಟ್ಟೆಗಳನ್ನು ಕೆಳಕಾಣಿಸಿದ ರೀತಿಯಲ್ಲಿ ಸಂರಕ್ಷಿಸಿಡಬಹುದು:

1) ಕೋಳಿ ಫಾರ್ಮ್‌ಗಳಲ್ಲಿ 50°-55°F. ಗಳಲ್ಲಿ ಮೊಟ್ಟೆಗಳನ್ನು ಶೇಖರಿಸಿಡಬಹುದು.

2) ಮನೆಗಳಲ್ಲಿ - 40°-50 F. ಗಳಲ್ಲಿ ಶೇಖರಿಸಿಡಬಹುದು.

3) 31ಂ-33ಂF. ಶೈತ್ಯಾಗಾರದಲ್ಲಿ ಶೇಕಡಾ 75-85 ಆರ್ದ್ರತೆಯಲ್ಲಿ 8 ತಿಂಗಳ ಕಾಲ ಇಡಬಹುದು.

4) ಫಲವತ್ತು ಮೊಟ್ಟೆಗಳ (ಮರಿಮಾಡಲು) ವಿಷಯದಲ್ಲಾದರೆ 55ಂ-60ಂF. ಗಳಲ್ಲಿ ಶೇಕಡಾ 75 ಆರ್ದ್ರತೆಯಲ್ಲಿ 7 ದಿನಗಳವರೆಗೆ ಕೆಡದಂತೆ ಇಡಬಹುದು.

ಅನುಕೂಲವಿರುವವರು ಮೊಟ್ಟೆಗಳನ್ನು ರೆಫ್ರಿಜೆರೇಟರ್(ಶೀತಕ)ನಲ್ಲಿ ಇಟ್ಟಿರಬಹುದು. ಮೊಟ್ಟೆಮಾರಾಟ ಸಂಘಗಳವರೂ ಒಂದೊಂದು ಕೇಂದ್ರಗಳಲ್ಲಿ ಮೊಟ್ಟೆಗಳನ್ನು ಶೇಖರಿಸಿಡಲು ಶೈತ್ಯಾಗಾರಗಳ ವ್ಯವಸ್ಥೆ ಮಾಡಿಕೊಳ್ಳಬಹುದು.

ಕೋಳಿ ಮಾರಾಟ

ರುಚಿಯಾದ ಮಾಂಸಕ್ಕೆ ಹೆಸರಾದುದು ಕೋಳಿ. ಆದ್ದರಿಂದ ಇದಕ್ಕೆ ಮಾಂಸಾಹಾರಿಗಳಿಂದ ಸದಾ ಬೇಡಿಕೆ. ಹಳ್ಳಿಗಳಲ್ಲಿ ಕೋಳಿಸಾಕಣೆಗಾರರು ಮಾಂಸಕ್ಕಾಗಿ ಕೋಳಿಗಳನ್ನು ಅಲ್ಲಲ್ಲೇ ಮಾರಿಬಿಡುತ್ತಾರೆ. ಕೆಲವರು ತಾವೇ ಸಂತೆ ಇಲ್ಲವೇ ಮಾರುಕಟ್ಟೆಗೆ ಕೊಂಡೊಯ್ದು ಮಾರುತ್ತಾರೆ. ಇನ್ನು ಕೆಲವುವೇಳೆ ಕೋಳಿಗಳನ್ನು ಸಾಕಲು ತಮಗೆ ಹೆಚ್ಚೆನಿಸಿದಾಗ ಅಥವಾ ಹಣದ ಅವಶ್ಯಕತೆ ಇದ್ದಾಗ ಮಾರುತ್ತಾರೆ. ಇವು ಮಾಂಸಾಕ್ಕಾಗಿಯೆ ಬೆಳೆಸಿದ ಶ್ರೇಷ್ಠಮಟ್ಟದ ಕೋಳಿಗಳಲ್ಲ; ಹುಂಜ. ಕೀಳ್ಮಟ್ಟದ ಕೋಳಿ, ಮೊಟ್ಟೆ ಉತ್ಪಾದನೆ ಕಡಮೆಯಾದ ಕೋಳಿ ಇಂಥವುಗಳು; ಅವರಿಗೆ ಬಂದಷ್ಟೇ ಲಾಭ ಸಾಕು. ಸಾಮಾನ್ಯವಾಗಿ ಇವೆಲ್ಲವೂ ದೇಸೀ ಕೋಳಿಗಳು. ಇದೇ ಜೊತೆಗ ಮಾಂಸಕ್ಕಾಗಿಯೇ ಸಾಕಿದ ಮಾಂಸದ ತಳಿ ಕೋಳಿಗಳನ್ನು ಮಾರಲು ಸಾಧ್ಯವಿಲ್ಲ. ಈ ರೀತಿಯ ಮಾರಾಟದಿಂದ ಮಾಂಸದತಳಿ ಕೋಳಿಸಾಕಣೆಗಾರರಿಗೆ ಒಂದು ಬಲವಾದ ಪೆಟ್ಟು. ವಿದೇಶಗಳಲ್ಲಿರುವಂತೆ ನಮ್ಮಲ್ಲಿ ಮಾಂಸದ ಕೋಳಿ ಮಾರಾಟಕ್ಕೆ ವಿಶೇಷ ನಿಯಮವಿಲ್ಲದಿದ್ದರೂ ಈಗೀಗ ಅದಕ್ಕೆ ಹೆಚ್ಚು ಪ್ರೋತ್ಸಾಹ ದೊರೆಯುತ್ತಿದೆ. ಮಾರಾಟಮಾಡುವ ಮಾಂಸದ ಕೋಳಿಗಳನ್ನು ಎರಡು ವರ್ಗಗಳಲ್ಲಿ ವಿಂಗಡಿಸಬಹುದು; 1) ಸಜೀವ ಕೋಳಿ. 2) ಸಂಸ್ಕರಿಸಿದ, ಕೊಯ್ದು, ಶುಚಿಮಾಡಿ ಸಿದ್ಧಪಡಿಸಿದ ಕೋಳಿ. ಆರೋಗ್ಯದಿಂದಿರುವ, ಮಾಂಸ ಹಾಗೂ ಕೊಬ್ಬಿನಿಂದ ಮೈಗೂಡಿಕೊಂಡಿರುವ, ಯಾವ ಲೋಪದೋಷಗಳಿಲ್ಲದ ಕೋಳಿಗಳಿಗೆ ಬೆಲೆಯೂ ಹೆಚ್ಚು, ಬೇಡಿಕೆಯೂ ಹೆಚ್ಚು. ಸಂಸ್ಕರಿಸಿದ ಕೋಳಿಯ ವಿಷಯದಲ್ಲಿ ಒಳ್ಳೆಯ ಮೈರಚನೆಯುಳ್ಳ, ಮಾಂಸ ಕೂಡಿಕೊಂಡಿರುವ, ಕೊಬ್ಬಿನಿಂದ ಮುಚ್ಚಿರುವ, ಕಡಿತ, ಗಾಯಗಳಿಲ್ಲದ, ಪರಿದುಹೋಗದ, ಮುರಿದ ಮೂಳೆಗಳಿಲ್ಲದ, ತರಚಿಕೆಗಳಿಲ್ಲದ ಕೋಳಿಗಳಿಗೆ ಹೆಚ್ಚು ಬೆಲೆ.

ಮಾಂಸಾಹಾರಿಗಳಿರುವಲ್ಲಿ, ಮಾಂಸಾಹಾರಿ ಹೋಟೆಲುಗಳಿರುವಲ್ಲಿ ಮಾಂಸದ ಕೋಳಿಗಳಿಗೆ ಹೆಚ್ಚು ಬೇಡಿಕೆ. ವರ್ಷದ ಕೆಲವು ಕಾಲಗಳಲ್ಲಿ ಅವರಲ್ಲೂ ವಿಶೇಷವಾಗಿ ಕೆಲವು ಹಬ್ಬಗಳಲ್ಲಿ (ಕ್ರಿಸ್‌ಮಸ್, ರಂಜಾನ್, ಆಯುಧಪೂಜೆ, ಯುಗಾದಿಗಳಲ್ಲಿ) ಇದಕ್ಕೆ ಹೆಚ್ಚು ಬೇಡಿಕೆ.

ಅನುಬಂಧ 1

ಕೋಳಿಗಳಿಗೆ ಬರುವ ರೋಗಗಳನ್ನು ತಡಗಟ್ಟಲು ಬಳಸಲಾಗುವ ಕೆಲವು ಸಾಮಾನ್ಯ ಔಷಧಗಳು

ಅ.ಸಂ.	ಮಾರಾಟ ಹೆಸರು	ದೊರೆಯುವ ರೀತಿ	ಕೊಡಬೇಕಾದ ಪ್ರಮಾಣ	ಉಪಯೋಗಗಳು
1	2	3	4	5
1	ಆಂಪ್ರಾಲ್	500 ಗ್ರಾಮ್‌ಗಳು ಮತ್ತು 100 ಕಿಲೊಗ್ರಾಮ್ ಪ್ಯಾಕೆಟ್ಟುಗಳಲ್ಲಿ	100 ಕಿಲೊಗ್ರಾಮ್ ಮೇವಿಗೆ 50 ಗ್ರಾಮ್ ಸೇರಿಸಬೇಕು	ಕಾಕ್ಸಿಡಿಯಾ ರೋಗ ತಡಗಟ್ಟಲು
2	ಆಂಪ್ರಾಲ್ ಸಾಲ್	60ಗ್ರಾಮ್ ಮತ್ತು 600 ಗ್ರಾಮ್ ಪ್ಯಾಕೆಟ್ಟುಗಳಲ್ಲಿ	25ಲೀಟರ್ ನೀರಿಗೆ 30ಗ್ರಾಮ್ ಸೇರಿಸಬೇಕು	ಕಾಕ್ಸಿಡಿಯೋಸಿಸ್ ಕಾಯಿಲೆಯ ಚಿಕಿತ್ಸೆಗೆ
3	ಆಂಟೀಪಾರ್ (ದ್ರವ)	100 ಮಿಲಿಲೀಟರ್ ಮತ್ತು 450ಮಿಲಿಲೀಟರ್ ಸೀಸೆಗಳಲ್ಲಿ	ಒಂದು ಗ್ಯಾಲನ್ ನೀರಿಗೆ 20 ಲೀಟರ್ ಔಷಧ ಸೇರಿಸಿ ಅದನ್ನು ಮೂರು ದಿನ ಕೊಡಬೇಕು	ದುಂಡುಹುಳುಗಳ ಚಿಕಿತ್ಸೆಗೆ
4	ಆರೋಫ್ಯಾಕ್-2ಎ	500 ಗ್ರಾಮ್ ಮತ್ತು 20 ಕಿಲೊಗ್ರಾಮ್ ಪ್ಯಾಕೆಟ್ಟುಗಳಲ್ಲಿ	100 ಕಿಲೊಗ್ರಾಮ್ ತಿಂಡಿಗೆ 625 ಗ್ರಾಮ್ ಸೇರಿಸಬೇಕು	ಏಕಾಣುಜೀವಿ ರೋಗಗಳನ್ನು ತಡೆಗಟ್ಟಲು
5	ಆರೋಫ್ಯಾಕ್-10	5 ಕಿಲೊಗ್ರಾಮ್ ಪ್ಯಾಕೆಟ್‌ನಲ್ಲಿ	100 ಕಿಲೊಗ್ರಾಮ್ ಮೇವಿಗೆ 150 ಗ್ರಾಮ್	ಏಕಾಣುಜೀವಿ ರೋಗಗಳನ್ನು ತಡೆಗಟ್ಟಲು

6	ಆರಿಯೋಮೈಸಿನ್ ಸಾಲ್ಯುಬಲ್ ಪೌಡರ್	28 ಮತ್ತು 100 ಗ್ರಾಮ್ ಪ್ಯಾಕೆಟ್‌ಗಳಲ್ಲಿ		ಏಕಾಣುಜೀವಿ ರೋಗಗಳನ್ನು ತಡೆಗಟ್ಟಲು
7	ಆರಿಯೋಮೈಸಿನ್ ನ್ಯೂಟ್ರಿಷನಲ್ ಫಾರ್ಮುಲಾ	125, 500 ಮತ್ತು 100 ಗ್ರಾಮ್‌ಗಳಲ್ಲಿ	ಕಂಪನಿಯ ಸೂಚನೆಯ ಮೇರೆಗೆ	ಜೀವಸತ್ವ ಪೂರೈಕೆಗೆ ಮತ್ತು ಕೋಳಿಗಳಿಗೆ ಬೀಳುವ ಒತ್ತಡವನ್ನು ಕಡಮೆಮಾಡಲು
8	ಆಪಿಸಾಲ್ (ದ್ರಪ)	50 ಮತ್ತು 350 ಮಿಲಿ ಲೀಟರ್ ಸೀಸೆಗಳಲ್ಲಿ	ಕಂಪೆನಿಯ ಸೂಚನೆಯ ಮೇರೆಗೆ	ಶ್ವಾಸಾಂಗ ಸಂಬಂಧಿ ರೋಗಗಳ ಚಿಕಿತ್ಸೆಗೆ
9	ಎ.ಪಿ.ಎಫ್–100	5 ಕಿಲೊಗ್ರಾಮ್	ಕಂಪನಿಯ ಸೂಚನೆಯ ಮೇರೆಗೆ	ಜೀವಸತ್ವ–ಬಿ$_{12}$ ಪೂರಕ
10	ಬೈಪರಾನ್ ಫೀಡ್ ಸಪ್ಲಿಮೆಂಟ್	500 ಗ್ರಾಮ್ ಮತ್ತು 5 ಕಿಲೊಗ್ರಾಮ್	100 ಕಿಲೊಗ್ರಾಮ್ ಮೇವಿಗೆ 50 ಗ್ರಾಮ್ ಸೇರಿಸಬೇಕು	ಕಾಕ್ಸೀಡಿಯೋಸಿಸ್ ರೋಗ ತಡೆಗಟ್ಟಲು
11	ಬೈಪರಾನ್ ಸಾಲ್ಯುಬಲ್ ಗುಳಿಗೆ (ಮಾತ್ರೆ)ಗಳು	5X100 ಮಾತ್ರೆಗಳು	ಕುಡಿಯುವ ನೀರಿನಲ್ಲಿ ಒಂದು ಲೀಟರಿಗೆ ಒಂದು ಮಾತ್ರೆ; ಇದನ್ನು ಏಳು ದಿನಗಳು ಕುಡಿಸಬೇಕು	ಕಾಕ್ಸೀಡಿಯೋಸಿಸ್ ರೋಗ ಚಿಕಿತ್ಸೆಗೆ
12	ಕಾಡ್ರಿನಾಲ್	20 ಗ್ರಾಮ್	ಒಂದು ಲೀಟರ್ ಕುಡಿಯುವ ನೀರಿಗೆ 2 ಅಳತೆ, 3–5 ದಿನ ಕೊಡಬೇಕು	ಕಾಕ್ಸೀಡಿಯೋಸಿಸ್ ರೋಗ ಚಿಕಿತ್ಸೆಗೆ

1	2	3	4	5
13	ಕಾಂಪ್ಲೆಕ್ಸ್–ಬಿ–ಗ್ಲಾಕ್ಕೋ ದ್ರವ	460 ಮಿಲಿ ಲೀಟರ್	ದಿನವೊಂದಕ್ಕೆ 100ಕೋಳಿಗಳಿಗೆ 15 ಮಿಲಿಲೀಟರ್	ಬಿ–ಜೀವಸತ್ವ ಪೂರೈಸಲು
14	ಡಾಲ್ಟ್ ಡಸ್ಟ್	250 ಗ್ರಾಮ್	ಪುಡಿ ಉದುರಿಸುವುದು	ಮೈ ಮೇಲಿನ ಪರೋಪಜೀವಿಗಳನ್ನು ತಡೆಗಟ್ಟಲು
15	ಎಗ್ಗೋಮಿನ್ ಮಿನರಲ್ ಮಿಕ್ಸ್ಚರ್	1 ಮತ್ತು 25 ಕಿಲೊ ಗ್ರಾಮ್‌ಗಳಲ್ಲಿ	100 ಕಿಲೊಗ್ರಾಮ್ ಮೇವಿಗೆ 2–2.5 ಕಿಲೊ ಗ್ರಾಮ್ ಸೇರಿಸಬೇಕು	ಖನಿಜವಸ್ತು ಪೂರೈಸಲು
16	ಪ್ಯಾರಸಾಲ್	30 ಗ್ರಾಮ್	1 ಲೀಟರ್ ಕುಡಿಯುವ ನೀರಿಗೆ 1 ಗ್ರಾಮ್ ಸೇರಿಸಬೇಕು ಇದನ್ನು 10 ದಿನ ಕೊಡಬೇಕು	ಶ್ವಾಸಾಂಗ ಸಂಬಂಧಿ ಕಾಯಿಲೆಗಳು ಮತ್ತು ಸಾಲ್‌ಮೊನೆಲ್ಲಾ ಕಾಯಿಲೆಗಳ ಚಿಕಿತ್ಸೆಗೆ
17	ಎಂಬಾಜಿನ್‌ಫ್ರೀಮಿಕ್ಸ್	500 ಗ್ರಾಮ್ ಮತ್ತು 2 ಕಿಲೊಗ್ರಾಮ್	100 ಕಿಲೊಗ್ರಾಮ್ ಮೇವಿಗೆ 50 ಗ್ರಾಮ್	ಕಾಕ್ಸಿಡಿಯೋಸಿಸ್ ತಡೆಗಟ್ಟಲು
18	ಹೆಲ್‌ಮ್ಯಾಸಿಡ್ ಲಿಕ್ವಿಡ್ (ದ್ರವ)	450 ಮಿಲಿಲೀಟರ್ ಸೀಸೆ	ಕುಡಿಯುವ ನೀರಿನಲ್ಲಿ 100 ಕೋಳಿಗಳಿಗೆ 50 ಮಿಲಿಲೀಟರು	ದುಂಡುಹುಳು ಚಿಕಿತ್ಸೆಗೆ
19	ಹೋಸ್ಟಾಸೈಕ್ಲೀನ್	50 ಮತ್ತು 100 ಗ್ರಾಮ್‌ಗಳಲ್ಲಿ	1 ಲೀಟರ್ ನೀರಿಗೆ 1 ಗ್ರಾಮ್	ಏಕಾಣುಜೀವಿ ರೋಗಗಳ ಚಿಕಿತ್ಸೆಗೆ ಮತ್ತು ತಡೆಗಟ್ಟಲು

20	ಮೆಲಾಥಿಯಾನ್ (ಸೈಥಿಯನ್)	450 ಮಿಲಿಲೀಟರ್ ಸೀಸೆ, 50 ಮಿಲಿಲೀಟರ್, 5 ಲೀಟರ್ ಕ್ಯಾನ್	ಕಂಪನಿಯ ಸೂಚನೆಯ ಮೇರೆಗೆ	ಮೈಮೇಲಿನ ಪರೋಪಜೀವಿಗಳ ಚಿಕಿತ್ಸೆಗೆ
21	ನೆಪ್ಪಿನ್–50	500 ಗ್ರಾಮ್ ಮತ್ತು 5 ಕಿಲೊಗ್ರಾಮ್‌ಗಳಲ್ಲಿ	100 ಕಿಲೊಗ್ರಾಮ್ ಮೇವಿಗೆ 50 ಗ್ರಾಮ್ ನೀರು ಮತ್ತು 100 ಗ್ರಾಮ್ ಔಷಧ ಸೇರಿಸಬೇಕು	ಕೋಳಿಗಳ ಒಳ್ಳೆಯ ಬೆಳವಣಿಗೆಗೆ ಮತ್ತು ಮೊಟ್ಟೆ ಉತ್ಪಾದನೆಗೆ
22	ನೆಪ್ಪಿನ್–200	5 ಕಿಲೊಗ್ರಾಮ್ ಮತ್ತು 20 ಕಿಲೊಗ್ರಾಮ್‌ಗಳಲ್ಲಿ	100 ಕಿಲೊಗ್ರಾಮ್ ಮೇವಿಗೆ 25 ಗ್ರಾಮ್	ಕೋಳಿಗಳ ಒಳ್ಳೆಯ ಬೆಳವಣಿಗೆಗೆ ಮತ್ತು ಮೊಟ್ಟೆ ಉತ್ಪಾದನೆಗೆ
23	ನುವಿಮಿನ್	500 ಗ್ರಾಮ್ ಮತ್ತು 2.5 ಕಿಲೊಗ್ರಾಮ್‌ಗಳಲ್ಲಿ	100 ಕಿಲೊಗ್ರಾಮ್ ಮೇವಿಗೆ 100 ಗ್ರಾಮ್	ಜೀವಸತ್ವ ಮತ್ತು ಖನಿಜಾಂಶ ಒದಗಿಸಲು
24	ಪೈಪರೆಕ್ಸ್	30 ಮತ್ತು 500 ಗ್ರಾಮ್‌ಗಳಲ್ಲಿ	ನೀರಿನಲ್ಲಿ ಅಥವಾ ಮೇವಿನಲ್ಲಿ	ದುಂಡುಹುಳುಗಳ ಚಿಕಿತ್ಸೆಗೆ
25	ರೊವಿಮಿಕ್ AB₂D₃ ಫೀಡ್ ಸಪ್ಲಿಮೆಂಟ್	100 ಗ್ರಾಮ್ ಮತ್ತು 1 ಕಿಲೊಗ್ರಾಮ್‌ಗಳಲ್ಲಿ	100 ಕಿಲೊಗ್ರಾಮ್ ಮೇವಿಗೆ 25 ಗ್ರಾಮ್	ಜೀವಸತ್ವ ಪೂರಕ
26	ರೋವಿಬೀ ಫೀಡ್ ಸಪ್ಲಿಮೆಂಟ್	100 ಗ್ರಾಮ್ ಮತ್ತು 1 ಕಿಲೊಗ್ರಾಮ್‌ಗಳಲ್ಲಿ	100 ಕಿಲೊಗ್ರಾಮ್ ಮೇವಿಗೆ 20 ಗ್ರಾಮ್	ಜೀವಸತ್ವ ಪೂರಕ

1	2	3	4	5
27	ರೋವಿಮಿಕ್ಸ್ 'A' ಓರಲ್ (ಬಾಯಲ್ಲಿ ಕೊಡುವುದು)	100 ಮಿಲಿಲೀಟರ್	ನೀರಿನಲ್ಲಿ (ಪ್ರಮಾಣ, ಕಂಪನಿ ಸೂಚನೆಯ ಮೇರೆಗೆ)	ಜೀವಸತ್ವ ಪೂರಕ
28	ರೋವಿಸಾಲ್ 'A' ಓರಲ್ (ಬಾಯಲ್ಲಿ ಕೊಡುವುದು)	100 ಮತ್ತು 500 ಮಿಲಿಲೀಟರ್‌ಗಳಲ್ಲಿ	ನೀರಿನಲ್ಲಿ (ಪ್ರಮಾಣ, ಕಂಪನಿ ಸೂಚನೆಯ ಮೇರೆಗೆ)	ಜೀವಸತ್ವ ಪೂರಕ
29	ರೋಮಿನಾಲ್ $A, D_3, E, C,$ ಓರಲ್ (ಬಾಯಲ್ಲಿ ಕೊಡುವುದು)	100 ಮತ್ತು 500 ಮಿಲಿಲೀಟರ್‌ಗಳಲ್ಲಿ	ನೀರಿನಲ್ಲಿ (ಪ್ರಮಾಣ, ಕಂಪನಿ ಸೂಚನೆಯ ಮೇರೆಗೆ)	ಜೀವಸತ್ವ ಪೂರಕ
30	ಸಾಪರ್‌ಸಾಲ್	100 ಮತ್ತು 500 ಮಿಲಿ ಲೀಟರ್‌ಗಳಲ್ಲಿ	ನೀರಿನಲ್ಲಿ (ಪ್ರಮಾಣ, ಕಂಪನಿ ಸೂಚನೆಯ ಮೇರೆಗೆ)	ದುಂಡುಹುಳುಗಳ ಚಿಕಿತ್ಸೆಗೆ
31	ಸ್ಟೆಕ್ಲಿನ್ ಎಗ್ ಫಾರ್ಮುಲ	30, 125 ಮತ್ತು 500 ಗ್ರಾಮ್‌ಗಳಲ್ಲಿ	ನೀರಿನಲ್ಲಿ (ಪ್ರಮಾಣ, ಕಂಪನಿ ಸೂಚನೆಯ ಮೇರೆಗೆ)	ಜೀವಸತ್ವಪೂರಕ, ವಿಕಾಣುಜೀವಿ ರೋಗ ತಡೆಗಟ್ಟಲು
32	ಸ್ಟೆಕ್ಲಿನ್ ಸಾಲ್ಯುಬಲ್ ಗ್ರ್ಯಾನ್ಯೂಲ್ಸ್	30 ಗ್ರಾಮ್	ನೀರಿನಲ್ಲಿ (ಪ್ರಮಾಣ, ಕಂಪನಿ ಸೂಚನೆಯ ಮೇರೆಗೆ)	ವಿಕಾಣುಜೀವಿ ರೋಗಗಳನ್ನು ತಡೆಗಟ್ಟಲು ಮತ್ತು ಚಿಕಿತ್ಸೆಗೆ

33	ಸಲ್‌ಮೆಟ್	120 ಮಿಲಿಲೀಟರ್ ಮತ್ತು 450 ಮಿಲಿ	4 ಲೀಟರ್ ಕುಡಿಯುವ ನೀರಿಗೆ 30 ಮಿಲಿಲೀಟರ್	ಏಕಾಣುಜೀವಿ ರೋಗಗಳು ಮತ್ತು ಕಾಕ್ಸೀಡಿಯೋಸಿಸ್ ರೋಗ ಚಿಕಿತ್ಸೆಗೆ
34	ಸುಮಥಿಯಾನ್	100, 250 ಮಿಲಿಲೀಟರ್ ಮತ್ತು 20 ಲೀಟರ್‌ಗಳಲ್ಲಿ	ಕಂಪನಿಯ ಸೂಚನೆಯ ಮೇರೆಗೆ	ಪೈಮೇಲಿನ ಪರಾವಲಂಬಿ ಜೀವಿಗಳಿಗೆ
35	ಟೆರಾಮೈಸಿನ್ ಪೌಲ್ಟ್ರಿ ಫಾರ್ಮುಲ	30, 125 ಮತ್ತು 500 ಗ್ರಾಮ್‌ಗಳಲ್ಲಿ	9 ಲೀಟರ್ ಕುಡಿಯುವ ನೀರಿಗೆ 1ಟೀ ಚಮಚೆಯಷ್ಟು	ಏಕಾಣುಜೀವಿ ರೋಗಗಳನ್ನು ತಡೆಗಟ್ಟಲು ಮತ್ತು ಚಿಕಿತ್ಸೆಗೆ
36	ಟೆರಾಮೈಸಿನ್ ಎಗ್ ಫಾರ್ಮುಲ	30, 125 ಮತ್ತು 500 ಗ್ರಾಮ್‌ಗಳಲ್ಲಿ	ಕಂಪನಿಯ ಸೂಚನೆಯ ಮೇರೆಗೆ	ಜೀವಸತ್ವ ಪೂರೈಕೆ ಒತ್ತಡದಿಂದ ಸಂರಕ್ಷಿಸಲು
37	ಟಿ. ಎಂ–5 ಫೀಡ್ ಸಪ್ಲಿಮೆಂಟ್	500 ಗ್ರಾಮ್, 5 ಮತ್ತು 20 ಕಿಲೊಗ್ರಾಮ್‌ಗಳಲ್ಲಿ	500 ಗ್ರಾಮ್ 100 ಕೆ.ಜಿ. ಆಹಾರಕ್ಕೆ	ಒಳ್ಳೆಯ ಬೆಳವಣಿಗೆಗೆ ಮತ್ತು ಮೊಟ್ಟೆ ಉತ್ಪಾದನೆಗೆ
38	ವಿಟಾಬ್ಲೆಂಡ್ A, B_2, D_3	100 ಗ್ರಾಮ್, 500 ಗ್ರಾಮ್ ಮತ್ತು 1 ಕಿಲೊಗ್ರಾಮ್	100 ಗ್ರಾಮ್ ಆಹಾರಕ್ಕೆ 20 ಗ್ರಾಮ್	ಜೀವಸತ್ವ ಪೂರೈಕೆಗೆ
39	ವಿಟಾಬ್ಲೆಂಡ್–ಎ ಫಾರ್ಟೆ	100, 500 ಮಿಲಿಲೀಟರ್ ಮತ್ತು 1 ಲೀಟರ್‌ಗಳಲ್ಲಿ	ಕಂಪನಿಯ ಸೂಚನೆಯ ಮೇರೆಗೆ	ಜೀವಸತ್ವ ಪೂರೈಕೆಗೆ
40	ವಿಟಾಬ್ಲೇಡ್ A, D_3 ಫಾರ್ಟೆ	100, 500 ಮಿಲಿಲೀಟರ್ ಮತ್ತು 1 ಲೀಟರ್‌ಗಳಲ್ಲಿ	ಕಂಪನಿಯ ಸೂಚನೆಯ ಮೇರೆಗೆ	ಜೀವಸತ್ವ ಪೂರೈಕೆಗೆ
41	ವಿಟಾಬ್ಲೇಡ್– WM ಫಾರ್ಟೆ	100, 500 ಮಿಲಿಲೀಟರ್ ಮತ್ತು 1 ಲೀಟರ್‌ಗಳಲ್ಲಿ	ಕಂಪನಿಯ ಸೂಚನೆಯ ಮೇರೆಗೆ	ಜೀವಸತ್ವ 'ಎ' ಪೂರೈಕೆಗೆ

ಅನುಬಂಧ 2

ಕೋಳಿ ಆಹಾರ ತಯಾರಕರು

1. ಕರ್ನಾಟಕ ಸ್ಟೇಟ್ ಅಗ್ರೋ ಕಾರ್ನ್ ಪ್ರೊಡಕ್ಷನ್ (ಲಿ.)
   ಅಗ್ರೋ ಫೀಡ್ಸ್ ವಿಭಾಗ, ಪೋಸ್ಟ್ ಬಾಕ್ಸ್ ನಂ. 2479,
   ಹೆಬ್ಬಾಳ, **ಬೆಂಗಳೂರು-560 024**

2. ಕೋಮರ್ಲಾ ಏಜೆನ್ಸೀಸ್,
   ಶಂಖು ಬ್ರಾಂಡ್ ಪೌಲ್ಟ್ರಿ ಫೀಡ್ಸ್,
   53, ಹಳೆ ತರಗುಪೇಟೆ, **ಬೆಂಗಳೂರು-560 053**

3. ಟಾಟಾ ಆಯಿಲ್ ಮಿಲ್ಸ್ ಕಂಪನಿ (ಲಿಮಿಟೆಡ್,)
   ಅನಿಮಲ್ ಫೀಡ್ ಪ್ಲಾಂಟ್,
   ಮಾಯಾ ಇಂಡಸ್ಟ್ರಿಯಲ್ ಎಸ್ಟೇಟ್,
   10ನೇ ಮೈಲಿಕಲ್ಲು, ಮದವರ,
   ಬೆಂಗಳೂರು–ತುಮಕೂರು ರಸ್ತೆ,
   ಬೆಂಗಳೂರು

4. ಬ್ರಹ್ಮಪ್ಪ ತವಣಪ್ಪನವರ್ (ಪ್ರೈ) ಲಿಮಿಟೆಡ್,
   ಪೋಸ್ಟ್ ಬಾಕ್ಸ್ ನಂ. 7, **ದಾವಣಗೆರೆ-1**

5. ಮೈಸೂರು ಫೀಡ್ಸ್ ಬ್ಯಾಸ್ಕೆಟ್ ಬ್ರಾಂಡ್ ಲಿಮಿಟೆಡ್,
   283-284, ಹಳೆ ತರಗುಪೇಟೆ, **ಬೆಂಗಳೂರು-560 053**

6. ಯುರನಾ ಫೀಡ್ಸ್ ಅಂಡ್ ಫಾರ್ಮ್ಸ್,
   ಪೋಸ್ಟ್ ಬಾಕ್ಸ್ 2, ಇಂಡಸ್ಟ್ರಿಯಲ್ ಎಸ್ಟೇಟ್,
   ಹುಬ್ಬಳ್ಳಿ

7. ರವಿ ವೆಜಿಟೆಬಲ್ ಆಯಿಲ್ ಇಂಡಸ್ಟ್ರೀಸ್,
   ದಾವಣಗೆರೆ

8. ಲಕ್ಷ್ಮಿ ಬ್ರಾಂಡ್ ಅನಿಮಲ್ ಫೀಡ್ಸ್ **ಜಾಮನದಾಸ್ ಮಾಧವಜಿ ಅಂಡ್ ಕೊ,**
ಎಂ. ಎಸ್. ರಾಮಯ್ಯ ಇಂಡಸ್ಟ್ರಿಯಲ್ ಎಸ್ಟೇಟ್,
ಗೋಕುಲ್ ಎಕ್ಸ್ಟೆನ್ಶನ್, **ಬೆಂಗಳೂರು-560 054**

9. 'ಸ್ಟಾರ್ ಬ್ರಾಂಡ್'
ಹಾ-ವ್ಯಾಲೀಸ್,
84, ಇಂಡಸ್ಟ್ರಿಯಲ್ ಸಬರ್ಬ್,
ಯಶವಂತಪುರ, **ಬೆಂಗಳೂರು**

10. ಸುಂದತ್ರ ಪೌಲ್ಟ್ರಿ ಫೀಡ್ಸ್,
ಇಂಡಸ್ಟ್ರಿಯಲ್ ಎಸ್ಟೇಟ್,
ಹುಬ್ಬಳ್ಳಿ

11. ಹಿಂದ್ ಲಿವರ್ ಪೌಲ್ಟ್ರಿ ಫೀಡ್ಸ್,
ನಂದಿ ಏಜೆನ್ಸೀಸ್, ಮೈನ್ ಗಾರ್ಡ್ ರಸ್ತೆ,
ಬೆಂಗಳೂರು-560 001

12. ಹುಲ್‌ಕೋಟಿ ಕೊ-ಅಪರೇಟಿವ್ ಕ್ಯಾಟಲ್ ಫೀಡ್ ಸಂಸ್ಕರಣ ಸೊಸೈಟಿ,
ಹುಲ್‌ಕೋಟಿ, ಗದಗ್ ತಾಲ್ಲೂಕು, ಧಾರವಾಡ ಜಿಲ್ಲೆ

ಅನುಬಂಧ 3

ಕೋಳಿ ಉಪಕರಣ ತಯಾರಕರು

1. ಆದರ್ಶ ಪೌಲ್ಟ್ರಿ ಫಾರಂ, ಸುಲ್ತಾನ್‌ಪಾಳ್ಯ, **ಬೆಂಗಳೂರು-560 006**

   ಉಪಕರಣಗಳು : ಕಾವುಕಾಪುಗೆಗಳು, ಮೆವುಣಿಕಗಳು, ಹಾಪರ್‌ಗಳು, ನೀರುಣಿಕಗಳು ಮುಂತಾದುವು.

2. ಅಜ್ರಾ ಪೌಲ್ಟ್ರಿ ಎಕ್ವಿಪ್‌ಮೆಂಟ್ಸ್, ನಂ. 1, ಮಿಲ್ಲರ್ ಟ್ಯಾಂಕ್‌ಬಂಡ್ ರಸ್ತೆ, **ಬೆಂಗಳೂರು-560 052**

   ಉಪಕರಣಗಳು : ಕಾವುಕಾಪುಗೆಗಳು, ಪಂಜರ (ಕೇಜ್)ಗಳು, ಆಹಾರ ಮಿಶ್ರಣ ಯಂತ್ರ(ಫೀಡ್ ಮಿಕ್ಸ್ಚರ್ಸ್)ಗಳು, ಆಹಾರ ಅರೆಯುವ ಯಂತ್ರಗಳು(ಫೀಡ್ ಗ್ರೈಂಡರ್ಸ್), ಕಾವು ಯಂತ್ರ(ಇನ್‌ಕ್ಯುಬೇಟರ್)ಗಳು, ನೀರುಣಿಕಗಳು, ಮುಂತಾದುವು.

3. ಸಿರುಜಿಯಾ ಡಿಲಕ್ಸ್ ಪ್ರೈವೇಟ್ ಲಿ, 1/30 ಪಾಂಥಿಯನ್ ರಸ್ತೆ, ಎಗ್‌ಮೋರ್, ಮದ್ರಾಸ್-8

   ಶಾಖೆ : ಬೆಂಗಳೂರು, ಮುನಿಮಾರಪ್ಪ ಗಾರ್ಡನ್ ಹೆಬ್ಬಾಳ, **ಬೆಂಗಳೂರು-560 024**

   ಉಪಕರಣಗಳು : ಕಾವುಕಾಪುಗಳು, ಪಂಜರಗಳು, ಕೊಕ್ಕು ತೆಗೆಯುವ ಸಲಕರಣೆ(ಡೀ ಬೀಕರ್ಸ್)ಗಳು, ಮೊಟ್ಟೆ ದರ್ಜೀಕರಣ ಯಂತ್ರ (ಎಗ್ ಗ್ರೇಡರ್)ಗಳು, ಮೆವುಣಿಕಗಳು, ಆಹಾರ ಅರೆಯುವ ಯಂತ್ರಗಳು, ಆಹಾರ ಮಿಶ್ರಣ ಯಂತ್ರಗಳು, ಗರಿಕೀಳುವ ಸಲಕರಣೆ(ಫೆದರ್‌ಪ್ಲಕರ್)ಗಳು, ಕಾವುಯಂತ್ರಗಳು, ನೀರು ಕುಡಿಸುವ ಸಾಧನಗಳು, ನೀರುಣಿಕಗಳು ಮುಂತಾದವು.

4. ವಯಾಳ್ ಪೌಲ್ಟ್ರಿ ಅಪ್ಲಯನ್ಸಸ್, ಡಬ್ಲ್ಯು. ಜಡ್. 16, ರಾಜ್‌ವಂತಿ ಗಾರ್ಡನ್, ನ್ಯೂಜೈಲ್ ರಸ್ತೆ, **ಹೊಸದಿಲ್ಲಿ-110 046**

ಉಪಕರಣಗಳು : ಕಾವುಕಾಪುಗಗಳು, ಪಂಜರಗಳು, ಕ್ಯಾಂಡಲರ್ಸ್, ಕೊಕ್ಕುತೆಗೆಯುವ ಸಲಕರಣೆ(ಡೀ ಬೀಕರ್ಸ್)ಗಳು, ಮೇವುಣಿಕಗಳು, ಕಾವುಯಂತ್ರಗಳು, ನೀರುಣಿಕಗಳು, ಫಲವತ್ತು ಮೊಟ್ಟೆ ಪರೀಕ್ಷಕಗಳು ಮುಂತಾದುವು.

5. ಡೈಮಂಡ್ ಪೌಲ್ಟ್ರಿ ಫಾರ್ಮ್, ಹೊಸಹಳ್ಳಿ, **ಬೆಂಗಳೂರು-560 040**

ಉಪಕರಣಗಳು : ಪಂಜರಗಳು

6. ಫಾರ್ಮಿಡ್ ಸರ್ವಿಸಸ್, ಜವಹರ್‌ನಗರ್, 99 ಯು.ಜಿ. **ದಿಲ್ಲಿ-7**

ಉಪಕರಣಗಳು : ಮೊಟ್ಟೆ ತುಂಬುವ ಪ್ಲಾಸ್ಟಿಕ್ ತಟ್ಟೆ (ಪ್ಲಾಸ್ಟಿಕ್ ಎಗ್ ಫಿಲರ್ ಪ್ಲೇಟ್)ಗಳು.

7. ಹಾರ್ಡ್‌ಕೇಸ್ ಇಂಜಿನಿಯರಿಂಗ್ ವರ್ಕ್ಸ್, ಲಾಲ್‌ಗಿ ಪ್ಟ್ಗಿ ಕಾಂಪೌಂಡ್, **ಮಹಾತ್ಮಗಾಂಧಿ ರಸ್ತೆ, ಸಿಕಂದರಾಬಾದ್**

ಉಪಕರಣಗಳು : ಆಹಾರ ಅರೆಯುವ ಯಂತ್ರಗಳು, ಆಹಾರ ಮಿಶ್ರಣ ಯಂತ್ರಗಳು, ಸ್ವಯಂಚಾಲಿತ ಮೊಟ್ಟೆ ವರ್ಗೀಕರಣ ಯಂತ್ರಗಳು, ಮೊಟ್ಟೆ ತೊಳೆಯುವ ಯಂತ್ರಗಳು, ಮೊಟ್ಟೆಗೆ ಲೇಪಿಸುವ ಎಣ್ಣೆ, ಎಲೆಕ್ಟ್ರಿಕ್ ಇನ್‌ಸಿನೆರೇಟರ್ (ವಿದ್ಯುತ್ ದಾಹಕ)ಗಳು.

8. ಕಿರಣ್ ಇಂಜಿನಿಯರಿಂಗ್ ವರ್ಕ್ಸ್, ಜಿ. ಟಿ. ರಸ್ತೆ, ಬಾಟಾಲ, ಗುರುದಾಸಪುರ ಜಿಲ್ಲೆ, ಪಂಜಾಬ್

ಉಪಕರಣಗಳು : ಗರಿಕೀಳುವ ಸಲಕರಣೆಗಳು, ಆಹಾರ ಅರೆಯುವ ಹಾಗೂ ಆಹಾರ ಮಿಶ್ರಣ ಯಂತ್ರೋಪಕರಣಗಳು, ಸ್ಕಾಲ್ಡರ್ಸ್ ಮುಂತಾದುವುಗಳು.

9. ಪೌಲ್ಟ್ರಿ ಕೇಜ್ ಎಂಟರ್‌ಪ್ರೈಸಸ್, 11, ರೆಡ್ಡಿ ಬಿಲ್ಡಿಂಗ್, ಜೆ.ಸಿ. ರೋಡ್, **ಬೆಂಗಳೂರು-560 052**

ಉಪಕರಣಗಳು : ಪಂಜರಗಳು,

10. ಎಸ್. ಆರ್. ಸ್ಟೀಲ್ ಇಂಡಸ್ಟ್ರೀಸ್, ಬಳ್ಳಾರಿ ರಸ್ತೆ, ಹೆಬ್ಬಾಳ, **ಬೆಂಗಳೂರು-560 024**

ಉಪಕರಣಗಳು : ಕಾವುಕಾಪುಗೆಗಳು, ಪಂಜರಗಳು, ಮೇವುಣಿಕಗಳು, ನೀರುಣಿಕಗಳು, ಬೋನುಗೂಡುಗಳು ಮುಂತಾದುವು.

11. ಸ್ಟ್ಯಾಂಡರ್ಡ್ ಇಂಜಿನಿಯರಿಂಗ್ ಅಂಡ್ ಆಟೋಮೊಬೈಲ್ ವರ್ಕ್ಸ್, 13, ಬಾಲಾಜಿರಾವ್ ರಸ್ತೆ, **ಬಳ್ಳಾರಿ**

ಉಪಕರಣಗಳು : ಕಾವುಕಾಪುಗೆಗಳು, ಮೇವುಣಿಕಗಳು, ನೀರುಣಿಕಗಳು, ಮುಂತಾದುವು.

12. ಕಾಸಿ ಟ್ರೇಡರ್ಸ್, ನಂ. 288, ಅರಳೇಪೇಟೆ, **ಬೆಂಗಳೂರು-560 053**

ಉಪಕರಣಗಳು : ಮೊಟ್ಟೆ ತುಂಬುವ ತಟ್ಟೆಗಳು, ರಟ್ಟಿನ ಮೊಟ್ಟೆ ಪೆಟ್ಟಿಗೆ (ಎಗ್‌ಕಾರ್ಟನ್ಸ್)ಗಳು ಇತ್ಯಾದಿಗಳು.

ಅನುಬಂಧ 4

ಕೋಳಿತಳಿಗಳು ದೊರೆಯುವ ಸ್ಥಳಗಳು

ತಳಿ ಹೆಸರು	ದೊರೆಯುವ ಸ್ಥಳ	ಉದ್ದೇಶ
ರಾಣಿ ಶೇವರ್	ದಿ ಇಂಡಿಯಾ ಪೌಲ್ಟ್ರಿ ಫಾರ್ಮ್ಸ್, ವಿಮಲಾ ಬಿಲ್ಡಿಂಗ್, ನಂ. 5, ರೆಸಿಡೆನ್ಸಿ ರಸ್ತೆ, **ಬೆಂಗಳೂರು-560 025**	ಮೊಟ್ಟೆಗೆ/ಮಾಂಸಕ್ಕೆ
ಬಾಬ್‌ಕಾಕ್ ಬಿ-300	ಡೀಜೀ ಹ್ಯಾಚರೀಸ್, 7ನೇ ಮೈಲಿ, ಬಾಗಲೂರು ರಸ್ತೆ, ಗೆದ್ದಲಹಳ್ಳಿ, ಕೊತ್ತನೂರು ಪೋಸ್ಟ್, **ಬೆಂಗಳೂರು-560 045**	ಮೊಟ್ಟೆಗೆ/ಮಾಂಸಕ್ಕೆ
ಪೂನಾ ಪರ್ಲ್ಸ್	ಗಂಗೇನಹಳ್ಳಿ ಮೈನ್ ರೋಡ್, **ಬೆಂಗಳೂರು-560 032**	ಮೊಟ್ಟೆಗೆ/ಮಾಂಸಕ್ಕೆ
ಕೀ ಸ್ಟೋನ್	ಕೆಗ್ ಫಾರ್ಮ್ಸ್, ನಂ. 5, ವಿಮಲಾ ಬಿಲ್ಡಿಂಗ್, ರೆಸಿಡೆನ್ಸಿ ರಸ್ತೆ, **ಬೆಂಗಳೂರು-560 025**	ಮೊಟ್ಟೆಗೆ/ಮಾಂಸಕ್ಕೆ
ಮೈ ಚಿಕ್ಸ್	ಸ್ಟೇಟ್ ಪೌಲ್ಟ್ರಿ ಫಾರ್ಮ್ಸ್, ಹೆಸರಘಟ್ಟ, ಬೆಂಗಳೂರು	ಮೊಟ್ಟೆಗೆ

ಸ್ಟ್ರೈನ್‌ಕ್ರಾಸ್ (ಎಚ್.ಎಚ್-260)	ಕೇಂದ್ರ ಸರ್ಕಾರ ಕೋಳಿ ಸಾಕಾಣಿಕೆ ಕೇಂದ್ರ, ಹೆಸರಘಟ್ಟ, ಬೆಂಗಳೂರು	ಮೊಟ್ಟೆಗೆ
ರಾಸ್	ಕರ್ನಾಟಕ ಹ್ಯಾಚರೀಸ್ 255/ಎ, 2ನೇ ಮುಖ್ಯರಸ್ತೆ, ಗಂಗೇನಹಳ್ಳಿ, **ಬೆಂಗಳೂರು-560 032**	ಮೊಟ್ಟೆಗೆ/ಮಾಂಸಕ್ಕೆ
ಯುಬ್ರೊ	ಯು. ಎ. ಎಸ್. ಪೌಲ್ಟ್ರಿಫಾರ್ಮ್, ಹೆಬ್ಬಾಳ **ಬೆಂಗಳೂರು-560 024**	ಮಾಂಸಕ್ಕೆ
ಲೇಯರ್ಸ್	ಫ್ರೈಸೆಕ್ಸ್. ವಿಮಲಾ ಬಿಲ್ಡಿಂಗ್, ರೆಸಿಡೆನ್ಸಿ ರಸ್ತೆ **ಬೆಂಗಳೂರು-560 025**	ಮೊಟ್ಟೆಗೆ

ಪಾರಿಭಾಷಿಕ ಶಬ್ದಕೋಶ

ಅಗತ್ಯ	Essential	ಊತಕರಚನಾ	Histological
ಅನಗತ್ಯ	Nonessential	ಎಣ್ಣೆ ಲೇಪನ	Oiltreatment
ಅಡ್ಡಕಂಬಿ (ಗೂಡುಕಂಬಿ)	Perch, Roost	ಎಲುಮುರುಟು	Rickets
ಅತೃಪ್ತ	Unsaturated	ಎಳೆಕಣಗುಳಿ	Blastodise
ಅಫಲೀಕೃತ	Unfertilised	ಒಳಪರೋಪಜೀವಿ	Endoparasite
ಅರೆಸ್ವಯಂಚಾಲಿತ	Semi automatic	ಕಚ್ಚಾ	Crude
ಅಂಡಾಣುನಾಳ (ಗರ್ಭನಾಳ)	Oviduct	ಕನಿಷ್ಠ ಶತಾಂಶ	Percentage minimum
ಆರ್ದ್ರತೆ	Humidity	ಕಮಟುನಾತ	Rancidity
ಆಮ್ಲಜನಕ ಸಂಯೋಗ ನಿರೋಧಕ	Antioxidant	ಕಂಬಿ ಚೌಕಟ್ಟು	Grill
ಆರಂಭ ತಿಂಡಿ	Starter feed	ಕಾಪು ಕೊಳವೆ	Conduit
ಆಹಾರ ಅರೆಯುವ ಯಂತ್ರ	Food grinder	ಕಾಲೂತ	Bumble foot
ಆಹಾರ ಮಿಶ್ರಣ ಯಂತ್ರ	Feed mixer	ಕಾವುಕಾಪುಗೆ (ಕಾವು ಬುಟ್ಟಿ)	Brooder
ಆಹಾರ ಸೇರ್ಪಕ	Foodadditive	ಕಾವುಕೊಡುವಿಕೆ	Incubation
ಇಲಿ, ಹೆಗ್ಗಣತಡೆ	Rat proof	ಕಾವುಮರೆ (ಕಾವಳ)	Shade
ಈಲಿ	Liver	ಕಾವುಯಂತ್ರ	Incubator
ಉಡುಗಿಕ	Inhibitor	ಕಿಣ್ವ	Enzyme
ಉಪಕರಣ	Equipment	ಕ್ರಿಮಿನಾಶಕ	Disinfectant
ಉಪಪದಾರ್ಥ	Byproduct	ಕೊಕ್ಕರೆ ರೋಗ	Ranikhet Disease
ಉಷ್ಣತೆ	Temperature	ಕೋಳಿಮರಿಯ ಆಹಾರ	Chick feed
ಊತಕ	Tissue	ಕೋಳಿ ಸಿಡುಬು	Fowl pox
		ಖನಿಜಾಂಶ ಪೂರಕ	Mineral supplement

ಗರಿಕಡ್ಡಿ	Quill
ಗರಿಕಳಚಿಕೆ	Molting
ಗರಿಕೀಳುವ ಸಲಕರಣೆ	Feather plucker
ಗರಿ ಬೆಳವಣಿಗೆ	Feathering
ಗಂತಿ	Tumour!
ಗಾಜುನಳಿ	Ampule
ಗೆಣ್ಣುಗಳ ಮೈ	Segmented body
ಗೋಪುರಾಕಾರದ ಮೇವುಣಿಕ	Hooper feeder
ಚಿಪ್ಪಿನ ಪೊರೆ	Shell membrane
ಚಿಲುಮೆಮಾದರಿಯ ನೀರುಣಿಕ	Fountain type waterer
ಜಂತುಹುಳು	Hookworm
ಜೀವವಸ್ತುಕರಣ ಶಕ್ತಿ	Metabolisable energy
ಜೀವಸತ್ವ	Vitamin
ಡೀಪ್ ಲಿಟ್ಟರ್ (ಆಳಸತ್ತೆ)ಪದ್ಧತಿ	Deeplitter system
ತಳಿ	Breed
ತಳಿ ಸಂಕರಣ ಮನೆ	Breeding house
ತಿನ್ನುವ (ಅಫಲೀಕೃತ) ಮೊಟ್ಟೆ	Table egg
ತೆರಪು ಗರಿಕಳಚಿಕೆ	Vaccation molting
ತೇವಾಂಶ ಸೂಚಿ ಬುರುಡೆ	Wet bulb
ದಪ್ಪ ಈಲಿರೋಗ	Lymphoid leukosis
ದುಂಡು ಹುಳು	Round worm
ಧಮನಿ ಪೆಡಸಣೆ	Arterio sclerosis
ಧೂಪನ	Fumigation
ನಸೆ(ಎಳೆ)ಚರ್ಮ	Blastoderm
ನೀರು ಕುದಿಸುವ ಸಾಧನ	Scalder
ನೀರು ಗಾಜಿನ ವಿಧಾನ	Water glass method
ನೀರುಣಿಕ	Waterer
ನೆಗಡಿ ಸೋಂಕು	Infectious Coryza
ಪರೋಪಜೀವಿ	Parasite
ಪ್ರತಿಜೀವಕ	Antibiotic
ಪ್ರಕ್ಷೇಪ ಗೊಳಿಸುವಿಕೆ	Precipitation
ಪಂಜರ	Cage
ಪೌಷ್ಟಿಕಾಂಶ	Nutrient
ಪ್ರಾಣಿಯ ಗಟ್ಟಿ ಕೊಬ್ಬು (ಪ್ರಾಣಿ ಚರಬಿ)	Animal tallow
ಫಲವಂತಿಕೆ	Fertility
ಫಲೀಕೃತ (ಫಲವತ್ತಾದ)	Fertilised
ಬಟ್ಟಿಇಳಿಸಿದ ನೀರು	Distilled water
ಬಯಲು ಪದ್ಧತಿ	Extensive system
ಬಲಿ	Victim

ಬಂಡಾರ ಪರೆ	Vitelline membrane
ಬೆಳವಣಿಗೆ ತಿಂಡಿ	Finisher feed
ಜೇನುಗೂಡು	Trapnest
ಭ್ರೂಣ	Embryo
ಮನೆ(ಸಾಂದ್ರ)ಯ ಪದ್ಧತಿ	Intensive system
ಮರಳುತುಂಬಿದ ಗೋಪುರಾಕಾರದ ಮೇವುಣಿಕ	Grit hopper
ಮರಿ ಕಾವುಕಾಪು ತಡೆ	Brooder guard
ಮರಿ ಮನೆ	Brooder house
ಮಾಂಸದ ಪುಡಿ	Meat meal
ಮಾಂಸದ ಕೋಳಿ	Broiler
ಮುಂಜೀವಾಣು	Protozoa
ಮೇದಾಮ್ಲ	Fatty acid
ಮೇವುಣಿಕ	Feeder
ಮೊಟ್ಟೆ ಚಿಪ್ಪು	Egg shell
ಮೊಟ್ಟೆ ಬಿಳೀ ಲೋಳೆ	Egg white
ಮೊಟ್ಟೆಯಿಡುವ ಮನೆ	Layer house
ಮೊಟ್ಟೆಯಿಡುತ್ತಿರುವ ಕೋಳಿ ಆಹಾರ	Layers feed
ಮೊಟ್ಟೆ ಹಳದೀ ಲೋಳೆ	Egg Yolk
ರಟ್ಟಿನ ಮೊಟ್ಟೆ ಪೆಟ್ಟಿಗೆ	Egg cartoons
ರಂಜಕ	Phosphorous
ಲಸಿಕೆ	Vaccine
ಲಾಡಿ ಹುಳು	Tape worm
ವಕ್ರಕಾಲು (ಜೋತು ಕಾಲು)	Perosis
ವರ್ಜಿತ	Waste
ವಿದ್ಯುತ್‌ದಾಹಕ	Incinerator
ವೃದ್ಧಿ(ಬೆಳವಣಿಗೆ) ವರ್ಧಕ	Growth promotor
ಶೈತ್ಯಾಗಾರ	Cold storage
ಸಣ್ಣಗರಿ	Juvenile feather
ಸತ್ತೆ	Litter
ಸಮತೋಲ ಆಹಾರ	Balanced ration
ಸ್ವಯಂಚಾಲಿತ	Automatic
ಮೊಟ್ಟೆ ವರ್ಗೀಕರಣ	egg grading
ಸಾಕಣೆ ಮನೆ	Rearing house
ಸೋಂಕು ರೋಗ	Infcctious disease
ಹಸಿಮೊಟ್ಟೆ	Raw egg
ಹಂದಿ ಕೊಬ್ಬು	Lord
ಹೊರ ಪರೋಪಜೀವಿ	Ecto parasite

ಆಧಾರ ಗ್ರಂಥಗಳ ಪಟ್ಟಿ

Bailey, J. W., **Poultryman's manual.** New York : Springer Publishing Company, Inc., 1957.

Biester, H. E., and Schwarte, L. H., **Diseases of Poultry (fifth edition).** New Delhi : Oxford & IBH Publishing Company, 1965.

Mc Ardle, A. A., and Panda, J. N., **A Hand Book for Poultry Officers in India.** New Delhi : Govt. of India, Ministry of Food and Agriculture, Dept. of Agriculture, 1968.

Naidu, P. M. N., **Poultry Keeping in India.** New Delhi : Indian Council of Agricultural Research, 1959.

ಕನ್ನಡ ಅಧ್ಯಯನ ವಿಭಾಗದ ಪ್ರಕಟಣೆಗಳು

		ಸಾದಾ	ಕ್ಯಾಲಿಕೊ
1.	ಸುಭಿಕ್ಷತೆಗೆ ತೆರೆದ ಬಾಗಿಲು (ದ್ವಿತೀಯ ಮುದ್ರಣ)	2–50	
2.	ಪೀಡೆ ನಿರ್ವಹಣೆ (ದ್ವಿತೀಯ ಮುದ್ರಣ)	7–00	
3.	ಕೀಟ ವಿಂಗಡಣೆ	15-00*	
4.	ಕೀಟ ಹತೋಟಿ (ದ್ವಿತೀಯ ಮುದ್ರಣ)	12–50	
5.	ಸಾಕು ಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ, ಭಾಗ-1	6–25	
6.	ತರಕಾರಿ ಬೇಸಾಯ	12–50	
7.	ಕೃಷಿ ರಸಾಯನಶಾಸ್ತ್ರ ಶಬ್ದಾರ್ಥ ನಿರೂಪಣಾವಳಿ	5–00	6–25*
8.	ಮಣ್ಣು ಮತ್ತು ನೀರು ಸಂರಕ್ಷಣಾ ಕೈಪಿಡಿ	15–00	19–00
9.	ರೈತರ ನೆಚ್ಚು ಮೆಚ್ಚಿನ ಮರಗಳು	15–00	19–00
10.	ಸಾಕುಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ, ಭಾಗ-2	11–25	15–00
11.	ಬೀಜಗಣಿತ ಪರಿಚಯ	15–00	20–00
12.	ಮಣ್ಣು ಮತ್ತು ನೀರು ನಿರ್ವಹಣೆ	15–00	19–00*
13.	ಮಣ್ಣು	11–25	15–00*
14.	ಕೃಷಿ ಸಹಕಾರ	6–25	10–00*
15.	ಕಳೆಗಳು ಮತ್ತು ಕಳೆಗಳ ನಿಯಂತ್ರಣ	15–00	19–00*
16.	ಗೋಸಂಪತ್ತು	6–25	10–00*
17.	ಧಾನ್ಯದಾಸ್ತಾನು ತತ್ವ ಮತ್ತು ಪದ್ಧತಿಗಳು	7–50	11–25
18.	ಮಣ್ಣಿನ ಫಲವತ್ತತೆ ಹಾಗೂ ಉತ್ಪಾದಕತೆ	17–50	21–25*
19.	ಪಶುವೈದ್ಯಕೀಯ ವಿಜ್ಞಾನ (ದ್ವಿತೀಯ ಮುದ್ರಣ)	7–50*	11–25*
20.	ಹೊಲದ ಬೆಳೆಗಳಿಗೆ ಬೀಳುವ ಕೆಲವು ಕೀಟಗಳು	8–25*	12–00*
21.	ಟ್ರ್ಯಾಕ್ಟರು ಹಾಗೂ ಅವುಗಳನ್ನು ಸುಸ್ಥಿತಿಯಲ್ಲಿಡುವ ಕ್ರಮಗಳು	7–55*	12–50
22.	ಸಾಕುಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ, ಭಾಗ-3	10–00	15–00
23.	ಕೃಷಿ ವಿಸ್ತರಣ ಶಿಕ್ಷಣ ಪದ್ಧತಿಗಳು	11–25	16–25*
24.	ಕಣಜದ ಪೀಡೆಗಳು ಮತ್ತು ಅವುಗಳ ಹತೋಟಿ	15–00	19–00
25.	ಸಸ್ಯ ವರ್ಗೀಕರಣಶಾಸ್ತ್ರ	15–00	20–00

*ಪ್ರತಿಗಳು ಇಲ್ಲ

		ಸಾದಾ	ಕ್ಯಾಲಿಕೊ
26.	ಪೌಷ್ಟಿಕ ಆಹಾರ (ದ್ವಿತೀಯ ಮುದ್ರಣ)	6-00	16-00
27.	ಕಡಲ ಮೀನುಗಾರಿಕೆ	5-00	10-00
28.	ಧಾನ್ಯದ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	10-75*	
29.	ಕಬ್ಬಿನ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	4-50	
30.	ಶಿಶುವಿಹಾರ (ದ್ವಿತೀಯ ಮುದ್ರಣ)	6-00	
31.	ಬೇಳೆಕಾಳು ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	7-50	
32.	ಕೃಷಿ ಎಂಜಿನಿಯರಿಂಗ್ ಪಠ್ಯಪುಸ್ತಕ ಸಮೀಕ್ಷಣೆ	9-50	14-00
33.	ಇಲಿಗಳು ಹಾಗೂ ಅವುಗಳ ನಿಯಂತ್ರಣ	9-50	13-25
34.	ತರಕಾರಿ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	12-50	
35.	ಹಣ್ಣಿನ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	16-25	
36.	ಕ್ಯಾನಿಂಗ್-ಆಹಾರ ಜೋಪಾಸನೆಯ ಒಂದು ಆಧುನಿಕ ವಿಧಾನ	16-25	21-25
37.	ಅಲಂಕಾರ ಸಸ್ಯಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	10-75	
38.	ಜೀವಕೋಶ ಕ್ರಿಯಾಶಾಸ್ತ್ರ ಮತ್ತು ಜೀವರಸಾಯನ ಶಾಸ್ತ್ರ	20-00	25-00
39.	ಎಲುಬುಶಾಸ್ತ್ರ	11-25	16-25
40.	ಕಡಲೆಕಾಯಿ	10-00	15-00
41.	ಗಣಿತಶಾಸ್ತ್ರ ಪ್ರವೇಶಿಕೆ, ಭಾಗ-1	25-00	30-00
42.	ತೆಂಗು, ಅಡಕೆ, ಇತರ ಗರಿಮರಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	9-00	
43.	ಪ್ಲಾಂಟೇಶನ್ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	12-00	
44.	ಭಾರತದಲ್ಲಿ ಕೋಳಿಸಾಕಣೆ	22-50	27-50
45.	ಕಲ್ಲುನಾರು (ಭೂತಾಳೆ) ಗಿಡಗಳು	5-00	

* ಪ್ರತಿಗಳು ತೀರಿವೆ

		ಸಾದಾ	ಕ್ಯಾಲಿಕೊ
46.	ಎಣ್ಣೆಬೀಜ (ಕಾಳು)ಗಳ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	7-50	
47.	ಹತ್ತಿ(ನೂಲು), ಹಾಗೂ ನಾರಿನ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	10-00	
48.	ಹಸುರೆಲೆ ಗೊಬ್ಬರ, ಮೇವು ಹಾಗೂ ಉಪ್ಪುನೇರಿಳೆ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	5-00	
49.	ಮಾದಕ(ಹೊಗೆಸೊಪ್ಪು, ಗಾಂಜ) ಮತ್ತು ಸಾಂಬಾರ (ಅರಿಶಿನ ಇತ್ಯಾದಿ) ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	3-75	
50.	ಕೃಷಿ ಉಪಯೋಗಿ ಕೆಲವು ವೃಕ್ಷಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	4-50	
51.	ಸಸ್ಯಸಾಮ್ರಾಜ್ಯ	25-00	30-00
52.	ಮೀನುಗಾರಿಕೆ	10-00	15-00
53.	ಭಾರತೀಯ ಗ್ರಾಮೀಣ ಯುವಕ ರೈತಸಂಘಗಳ ಸಂಘಟನೆ	8-25	13-25
54.	ಗಣಿತಶಾಸ್ತ್ರ ಪ್ರವೇಶಿಕೆ, ಭಾಗ-2	20-00	25-00
55.	ಸಾವಯವ ರಸಾಯನಶಾಸ್ತ್ರ ಪ್ರವೇಶಿಕೆ	14-00	19-00
56.	ಪಶುರೋಗಗಳು ಮತ್ತು ಸಾರ್ವಜನಿಕ ಆರೋಗ್ಯ	12-50	17-50
57.	ಭಾರತದಲ್ಲಿ ಜೇನುಸಾಕಣೆ	20-00	25-00
58.	ಸಾಕುಪ್ರಾಣಿ ಮೂಲದ ಸೋಂಕುರೋಗಗಳು	7-50	12-00
59.	ದೊಡ್ಡರೋಗ	5-00	
60.	ಮೂಲ ಅರ್ಥಶಾಸ್ತ್ರ	19-00	24-00
61.	ಜೇನುಸಾಕಣೆ	17-50	22-50
62.	ಕೃಷಿರಸಾಯನಶಾಸ್ತ್ರ ಪಾರಿಭಾಷಿಕ ಶಬ್ದಕೋಶ	3-25	
63.	ಮಣ್ಣು ನಿರ್ವಹಣೆ, ಸಂರಕ್ಷಣೆ ಹಾಗೂ ಬೆಳೆಉತ್ಪಾದನೆ	20-00	25-00
64.	ಕೃಷಿ ಅನಿಲಯಂತ್ರ ಹಾಗೂ ಟ್ರ್ಯಾಕ್ಟರುಗಳು		60-00
65.	ಸಹಕಾರಿ ಬೇಸಾಯ	18-00	23-00
66.	ಕೋಶ	20-00	25-00
67.	ತರಕಾರಿ ಬೆಳೆಗಳ ಕೀಟ ನಿಯಂತ್ರಣ	12-50	19-00
68.	ಸಾಕುಪ್ರಾಣಿಗಳ ಭ್ರೂಣಶಾಸ್ತ್ರ	20-00	25-00

		ಸಾದಾ	ಕ್ಯಾಲಿಕೊ
69.	ಸಂಸ್ಕೃತಿಯ ರೂಪಿಕೆಗಳು	17.00	22.00
70.	ರೇಖಾತ್ಮಕ ಬೀಜಗಣಿತ	30.00	35.00
71.	ಹುಲಿ–ಭಾರತದ ರಾಷ್ಟ್ರೀಯ ಮೃಗ	20.00	24.00
72.	ನೀರಾವರಿ ತತ್ವ ಹಾಗೂ ಪದ್ಧತಿಗಳು	45.00	50.00
73.	ಮಣ್ಣು ಶಿಲೀಂಧ್ರ ಕೈಪಿಡಿ	45.00	50.00
74.	ಪ್ರಾಣಿಗಳ ವರ್ತನೆ	17.00	22.00
75.	ಬೆಳೆ ಕೀಟಗಳು ಮತ್ತು ಅವುಗಳ ಹತೋಟಿ		125.00*
76.	ಸಸ್ಯತಳಿ ಅಭಿವೃದ್ಧಿ ವಿಧಾನಗಳು		60.00
77.	ಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ	17.00	22.00
78.	ಆಹಾರ ಸೂಕ್ಷ್ಮಜೀವಿ ವಿಜ್ಞಾನದಲ್ಲಿ ಪ್ರಾಮುಖ್ಯತೆ ಗಳಿಸಿರುವ ಸೂಕ್ಷ್ಮಜೀವಿಗಳು (ಆಹಾರ ಸೂಕ್ಷ್ಮಜೀವಿ ವಿಜ್ಞಾನ, ಭಾಗ-1)	8.50	
79.	ಕೆಲವು ಸಸ್ಯಗಳ ವೈಜ್ಞಾನಿಕ, ಕುಟುಂಬ, ಇಂಗ್ಲಿಷ್ ಹಾಗೂ ಕನ್ನಡ ಹೆಸರುಗಳು	15.00	20.00
80.	ಮೀನು ಮತ್ತು ಇತರ ಸಾಗರೋತ್ಪನ್ನ ಆಹಾರಗಳ ಶೀತ ಜೋಪಾಸನೆ	20.00	25.00
81.	ಸಾಕುಪ್ರಾಣಿಗಳ ಕೀಲು ಮತ್ತು ಸ್ನಾಯುಶಾಸ್ತ್ರ	20.00	25.00
82.	ಕುರಿಸಾಕಣೆ	8.00	13.00
83.	ಜೋಳ	10.00	15.00
84.	ಹಂದಿಯ ಭ್ರೂಣಶಾಸ್ತ್ರ	35.00	40.00
85.	ಆಧುನಿಕ ಹೈನಾಗಾರ ದನಗಳ ನಿರ್ವಹಣೆ	25.00	30.00
86.	ದಾಸ್ತಾನು ಕೀಟಗಳು ಹಾಗೂ ಅವುಗಳ ಹತೋಟಿ	8.00	
87.	ಮನೆ ಕೀಟಗಳು, ಇತರ ಪೀಡೆಗಳು ಹಾಗೂ ಅವುಗಳ ಹತೋಟಿ	8.00	
88.	ಜಾನುವಾರು ಮತ್ತು ಮನುಷ್ಯರಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	10.00	
89.	ತೆಂಗಿನ ಬೇಸಾಯ	9.00	14.00
90.	ಆಹಾರ ರಕ್ಷಣೆ ಮತ್ತು ಕೆಡುವಿಕೆಯ ತತ್ವಗಳು (ಆಹಾರ ಸೂಕ್ಷ್ಮಜೀವಿ ವಿಜ್ಞಾನ, ಭಾಗ-2)	11.00	

---

* ಪ್ರತಿಗಳು ತೀರಿವೆ

		ಸಾದಾ	ಕ್ಯಾಲಿಕೊ
91.	ಸೂಕ್ಷ್ಮಜೀವಿಶಾಸ್ತ್ರದ ಬೆಳವಣಿಗೆ ಹಾಗೂ ವಿಧಾನಗಳು(ಸೂಕ್ಷ್ಮಜೀವಿ ಜಗತ್ತು, ಭಾಗ-1)	17.00	
92.	ಕೃಷಿ ಸಸ್ಯಶಾಸ್ತ್ರ ಪಾರಿಭಾಷಿಕ ಶಬ್ದಕೋಶ	2.00	
93.	ಹಸುರು ಸಸ್ಯದ ಜೀವನ	12.00	17.00
94.	ಸೂಕ್ಷ್ಮಜೀವಿಗಳ ಚಯಾಪಚಯ (ಜೀವದ್ರವ್ಯ ಪರಿಣಾಮ) ಕ್ರಿಯೆಗಳು, ರಚನೆ ಮತ್ತು ಕಾರ್ಯ ಸಂಬಂಧ (ಸೂಕ್ಷ್ಮಜೀವಿ ಜಗತ್ತು, ಭಾಗ-2)	18.00	
95.	ವಿವಿಧ ಆಹಾರಗಳು ಕಲುಷಿತವಾಗುವಿಕೆ, ಕೆಡುವಿಕೆ ಮತ್ತುರಕ್ಷಣೆ (ಆಹಾರ ಸೂಕ್ಷ್ಮಜೀವಿ ವಿಜ್ಞಾನ, ಭಾಗ-3)	15.00	
96.	ಸೂಕ್ಷ್ಮಜೀವಿಗಳಿಂದ ಉತ್ಪತ್ತಿಯಾದ ಕಿಣ್ವಗಳು ಮತ್ತು ಆಹಾರಗಳು(ಆಹಾರ ಸೂಕ್ಷ್ಮಜೀವಿ ವಿಜ್ಞಾನ, ಭಾಗ-4)	7.00	
97.	ರೋಗಕ್ಕೆ ಸಂಬಂಧಪಟ್ಟಂತೆ ಆಹಾರಗಳು (ಆಹಾರ ಸೂಕ್ಷ್ಮಜೀವಿ ವಿಜ್ಞಾನ, ಭಾಗ-5)	5.00	
98.	ಆಹಾರ ನೈರ್ಮಲ್ಯ, ಹತೋಟಿ ಮತ್ತು ಪರೀಕ್ಷೆ (ಆಹಾರ ಸೂಕ್ಷ್ಮಜೀವಿ ವಿಜ್ಞಾನ, ಭಾಗ-6)	7.00	
99.	ಕೃಷಿ ಕರ್ನಾಟಕ	12.50	17.50
100.	ದಾಸ್ತಾನು, ಮನೆ, ಜಾನುವಾರು ಹಾಗೂ ಮನುಷ್ಯರಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		35.00
101.	ಮತ್ಸ್ಯಶಾಸ್ತ್ರ		50.00
102.	ಹಣ್ಣು ಮತ್ತು ತರಕಾರಿ ಸಂರಕ್ಷಣೆ	35.00	40.00
103.	ಫಾರ್ಮ್ ನಿರ್ವಹಣೆ ಅರ್ಥಶಾಸ್ತ್ರ		60.00
104.	ಆಹಾರ ಸೂಕ್ಷ್ಮ ಜೀವಿವಿಜ್ಞಾನ		62.50
105.	ಭಾರತದಲ್ಲಿ ಸಾಮಾಜಿಕ ಅರಣ್ಯಶಾಸ್ತ್ರ	25.00	35.00
106.	ಬತ್ತದ ಬೇಸಾಯ	15.00	25.00
107.	ಧಾನ್ಯದ ಬೆಳೆಗಳಿಗೆ ಬೀಳುವ ರೋಗಗಳು ಹಾಗೂ ಅವುಗಳ ಹತೋಟಿ	12.00	17.00
108.	ವ್ಯವಸಾಯ ಮುನ್ನಡೆ	*18.00*	*28.00*

		ಸಾದಾ	ಕ್ಯಾಲಿಕೊ
109.	ಭೂಸಾರ ಸಂರಕ್ಷಣೆ	7-50	17-50
110.	ಕೀಟಶಾಸ್ತ್ರ ಪಾರಿಭಾಷಿಕ ಶಬ್ದಕೋಶ	3-50	
111.	ಸಚಿತ್ರ ಬತ್ತದ ಬೆಳೆ	12-50	22-50
112.	ಬಿಳಿಕಸ	9-00	19-00
113.	ತ್ರಿಕೋನಮಿತಿ	ಅಚ್ಚಿನಲ್ಲಿದೆ	
114.	ಸಂತಾನೋತ್ಪತ್ತಿ ಶರೀರಕ್ರಿಯಾಶಾಸ್ತ್ರ	"	
115.	ಕೃಷಿ ಯಂತ್ರೋಪಕರಣಗಳು	"	
116.	ವೈರಸ್‌ಗಳು (ಸೂಕ್ಷ್ಮಜೀವಿಜಗತ್ತು, ಭಾಗ-3)	"	
117.	ಸೂಕ್ಷ್ಮಜೀವಿಗಳಲ್ಲಿ ಉತ್ಪರಿವರ್ತನೆ ಹಾಗೂ ಅನುವಂಶೀಯ ಗುಣಗಳ ಪುನರ್ ಸಂಯೋಜನೆ (ಸೂಕ್ಷ್ಮಜೀವಿಜಗತ್ತು, ಭಾಗ-4)	"	
118.	ಬ್ಯಾಕ್ಟೀರಿಯಗಳ ವರ್ಗೀಕರಣ ಮತ್ತು ವಿವರಣೆ (ಭಾಗ-5)	"	
119.	ಸೂಕ್ಷ್ಮಜೀವಿಗಳ ಪರಿಸರಶಾಸ್ತ್ರ ಮತ್ತು ಸೋಂಕು ರಕ್ಷಣಾ ಶಾಸ್ತ್ರ (ಭಾಗ-6)	"	
120.	ಮಾನವಕಲ್ಯಾಣಕ್ಕೆ ಸೂಕ್ಷ್ಮಜೀವಿಗಳ ಬಳಕೆ (ಭಾಗ-7)	"	
121.	ಸೂಕ್ಷ್ಮ ಜೀವಿ ಜಗತ್ತು	"	
122.	ಸಾವಯವ ಕೀಡೆನಾಶಕಗಳ ರಸಾಯನ ವಿಜ್ಞಾನ	"	
123.	ಆಧುನಿಕ ಆಹಾರ ಸೂಕ್ಷ್ಮಜೀವಿ ವಿಜ್ಞಾನ	"	
124.	ಹಣ್ಣಿನ ಬೆಳೆಗಳ ಕೀಟನಿಯಂತ್ರಣ	"	